7. ವಿತ್ತೀಯ ಕಾರ್ಯಕಲಾಪಗಳು 1996-97ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ

+ **ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಯವರು):-** ಮಾನ್ಯ ಸಭಾಧ್ಯಕ್ಷರೇ, ಕಳೆದ 21 ದಿನಗಳ ಅಧಿವೇಶನದ ನಡವಳಿಕೆಯ ಕಾಲದಲ್ಲಿ ಸರಕಾರದ ವಿವಿಧ ಇಲಾಖೆಗಳ ಬೇಡಿಕೆಗಳ ಮೇಲೆ ನಡೆದ ಚರ್ಚೆ, ಆ ಚರ್ಚೆಯ ಸಾರಾಂಶ, ಮತ್ತು ಅದಕ್ಕೆ ಆಯಾಯಾ ಇಲಾಖೆಗಳಿಂದ ಕೊಡಬೇಕಾಗಿರತಕ್ಕಂಥ ಉತ್ತರಗಳನ್ನು ಈ ಒಂದು ಸಮಯದಲ್ಲಿ ನನಗೆ ಪೂರ್ಣವಾಗಿ ಕೊಡಲು ಆಗದೇ ಇರಬಹುದು. ನನ್ನ ಸ್ನೇಹಿತರು, ನನ್ನ ಸಂಪುಟದ ಸಚಿವರುಗಳು, ಚರ್ಚೆಯ ಕಾಲದಲ್ಲಿ ಅವರ ತಿಳುವಳಿಕೆಗೆ ಬಂದಂಥ ವಿಚಾರಗಳನ್ನು ಸಾಧ್ಯವಾದಷ್ಟು ರೀತಿಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಸರಕಾರ ಏನು ಮಾಡಿದೆ ಎಂಬ ಬಗ್ಗೆ ತಿಳಿಸಿದ್ದಾರೆ. ಆ ಚರ್ಚಾ ಸಮಯದಲ್ಲಿ ಕೆಲವು ವಿರೋಧಪಕ್ಷದ ನಾಯಕರು ಮತ್ತು ಇತರ ಪಕ್ಷಗಳ ನಾಯಕರು ಹೇಳುವಾಗ ನಾನು ಕುಳಿತು ಕೇಳಿದ್ದೇನೆ. ನೇರವಾಗಿ ನನಗೆ ವಿದ್ಯುತ್ ಮತ್ತು ಗೃಹಖಾತೆಗಳು ನನ್ನ ಮೇಲ್ವಿಚಾರಣೆಯಲ್ಲಿ ನಡೆಯುತ್ತಾ ಇದೆ. ಈಗಲೂ ಅದಕ್ಕೆ ಸಂಬಂಧಪಟ್ಟ ಹಾಗೆ ಪ್ರಶ್ನೆ ಬಂದರೆ ಉತ್ತರವನ್ನು ನಾನು ಕೊಡುತ್ತೇನೆ. ಆದರೆ ಅದಕ್ಕೆ ಸಂಬಂಧಪಟ್ಟ ಹಾಗೆ ಸಾಮಾನ್ಯ ಆಡಳಿತದ ಬಗ್ಗೆ ಮಾನ್ಯ ಹಿರಿಯ ನಾಯಕರುಗಳು ಹೇಳಿರುವ ಮಾತುಗಳನ್ನು ಕೇಳಿದ್ದೇನೆ. ಒಂದು ಸರಕಾರದಲ್ಲಿ ಏನು ಆಗಬೇಕು? ಸರಕಾರದಲ್ಲಿ ಏನು ಆಗುತ್ತಾ ಇದೆ? ಅಧಿಕಾರಿಗಳ ಮಟ್ಟದಲ್ಲಿ ಏನಾಗುತ್ತಿದೆ ಇತ್ಯಾದಿ ವಿಷಯಗಳ ಬಗ್ಗೆ ಮಾನ್ಯ ನಂಜೇಗೌಡರು ಕೆಲವು ಪದಗಳನ್ನು ಬಹಳ ಅರ್ಥಪೂರ್ಣವಾಗಿ ಉಪಯೋಗಿಸಿದ್ದಾರೆ. ಆಲ್ ಇಂಡಿಯಾ ಸರ್ವೀಸಿನವರು ನಮ್ಮಲ್ಲಿ ಬಹಳ ಜನವಾಗಿ ಕನ್ನಡತನ, ನಾಡಿನ ಏಳಿಗೆ ಬಗ್ಗೆ ನಾವು ನಿರೀಕ್ಷಿಸಿದಷ್ಟು ಸೇವೆ ಆಗುತ್ತಿಲ್ಲ ಸಾಧ್ಯವಾದಷ್ಟೂ ಸರ್ಕಾರಿ ಅಧಿಕಾರಿಗಳ ಉನ್ನತ ಶ್ರೇಣಿಗಳಲ್ಲಿ ಕರ್ನಾಟಕದವರನ್ನು ಸೇರಿಸುತ್ತಾ ಹೋಗುವುದು ಒಳ್ಳೆಯದೆಂದು ಹೇಳಿದರು. ಹಿಂದೆ ಕಾಮರಾಜನಾಥಾರ್‌ರವರು ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದಾಗ ಒಂದು ಮಾತು ಹೇಳಿದ್ದರು, ರಾಜಾಜಿಯವರು ಹೇಳಿದ್ದು ಬಹಳ ಹಿಂದಿನದು All India Service is No. 1 PWD is No. 2 ಅಂತಾದ್ದಲ್ಲ, ಕಾಮರಾಜ್‌ರವರ ಕಾಲದಲ್ಲಿ ಆದ ಕೆಲವು ತಮಿಳುನಾಡಿನ ಬೆಳವಣಿಗೆಗಳು ಮತ್ತು ನಮ್ಮ ರಾಜ್ಯದಲ್ಲಿ ಒಳ್ಳೆಯ ಆಡಳಿತ ಕೊಟ್ಟ ಶ್ರೀ ಕೆ. ಹನುಮಂತಯ್ಯನವರ ಕಾಲದಲ್ಲಿ ಬಂದ ಆಡಳಿತ ಸುಧಾರಣ ವರದಿ ಗಮನಿಸಿ ಇವತ್ತಿನ ಸ್ಥಿತಿ ಬಗ್ಗೆ ಸೂಕ್ಷ್ಮವಾದ ಕೆಲವು ವಿಚಾರಗಳನ್ನು ಹೇಳುತ್ತೇನೆ. It may not strictly relate to administrative service ನಂಜೇಗೌಡರು ಮಹರ್ಷಿಗಳು ವಸಿಷ್ಠ ಮತ್ತು ವಿಶ್ವಾಮಿತ್ರ ಗೋತ್ರದವರು ಎಂದು ಮಾತ್ರ ಹೇಳಿದರು. ನಾನು ಆ ಬಗ್ಗೆ ಬೇರೆ ಸಾಹಿತ್ಯ ನೋಡಿದಾಗ ಮಹರ್ಷಿಗಳು ಎಂದು ಕರೆಸಿಕೊಳ್ಳುವುದಕ್ಕೆ ಕೆಲವು ನಿಬಂಧನೆಗಳಿವೆ, ಎಲ್ಲರನ್ನೂ ಮಹರ್ಷಿ ಎಂದು ಕರೆಯುವುದಲ್ಲ. ವಸಿಷ್ಠರು ಅತ್ಯಂತ ಶ್ರೇಷ್ಟ ಬ್ರಾಹ್ಮಣದ ಕುಲಾಧಿಪತಿಗಳು, ಅವರೇ ಮಹರ್ಷಿ, ಉಳಿದವರಿಗೆಲ್ಲಾ ಮಹರ್ಷಿ ಎನ್ನಬಾರದು ಅಂತಲೂ ಇದೆ, ಆದರೆ ಕೊನೆಗೆ ಏನಾಗುತ್ತದೆ, ಜ್ಞಾನದಿಂದ ಯಾರು ಬದಲಾವಣೆ ಆಗುತ್ತಾರೆ ಅವರು ಎಲ್ಲೇ ಹುಟ್ಟಿರಲಿ ಅವರು ಋಷಿಗಳಾಗಬಹುದು, ಜ್ಞಾನಾರ್ಜನೆಯಿಂದ

ಬ್ರಾಹ್ಮಣನಾಗಬಹುದು ನಡವಳಿಕೆಯಿಂದ ಆಗಬಹುದು ಸಂಸ್ಕೃತಿಯಿಂದ ಆಗಬಹುದು ಎಂದು ಬ್ರಾಹ್ಮಣಿಕೆಗೆ ಸುಧಾರಣೆ ಮಾಡುತ್ತಾ ಬ್ರಾಹ್ಮಣಿಕೆಗೆ ಯಾರಾದರೂ ಹೋಗಬಹುದೆಂಬುದು ಸಾಧ್ಯ-ವಿದೆ you can attain Brahminism ಆದರೆ ಮಹರ್ಷಿ ಕಾಲದಲ್ಲಿ ಅದು ಯಾರೂ ಅಟೈನ್ ಮಾಡುವುದಕ್ಕೇ ಸಾಧ್ಯವಿರಲಿಲ್ಲ. ಅವನು ಎಷ್ಟೇ ದೊಡ್ಡವನಾಗಿದ್ದರೂ ಅವನು ಎಂಥಾ ತಪಸ್ವಿ-ಯಾಗಿದ್ದರೂ ತ್ಯಾಗಿಯಾಗಿದ್ದರೂ ಮಹರ್ಷಿಯಾಗುವುದಕ್ಕೆ ಆಗುತ್ತಿರಲಿಲ್ಲ. ಅದರ ವಿರುದ್ಧವೇ ಈ ವಿಶ್ವಾಮಿತ್ರ ಹೋರಾಡಿದ್ದು. ವಿಶ್ವಾಮಿತ್ರ ಕ್ಷತ್ರಿಯ, ಆತ ರಾಜರು ಮಾಡಬಹುದಾದ ಎಲ್ಲಾ ರಾಜ-ಕಾರಣ ಮಾಡಿದ್ದರೂ ನಾನೂ ಒಬ್ಬ ಮಹರ್ಷಿಯಾಗಬೇಕೆಂದು ಆಗಿನ ಕಾಲದ ಎಲ್ಲಾ ದೇವರು-ಗಳನ್ನು ಒಲಿಸಲು ಹೊರಟ. ಆದರೂ ಆತನಿಗೆ ಮಹರ್ಷಿ ಪಟ್ಟ ಕೊಡಲಿಲ್ಲ. ಯಾವಾಗ ಬೇಡರ ಜನಾಂಗದ ವಾಲ್ಮೀಕಿ ಬಂದು ತನ್ನ ಕುಲಕ್ಕೆ ಸೇರಿದ ವಿಷಯವೆಲ್ಲಾ ಬಿಟ್ಟು ರಾಮಾಯಣದಂತಹ ಮಹಾಕವಿತೆ ರಚನೆ ಮಾಡಲು ಬಂದಾಗ ಆತನನ್ನೂ ಋಷಿ ಅಂದರು, ಏನೂ ಕೆಲಸವಿಲ್ಲದವರು ಋಷಿ ಮಹರ್ಷಿಗಳಾಗಲು ಪ್ರಯತ್ನಿಸುವುದು ಸನಾತನ ಕಾಲದಿಂದ, ಪ್ರಪಂಚದ ಬೇರೆ ಬೇರೆ ಭಾಗ-ಗಳಲ್ಲಿ ಬೇರೆ ಹೆಸರುಗಳಿಂದ ಕರೆಯಬಹುದು ಆದರೆ ವಸಿಷ್ಠ, ವಿಶ್ವಾಮಿತ್ರ, ವಾಲ್ಮೀಕಿ ಗೋತ್ರಗಳೇನಿವೆ ಇವು ಒಂದು. ವಸಿಷ್ಠರು ಉನ್ನತ ಶ್ರೇಣಿಗಿದ್ದರೂ ಬಹಳ ಕಠೋರವಾಗಿರುತ್ತಾರೆ. ಬಹಳ ನಿಷ್ಠೂರ-ವಾಗಿರುತ್ತಾರೆ, ಎಷ್ಟು ನಿಷ್ಠುರ ಎಂದರೆ ಒಂದೊಂದು ಸಲ ಸತ್ಯಕ್ಕೆ ಅಪಚಾರ ಮಾಡುವಷ್ಟು ನಿಷ್ಠುರ. ಸತ್ಯ ಪ್ರತಿಪಾದನೆ ಮಾಡುತ್ತಾ ಕೆಲವು ದೊಡ್ಡ ಸಂದರ್ಭದಲ್ಲಿ ಧರ್ಮಕ್ಕೆ ಒಂದು ಟ್ವಿಸ್ಟ್ ಕೊಟ್ಟು ಆಪದ್ಧರ್ಮವೆಂದು ಕರೆದರು. ಸನಾತನ ಮತ್ತು ಜಾತಿ ಪದ್ಧತಿಗಳು ಬಂದಿರುವ ಭಾರತ ದೇಶದಲ್ಲಿ, ಇದನ್ನು ನಾನು ಜಪಾನ್‌ಗೆ ಹೇಳುವುದಿಲ್ಲ. ಅಲ್ಲಿನ ಸ್ಟ್ರಕ್ಚರ್ ಹೇಗೆ ಬಂತು, ಅದು ಅಮೆರಿಕಕ್ಕೂ ಹೋಲಿಕೆ ಅಲ್ಲ. ಅಮೇರಿಕಾದ್ದೆಲ್ಲಾ 200-300 ವರ್ಷದ್ದು. ಅಲ್ಲಿ ನೀಗ್ರೋಗಳು ಹೇಗೆ ಗುಲಾಮಿ-ರಾಗಿದ್ದರು ಹೇಗೆ ಅಬ್‌ಸಾರ್ಬ್ ಆದರು ಎಂಬುದೆಲ್ಲಾ ಇದೆ. ಯಾವುದೇ ದೇಶಕ್ಕೆ ಹೋಲಿಕೆ ಮಾಡಲಾಗದ ವಿಶಿಷ್ಟವಾದ ಸಿಸ್ಟಂ ಭಾರತದಲ್ಲಿ ಬಂತು. ಈ ಪದ್ಧತಿಯಡಿ 50 ವರ್ಷದ ಸ್ವಯಂ ಆಡಳಿತದ ನಂತರವೂ ಎಷ್ಟರಮಟ್ಟಿಗೆ ಆಡಳಿತ ನಡೆಸುವುದನ್ನು ನಾವು ಕಲಿತಿದ್ದೇವೆ ಎಂಬುದನ್ನು ನೋಡಬೇಕು. ಏತಕ್ಕೆಂದರೆ ಹಿಂದೆ ಕೆಲವರು ಹೇಳುತ್ತಿದ್ದರು, ಇಂಡಿಯಾದವರಿಗೆ ಆಳುವುದಕ್ಕೇ ಬರುವುದಿಲ್ಲ ಅವರಿಗ್ಯಾಕೆ ಫ್ರೀಡಂ ಕೊಡಬೇಕೆಂದು. ಈಗ ತಾಲ್ಲೂಕು ಆಫೀಸುಗಳಲ್ಲಿ ನಡೆಯುವು-ದನ್ನು ನೋಡಿದರೆ ಅವರು ಹೇಳಿದುದ್ದು ಸರಿ ಅನ್ನಿಸುತ್ತದೆ. ನಮ್ಮನ್ನು ಆಳಲು ನಮ್ಮ ಜನರ ಕಷ್ಟಗಳನ್ನು ಅರಿತು ಅವನ್ನು ನಿವಾರಿಸಲು ಒಂದು ಮೆಷಿನರಿ ಇವಾಲ್ವ್ ಆಗಿಲ್ಲ ಆ ತರಹ ಪೊಲಿಟಿಕಲ್ ಸಿಸ್ಟಂ ಇವಾಲ್ವಾಗಿಲ್ಲ, ಇಂತಹ ಪೊಲಿಟಿಕಲ್ ಸಿಸ್ಟಂ ಇವಾಲ್ವಾಗದೆ ಚೈನಾದಲ್ಲಿ ಹೀಗೆ ಮಾಡುತ್ತಾರೆ ಜಪಾನ್‌ನಲ್ಲಿ ಹಾಗೆ ಮಾಡುತ್ತಾರೆ ಅಂದರೆ ಜಪಾನಿನಲ್ಲಿ ಶ್ರೀಮಂತಿಕೆ ಶಿಸ್ತಿದೆ discipline of affluence ಇದೆ; ಚೈನಾದಲ್ಲಿ ಪೊಲಿಟಿಕಲ್ ಡಿಸಿಪ್ಲಿನಿದೆ, ಎರಡನೇ ಮಗು ಆದರೆ ಜೈಲಿಗೆ ಹೋಗುತ್ತಾನೆ. ಅದಕ್ಕಾಗಿ ಗರ್ಭಪಾತ ಮಾಡಿಸಿಬಿಡುತ್ತಾರೆ. ನಮ್ಮಲ್ಲಿ 1947ರಲ್ಲಿದ್ದ ರಾಜಕೀಯ ಆಥಾರಿಟಿ ಈಗ ಯಾವುದೇ ರಾಜಕೀಯ ಪಕ್ಷ ರಾಜ್ಯ ಮಟ್ಟದ್ದಾಗಲಿ ರಾಷ್ಟ್ರ ಮಟ್ಟದಾಗಲಿ ಇಂಥ

ಶಿಸ್ತನ್ನು ದೇಶದಲ್ಲಿ ಪರಿಪಾಲಿಸುತ್ತೇನೆ ಇಂಥ ಆಡಳಿತ ಕೊಡುತ್ತೇನೆ ಎಂದೆಲ್ಲಾ ಮಾತಾಡಿ ಅದಕ್ಕೆ ನೀರು ಹಾಕಿ ಮಜ್ಜಿಗೆ ಎಷ್ಟಿತ್ತು ಎಂದು ಗೊತ್ತಾಗದಿರುವುದಷ್ಟು ನೀರು ಹಾಕಿಬಿಟ್ಟಿದ್ದೇವೆ. ಲಂಚ, ಜಾತೀಯತೆ, ಇನ್ನು ಬಡವರ ಬಗ್ಗೆ ಅಂತೂ ಅಧ್ಯಕ್ಷರೇ ಕಣ್ಣೀರು ಹಾಕಿ ಹಾಕಿ ನಮ್ಮ ದೇಶದಲ್ಲಿ ಬಡವರ ಹಿಂದುಳಿದವರ ಗತಿ ಏನಾಗಿದೆ ಎಂಬುದನ್ನು ಯೋಚನೆ ಮಾಡಬೇಕು. ವಸಿಷ್ಟ, ವಿಶ್ವಾಮಿತ್ರ, ವಾಲ್ಮೀಕಿಗಳ ದೇಶ ಇದು, ಇದು ಏಕೆ ಹೀಗಿದೆ? ನಾನು ನಿಮ್ಮ ಪಾರ್ಟಿ ನಮ್ಮ ಪಾರ್ಟಿ ಎಂದು ಹೇಳುತ್ತಿಲ್ಲ evolution of political system in India after freedom ನಾವು ರಾಜಕೀಯ ಸ್ವಾತಂತ್ರ್ಯವನ್ನು ನಿರ್ದಿಷ್ಟವಾಗಿ ಒಂದು ಗುರಿ ಕಡೆಗೆ ತೆಗೆದುಕೊಂಡು ಹೋದ ಉದಾಹರಣೆ ಒಂದು ನಮ್ಮಲ್ಲಿಲ್ಲ. ನಾನು ಈ ಮೂರನ್ನು ಮಾತ್ರ ತಮಗೆ ಮನವರಿಕೆ ಮಾಡಿಕೊಡುತ್ತೇನೆ, Social structure, Political system and Economic situation ಇವು ಮೂರೂ ಒಂದಕ್ಕೊಂದು ಆಧಾರ. ಇದನ್ನು ತೆಗೆದು ಅದನ್ನು ಹೇಳುವುದಕ್ಕೆ ಬರುವುದಿಲ್ಲ; ಅದನ್ನು ತೆಗೆದು ಇದನ್ನು ಹೇಳುವುದಕ್ಕೆ ಬರುವುದಿಲ್ಲ. ಇವತ್ತಿನ ಸೋಷಿಯಲ್ ಸಿಸ್ಟಂನಲ್ಲಿ ಮೂಲತಃ ಎರಡು ಒಂದು ಜಾತಿ ಮತ್ತು ವರ್ಗ. ವರ್ಗ ಅಂದರೇನು? ಟಾಟಾ ಬಿರ್ಲಾ ಎಲ್ಲಾ ಒಂದು ವರ್ಗ; ಜಾತಿ ಅಂದರೇನು ಲಿಂಗಾಯಿತರವನು ಕುರುಬರವನು ಎಂದು ಹೇಳಿಕೊಳ್ಳುವುದು ಜಾತಿ. ಇನ್ನೊಂದು ದೊಡ್ಡ ದುರಂತ ನಮ್ಮ ದೇಶದಲ್ಲೇನಾಗಿದೆ ಅಂದರೆ ವರ್ಗದ ಬಗ್ಗೆ ಮಾತನಾಡುವ ಕಾರ್ಲ್‌ಮಾರ್ಕ್ಸ್‌ನ ಪ್ರಭಾವ ಬಂದ ದೇಶಗಳಲ್ಲಿ ವರ್ಗವನ್ನು, ವರ್ಗಶೋಷಣೆಯನ್ನು ತಪ್ಪಿಸುವುದಕ್ಕಾಗಿ ಸಂಘರ್ಷಬೇಕೆಂದು ಹೇಳಿ, ಕೆಲವು ಕಡೆ ಕೆಲವು ತುಣುಕುಗಳು ಪೀಪಲ್ಸ್ ವಾರ್‌ಗ್ರೂಪ್‌ನಂಥವು ಹಿಂಸೆಗೆ ತಿರುಗಿದವು class struggle, if it has not become a cruel war I think it would have been the best system ಆದರೆ ಕ್ಲಾಸ್ ಅಂದರೇನು? ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಬ್ರಾಹ್ಮಣ, ಇನ್ನೊಬ್ಬ ಎಕ್ಸಿಕ್ಯುಟಿವ್ ಇಂಜಿನಿಯರ್ ಕುರುಬನಾಗಿದ್ದರೂ ಅವರಿಬ್ಬರೂ ಸೀದಾ ಅಡಿಗೆ ಮನೆಗೆ ಹೋಗಿ ಟೀ ಕುಡಿಯುತ್ತಾರೆ. ಆಗ ಕ್ಲಾಸ್ ಮೊಬಿಲಿಟಿ ಬರುತ್ತದೆ, ಇವನು ಕುರುಬರವನು; ಇವ ಮುಸ್ಲಿಂ ಎಂದು ಬರುವುದಿಲ್ಲ it is movable, it can be mobile eventhough I am the lowest level of the class, I have the opportunity, I have the mobility to go up. Mobility is the test of class; but caste has no mobility, that is the difference between a caste and a class. That has been defined again class is a mobile caste and caste is immobile class. ಇಂತಹ ಜಾತಿ ಪದ್ಧತಿ ವಿರುದ್ಧ ನಡೆದಿರುವಂತಹ ಶತಶತಮಾನಗಳ ಪರಿಣಾಮವಾಗಿ ಒಂದು ದೃಷ್ಟಿಯಿಂದ ತಾವು ಒಪ್ಪುತ್ತೀರಿ ಎಂದು ಕಾಣುತ್ತದೆ. India of 1996 or India of 20th Century, of course is not India of 18th century. It is not, not only from the view point of political system ಅಂಬೇಡ್ಕರ್, ರಾಮಸ್ವಾಮಿ ನಾಯ್ಕರ್‌ರಂಥವರಿಂದ ರಾಮಮನೋಹರ ಲೋಹಿಯ ಅಂಥವರಿಂದ ಈ ವಿಚಾರಗಳು ಬಂದವು. ಮೊನ್ನೆ ಎಲ್ಲೋ ಓದುತ್ತಿದ್ದೆ, ಅಂಬೇಡ್ಕರ್ ಅವರು. . .

When Hindus wanted to write Vedas they called Vedavyas, a backward class man. When Hindus wanted to write an epic they called a Valmiki, who was still a backward class man.

6.50 ಪಿ.ಎಂ.

ಈ ದೇಶದಲ್ಲಿ ಕಾರ್ಯಗಳನ್ನು ಮಾಡುವಾಗ ಇಂತಹವರನ್ನೆಲ್ಲಾ ಕರೆಸುತ್ತೇವೆ. ಇಂತಹವರನ್ನೆಲ್ಲಾ ಉಪಯೋಗಿಸಿಕೊಳ್ಳುತ್ತೇವೆ ಆದಾದ ಮೇಲೆ ಇವತ್ತೂ ಗುಡಿ ಕಟ್ಟುತ್ತೇವೆ. ಗುಡಿ ಕಟ್ಟಲು ಕಲ್ಲು ಹೊರವವನು ಒಬ್ಬ, ಮಣ್ಣು ಹೊರುವವನು ಒಬ್ಬ, ಇಟ್ಟಿಗೆ ತರುವವನು ಒಬ್ಬ. ಎಲ್ಲಾ ಅವನ ಕೈಯಲ್ಲಿ ಮಾಡಿಸುತ್ತೇನೆ. ಗುಡಿ ಕಟ್ಟಿಯಾದ ಮೇಲೆ ಪೂಜಾರಿ ಅಲ್ಲಿ ಮೂರ್ತಿ ಕೂರಿಸಿದ ಎಂದ ತಕ್ಷಣ ಅವರು ಒಳಗೆ ಬರುವ ಹಾಗಿಲ್ಲ. ಗುಡಿ ಕಟ್ಟದೇ ಇರುವವರೆಲ್ಲಾ ಒಳಗೆ ಬರುತ್ತಾರೆ. ಇಂತಹ ರಹಸ್ಯ-ಮಯ ದ್ದೇಶ ಇದು! ಬೇರೆ ದೇಶಗಳ ವರ್ಣ ವ್ಯವಸ್ಥೆ ಅಥವಾ ರೇಷಿಯಲ್ ಕಂಪೇರಬಲ್ ಅಲ್ಲ. 250 ವರ್ಷಗಳಲ್ಲಿ ಅಮೆರಿಕಾದ ಸಮಾಜ ಇವತ್ತು ನಿಗ್ರೋಗಳನ್ನು ಅಬ್ಸಾರ್ವ್ ಮಾಡಿದೆ. ಇವತ್ತು ಅಮೆರಿಕದ ಶಕ್ತಿ ಎಂದರೆ ನಿಗ್ರೋಗಳು. ಇವತ್ತು ಯಾರಾದರೂ ಒಬ್ಬ ಬಿಳಿಯ ಕರಿಯನ ಬಗ್ಗೆ ಅವನ ಶಕ್ತಿಯ ಬಗ್ಗೆ, ಸೈನ್ಸ್ ಇರಲಿ, ಸ್ಪೇಸ್ ಇರಲಿ, ಮ್ಯೂಸಿಕ್ ಇರಲಿ, ಡ್ಯಾನ್ಸ್ ಇರಲಿ, ಸ್ಪೋರ್ಟ್ಸ್ ಇರಲಿ, ಅವರನ್ನು ಬಿಟ್ಟು ಅಮೆರಿಕ ಇವತ್ತು ಇಲ್ಲವೇ ಇಲ್ಲ. ಹಾಗೆ ಅವರನ್ನು ಆ ದೇಶದಲ್ಲಿ ಅಬ್ಸಾರ್ವ್ ಮಾಡಿಕೊಂಡರು. ಅದಕ್ಕೆ ಆ ರಕ್ತ ಮಾಂಸಗಳು ಬೆಳೆದವು. ಹಾಗಾಗಿ ಆ ದೇಶ ದೊಡ್ಡದಾಯಿತು. ತಹಸೀಲ್ದಾರ್ ಲಂಚ ತೆಗೆದುಕೊಳ್ಳುತ್ತಾನೆ. ಎಕ್ಸಿಕ್ಯುಟಿವ್ ಇಂಜಿನಿಯರ್ ಹೀಗೆ ಮಾಡಿದ ಎಂದು ನಾವೆಲ್ಲಾ ಮಾತನಾಡುತ್ತೇವೆ. ಐ.ಎ.ಎಸ್ ಅಡ್ಮಿನಿಸ್ಟ್ರೇಷನ್ ಹೀಗೆ ಇರುತ್ತದೆಂದು ಮಾತನಾಡುತ್ತೇವೆ. ಐ.ಎ.ಎಸ್. ಅಡ್ಮಿನಿಸ್ಟ್ರೇಷನ್ ಏನೂ ಇಲ್ಲವೆಂದು ಮಾತನಾಡುತ್ತೇವೆ ಏಕೆ? ನೆಹರೂ ಅವರ ಕಾಲಕ್ಕೆ ಹೋಗಿ ಚರಿತ್ರೆ ಓದುತ್ತಾ ಕುಳಿತುಕೊಳ್ಳುವುದಕ್ಕಲ್ಲ ಅಸೆಂಬ್ಲಿ ಇರುವುದು. ತಹಸೀಲ್ದಾರ್ ಏನು ಕೆಲಸ ಮಾಡಿದ; ನೀನು ಹೇಳು ಎಂದರೆ ನಾನು ಅದಕ್ಕೆ ಉತ್ತರ ಕೊಡಲಿಕ್ಕೆ ರೆಡಿ ಇದ್ದೇನೆ ನಿಮ್ಮ ನ್ಯಾಷನಲ್ ಬ್ಯಾಕ್‌ಗ್ರೌಂಡ್, ಸೋಷಿಯಲ್ ಬ್ಯಾಕ್‌ಗ್ರೌಂಡ್ ರಾಜಕೀಯದ ಬ್ಯಾಕ್‌ಗ್ರೌಂಡ್ ಅದನ್ನೆಲ್ಲಾ ಮೀರಿ ಬೆಳೆಯುವುದಕ್ಕೆ ಸಾಧ್ಯವಿಲ್ಲ, the entire body politics, of this country. ಅದಕ್ಕೆ ಈ ವರ್ಗ ಮತ್ತು ಜಾತಿಯ ಘರ್ಷಣೆ ನಡೆಯುತ್ತಿದೆ. ನಾವು ಮೀಸಲಾತಿ ಬಗ್ಗೆ ಹೇಳಿದಾಗ ಬಹಳ ಜನ ನಕ್ಕರು. ವಿ.ಪಿ. ಸಿಂಗ್‌ರವರು ಬರೀ 27 ಪರ್ಸೆಂಟ್ ಮೀಸಲಾತಿಯನ್ನು ಹಿಂದುಳಿದ ವರ್ಗದವರಿಗೆ ಕೇಳಿದರು. ಅದನ್ನು ವಿರೋಧ ಮಾಡಿದರು, ಸಪೋರ್ಟ್ ಮಾಡಿದವರು. ಆ ಪಾರ್ಟಿಯವರು ಈ ಪಾರ್ಟಿಯವರು ಇದ್ದಾರೆ. ಅದು ಅಪ್ರಸ್ತುತ ನಾನು ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಯಾರೇ ಏನೇ ಕಾರಣಕ್ಕೋಸ್ಕರ ಹೇಳಿರಲಿ ಆದರೆ ಅದು ಇವತ್ತು demand of the society today. That is the political urge today. ಇವತ್ತು ಅದು ಪೊಲಿಟಿಕಲ್ ಅರ್ಜ್. ಅದನ್ನು ಯಾರಾದರೂ ಗುರುತಿಸದೇ ಇದ್ದರೆ ಅದನ್ನು ಅವರು ಕಳೆದುಕೊಳ್ಳಬೇಕು. ಇವತ್ತು ಒಂದು ತರಹ ಸಮಾಜದಲ್ಲಿ ಒಂದು ಕಡೆ ಆರ್ಥಿಕ ಕೇಂದ್ರಿಕರಣ by a very small percentage of

population and their culture. ನಮ್ಮ ದೇಶ ಭಾರತ, ಒಂದು ಹಳ್ಳಿ. ಹೆಂಗಸರ ಭಾರತ ಒಂದು, ಗಂಡಸರ ಭಾರತ ಒಂದು, ಹಾಗಾಗಿದೆ. ಎಲ್ಲವನ್ನೂ ಸೇರಿಸಿ ಇದನ್ನು ಅಮೆರಿಕನ್ ಮಾದರಿ ಮಾಡುವುದಕ್ಕೆ ಹೋಗುತ್ತೇನೆ ಸೋವಿಯತ್ ಯೂನಿಯನ್ ಅನುಸರಿಸುತ್ತೇನೆ ಕೃಷ್ಣ ಮೆನನ್ ಅನ್ನು ಕಳುಹಿಸುತ್ತೇನೆ ಎಸ್.ಕೆ. ಪಾಟೀಲ್ ಅನ್ನೂ ಕೂಡ ಇಟ್ಟುಕೊಳ್ಳುತ್ತೇವೆಂದು ಮಾಡಿ, We are in a terribly political confusion, we are in a terribly economic confusion, and we are in a terribly disastrous social condition. This is the fact. If my analysis is right, I will then. . . ಇಂತಹ ಸಂದರ್ಭದಲ್ಲಿ ಮಾನ್ಯ ನಂಜೇಗೌಡರಿಗಾಗಲೀ, ಮಾನ್ಯ ಖರ್ಗೆಯವರಿಗಾಗಲಿ, ನಮ್ಮ ಯಡಿಯೂರಪ್ಪನವರಿಗಾಗಲೀ ಸರಕಾರದಲ್ಲಿ ದೋಷ ಕಂಡು ಹಿಡಿಯುವುದು ಎಂದರೆ ಎಲ್ಲಿ ಕಂಡು ಹಿಡಿಯಬೇಕು. ನಾನು, ಸಿದ್ಧರಾಮಣ್ಣ, ನಾವು ಹೀಗೆ ಇದ್ದೇವೆಂದು ಅಲ್ಲ. ನಮ್ಮ ಸಬ್‌ಇನ್ಸ್‌ಪೆಕ್ಟರ್ ದೂರು ಕೊಡುವುದಕ್ಕೆ ಬಂದವನನ್ನು ಒಳಗೆ ಹಾಕಿ ಹೊಡೆದು ದುಡ್ಡು ತೆಗೆದುಕೊಳ್ಳುತ್ತಾನಲ್ಲಾ ಅದನ್ನು ನಾವು ಇವತ್ತು ನಿಲ್ಲಿಸಬೇಕಾಗಿದೆ. ಯಾವ ಸರಕಾರ ಇದನ್ನು ನಿಲ್ಲಿಸಿದೆ? ನಮ್ಮ ತಹಶೀಲ್ದಾರ ದುಡ್ಡು ಕೊಟ್ಟನೋ ಇಲ್ಲವೋ ಅಥವಾ ಅಸಿಸ್ಟೆಂಟ್ ಇಂಜಿನಿಯರ್ ಬಿಲ್ ಮಾಡಿದನೋ ಇಲ್ಲವೋ ಎಂದು ಶಾಸಕರೇನು ಹೋಗಿ ಅವರ ಕಚೇರಿಯಲ್ಲಿ ಕೂರುತ್ತಿದ್ದರಲ್ಲಾ, ಸಭಾಪತಿಯವರೆ, ಆ ಅವ್ಯವಸ್ಥೆ ತೆಗೆಯಬೇಕಾಗಿದೆ. ಶಾಸಕರು ಆ ಅಧಿಕಾರಿ ಹತ್ತಿರ ಹಣ ತೆಗೆದುಕೊಂಡು ಬಂದರೆ ಮುಂದೆ ಅಧಿಕಾರಿ ಹಳ್ಳಿಯವನು ಬಂದಿದ್ದಾನೆ ಸಿಕ್ಕರೆ ಸಾಕು ಎಂದು ತಿಂದು ಹಾಕುತ್ತಾನೆ. ಪೋಲಿಸಿನವರು ಯಾರ ಮಾತನ್ನು ಕೇಳುತ್ತಾರೆ. ಏತಕ್ಕೆ ಇಷ್ಟು ಹಿಂಸೆ ಸಮಾಜದಲ್ಲಿ ಇದೆ? ಏತಕ್ಕೆ ಇಷ್ಟು ಕೊಲೆ ದರೋಡೆ ನಡೆಯುತ್ತಿದೆ? ಇದಕ್ಕೆ ಕಾರಣ ಬೇರೆ ಇರಬಹುದು. ಆದರೆ ಯಾರಾದರೂ ಆಗಲಿ ಅಡ್ಮಿನಿಸ್ಟ್ರೇಷನ್ ರಿಫಾರ್ಮ್ಸ್ ಬಗ್ಗೆ ಸೂಕ್ತ ಗಮನ ಕೊಡಬೇಕಾಗುತ್ತದೆ. ನಾನು ಚೀಫ್ ಸೆಕ್ರೆಟರಿಯನ್ನು ತೆಗೆಯುತ್ತೇನೆ ಅವರು ಹೋಮ್ ಸೆಕ್ರೆಟರಿಯನ್ನು ತೆಗೆಯುತ್ತಾರೆ ತೆಗೆದ ತಕ್ಷಣ ಆಗುತ್ತದೆಯೇ? ಆಗುವ ಲಕ್ಷಣಗಳು ಇದೆಯೇ? Each one of us should be responsible, each one of us. Even every citizen should be responsible for this. ಲಂಚ ಅಂದರೆ ಏನು? ಏನೋ ಇವನು ಒಂದು ಕೆಲಸ ಮಾಡಿಕೊಟ್ಟ ಅವನು ಅಷ್ಟು ದುಡ್ಡು ಕೊಟ್ಟ quid proquo ತರಹವಾಗಿದೆ. ಇದು ಹೀಗೆ ಇಷ್ಟು ಕೆಲಸ ಮಾಡಿಕೊಂಡು ನಾನು ಇಷ್ಟು ದುಡ್ಡು ಕೊಡುತ್ತೇನೆ. ಹೋಟೆಲಿನಲ್ಲಿ ನಾವು ಟಿಪ್ಸ್ ಕೊಡುತ್ತೇವೆ. ಹಾಗೆ ದೇವರಿಗೂ; ಬೇಡ ಅದೆಲ್ಲಾ ಇಲ್ಲಿ ಮಾತನಾಡುವುದು ಬೇಡ. ಅವು ನಿರರ್ಥಕವಾದ ಮಾತಾಗುತ್ತವೆ. ಒಂದು ಸಲ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಮಂತ್ರಿಯಾಗಿ "Corruption is a global phenomenon." ಎಂದು ಹೇಳಿದ್ದರು. I am not negative. It is true ಎಂದು ಹೇಳಿದ್ದಾರೆ. ಜಪಾನ್‌ನಲ್ಲಿ ಲಂಚ ತೆಗೆದುಕೊಳ್ಳುವವನಿಗೆ ತನಾಕ್ ಎಂದು ಹೇಳುತ್ತಾರೆ. ಏಕೆಂದರೆ, ತನಾಕ್ He was the Prime Minister. He was involved in a sheer two crores yen. 2 ಕೋಟಿ ಯೆನ್ನಿನ ವ್ಯವಹಾರದಲ್ಲಿ 6 ತಿಂಗಳು ಶಿಕ್ಷೆಯಾಯಿತು ತನಾಕ್ ಜೈಲಿಗೆ ಹೋದ. ಬಾಂಗ್ಲಾದೇಶದಲ್ಲಿರತಕ್ಕಂತಹ ಪ್ರೆಸಿಡೆಂಟ್ ಮೇಲೆ ಚಾರ್ಜ್‌ಸ್ ಆಯಿತು. ಆತ ಜೈಲಿನಲ್ಲಿ ಇದ್ದಾನೆ.

ಪಾಕಿಸ್ಥಾನದಲ್ಲಿ ಅಲ್ಲಿನ ಪ್ರಧಾನಮಂತ್ರಿ ಬುಟ್ಟೋ ಆಗಿದ್ದರು. They found guilty of some crime. They hanged him. ಆದರೆ ನಮ್ಮ ಭಾರತ ದೇಶದಲ್ಲಿ What have you done in the last fifty years? Whom have you hanged? To whom you have sent Jail? You look to small crime. ಇದರಿಂದ ಒಂದು ಸರಕಾರವನ್ನು ಜಡ್ಜ್ ಮಾಡುತ್ತಿರೋ ದೇಶವನ್ನು ಜಡ್ಜ್ ಮಾಡುತ್ತಿರೋ ಹೊಳೆ ಎಲ್ಲಾ ಹೆಂಡ ಆದರೆ ನಾನು ಒಂದು ಲೋಟದಲ್ಲಿ ತೆಗೆದುಕೊಂಡು ಹೋಗಿ ನಾನು ನೀರು ಕುಡಿಯುವುದಕ್ಕೆ ಸಾಧ್ಯವೇ? ಯಡಿಯೂರಪ್ಪ-ನವರೇ, ಹೊಳೆ ಎಲ್ಲಾ ಹೆಂಡವಾಗಿ ಕುಳಿತಿದೆ. ಮುಖ್ಯಮಂತ್ರಿಯಾದ ತಕ್ಷಣ ನಾನು ಪವಾಡಗಳನ್ನು ಮಾಡುತ್ತೇನೆ ಇಲ್ಲವೇ ಏಕ್‌ದಂ ಸರಿ ಮಾಡುತ್ತೇನೆಂದು ಹೇಳಲಾಗುವುದಿಲ್ಲ. ಮೊದಲನೆಯದಾಗಿ, ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ರಾಜಕೀಯ ಭ್ರಷ್ಟಾಚಾರ ಕಡಿಮೆಯಾದಷ್ಟು ಆಡಳಿತಾತ್ಮಕ ಭ್ರಷ್ಟಾಚಾರ ಕಡಿಮೆಯಾಗುತ್ತದೆ. ರಾಜಕೀಯವಾಗಿ ಭ್ರಷ್ಟರಾಗಿದ್ದುಕೊಂಡು ನಾನು ಆ ಅಧಿಕಾರಿ-ಯನ್ನು ಸರಿಯಾಗಿಡುತ್ತೇನೆ ಈ ಅಧಿಕಾರಿಯನ್ನು ಸರಿಯಾಗಿಡುತ್ತೇನೆಂದು ಹೇಳುವುದು ಸರಿಯಲ್ಲ. It's a fool's act. ಅದು ಆಗುವುದಿಲ್ಲ. ಸೋವಿಯತ್ ಯೂನಿಯನ್‌ನಲ್ಲಿ ತಾವು ನೋಡಿದ್ದೀರಿ. ಚೈನಾದಲ್ಲಿ ಯಾರಾದರು ಕರಪ್ಟ್ ಇದ್ದಾರೆಯೇ ಎಂದು ಹುಡುಕಿದರೆ ಯಾರೂ ಸಿಕ್ಕುವುದಿಲ್ಲ ಕ್ರೈ ಮಾಡುವುದಿಲ್ಲ. Nobody knows where he is... ಆ ರೀತಿ ನಾವು ಪೊಲಿಟಿಕಲ್ ಸಿಸ್ಟಂ ಅನ್ನು ಗೇರ್‌ಅಪ್ ಮಾಡದೇ ಪೊಲಿಟಿಕಲ್ ಸಿಸ್ಟಂನಲ್ಲಿ ಯಡಿಯೂರಪ್ಪನವರ ಕಾಲು ಮುರಿಯು-ವುದು ಹೇಗೆ ನಾನು, ಅವರು ರಾಜಕೀಯವಾಗಿ ಚೆನ್ನಾಗಿ ಬೆಳೆಯುತ್ತಿದ್ದರೆ ಅವರ ಪಾರ್ಟಿಯಲ್ಲಿರು-ವವರನ್ನು ಬಿಡಿಸುವುದು ಹೇಗೆ; ನಾನು ಇದಕ್ಕೆಷ್ಟು ಹಣ ಖರ್ಚು ಮಾಡೋಣ, ಅದಕ್ಕೆಷ್ಟು ಹಣ ಖರ್ಚು ಮಾಡೋಣವೆಂದು ನಾನು ಸದಾ ಆಲೋಚನೆ ಮಾಡುತ್ತಿದ್ದರೆ sorry ಅದನ್ನು ನಾನು ಸರಿ ಮಾಡುವುದಕ್ಕಾಗುವುದಿಲ್ಲ. ನೀವೂ ಸರಿ ಮಾಡುವುದಕ್ಕಾಗುವುದಿಲ್ಲ. ಹಾಗೆಂದು ಈ ಪೊಲಿಟಿಕಲ್ ಸಿಸ್ಟಂ ಸರಿಯಾಗುವವರೆಗೂ ಹೀಗೇ ನಡೆಯೋಣವೇ? ಅದೂ ಆಗುವುದಿಲ್ಲ. There is some-thing to be done immediately. As a long range. ಆ ಲಾಂಗ್ ರೇಂಜ್ ಬಗ್ಗೆ ಆಮೇಲೆ ಮಾತನಾಡೋಣ. ಇವತ್ತಿಗೆ ಇಷ್ಟು ಮಾತ್ರ ಹೇಳಬಲ್ಲೆ. ಆಡಳಿತ ವ್ಯವಸ್ಥೆಯಲ್ಲಿ ಸ್ವಲ್ಪ ಮಟ್ಟಿಗೆ ಅಸ್ತವ್ಯಸ್ತ ಕಡಿಮೆಯಾಗಲೀ ಎಂದು ಜನರಲ್ ವರ್ಗಾವಣೆ ಬೇಡವೆಂದು ಹೇಳಿದೆ. ಜನರಲ್ ವರ್ಗಾ-ವಣೆ ಇದೆ ಎಂದ ತಕ್ಷಣ ಎಲ್ಲರೂ ಇಲ್ಲೇ ಬೆಂಗಳೂರಿನಲ್ಲಿ ಶಾಸಕರ ಹತ್ತಿರ ಇರುತ್ತಾರೆ. ಒಬ್ಬ ಶಾಸಕರು ಒಂದು ಸಲ ನನ್ನ ಹತ್ತಿರ 10–15 ವರ್ಗಾವಣೆ ಪಟ್ಟಿ ತೆಗೆದುಕೊಂಡು ಬಂದಿದ್ದರು. ನಾನು ಹೀಗೆಲ್ಲಾ ವರ್ಗಾವಣೆ ಮಾಡಲು ಆಗುವುದಿಲ್ಲವೆಂದು ಹೇಳಿದೆ. ನಾನು ಹೇಳಿ ಎಲ್ಲೋ ಹೋದೆ ಪುನಃ 2 ಗಂಟೆಗೆ ಬಂದೆ ಇನ್ನೂ ಅವರು ಕುಳಿತಿದ್ದರು. ಏತಕ್ಕೆ ಎಂದೆ? ಅದಕ್ಕೆ ಅವರು ಸಾರ್ ನಾನು ರೂಮಿಗೆ ಹೋಗುವ ಹಾಗಿಲ್ಲ, ಬಹಳ ಜನ ಅಧಿಕಾರಿಗಳು ಅಲ್ಲಿಗೇ ಬಂದಿದ್ದಾರೆಂದು ಹೇಳಿದರು. To say MLA's are harassed, it is not a proper word. They are persecuted by these officers. ಯಾರು ಮಹಾ ಕರಪ್ಟ್ ಇರುತ್ತಾನೆ. ಯಾರು ಎಷ್ಟು ಅಧಮ ಇರುತ್ತಾನೆ,

ಅವನು ಹೆಚ್ಚಿನ ಒತ್ತಡ ತರುತ್ತಾನೆ. ಇವರನ್ನು ಹೇಗೆ ಸರಿ ಮಾಡುವುದು? ಒಬ್ಬ ಸಬ್ ಇನ್ಸ್‌ಪೆಕ್ಟರ್ ಅನ್ನು ಸಸ್ಪೆಂಡ್ ಮಾಡಿದರೆ ಅಥವಾ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಅನ್ನು ಜೈಲಿಗೆ ಕಳುಹಿಸಿದರೆ ಇವತ್ತು ನಾವು ಮೊದಲು, All of us, the entire House, every MLA must make up our mind. ಅವನು ಯಾವನಾದರೂ ಕಳ್ಳ ಇದ್ದರೆ ಅವನನ್ನು ಸೇಫ್ ಗಾರ್ಡ್ ಮಾಡ-ಬಾರದು. ನಾನು ನಿಮ್ಮ ಚಿಕ್ಕವ್ವನ, ದೊಡ್ಡಪ್ಪನ ಮಗ ಎಂದು ಎಂತಹ ಸಂಬಂಧ ಹುಡುಕುತ್ತಾ-ರೆಂದರೆ, ಯಾರೂ ಹುಡುಕುವುದಕ್ಕಾಗುವುದಿಲ್ಲ ಅಂತಹ ಸಂಬಂಧವನ್ನು ಕೆಲವರು ಹುಡುಕುತ್ತಾರೆ. I am not referring to all the Government Officers. Some of the Government Officers have made this transfer as a business. ವರ್ಗಾವಣೆ-ಯದ್ದು ಒಂದು ಬಿಜಿನೆಸ್. ಜಾತಿ ಹುಟ್ಟಿಸುವುದು. ಎಂತಹ ಇಂಟ್ರೆಸ್ಟಿಂಗ್ ಬರುತ್ತದೆಂದರೆ ಅವನು ಇಂಡೈರೆಕ್ಟ್ ಆಗಿ ಹೇಳಬೇಕಾಗುತ್ತದೆ, ನಾನು ನಿಮ್ಮ ಗುರುಸಿದ್ದಪ್ಪನವರ ಸಂಬಂಧಿ ಎಂದು ಹೇಳುತ್ತಾನೆ ಆಗ ಗೊತ್ತಾಯಿತು ಬಿಡಪ್ಪ ನೀನು ಲಿಂಗಾಯಿತ ಎಂದು. ಆಮೇಲೆ ನಮ್ಮ ಮೇಲೆ ಅಕೌಂಟಿಂಗ್ ಅಧಿಕಾರಿ ಇದ್ದಾನೆ, ಅವನು ದೇವೇಗೌಡರು ಮುಖ್ಯಮಂತ್ರಿಯಾಗಿ ಬಂದ ಮೇಲೆ ಅವನು ಒಕ್ಕಲಿಗ, ಅವನ್ಯಾರಿಗೂ ಹೆದರುವುದಿಲ್ಲ ಎಂದು ಹೇಳುತ್ತಾನೆ. ಅವನು ಹೆದರುತ್ತಾನೋ ಇಲ್ಲವೋ ಅವನು ದೇವೇಗೌಡರಿಗೆ ಪರಿಚಯ ಇದೆಯೋ ಇಲ್ಲವೋ ಗೊತ್ತಿಲ್ಲ. ಈ ತರಹ ಬಹಳ ಕನ್‌ವೀನಿಯಂಟ್ ಆರ್ಗ್ಯುಮೆಂಟ್. ಅವನು ಲಿಂಗಾಯಿತ ಸಾರ್ ಅವನು ಕುರುಬರವನು ಸಾರ್, ಇವನು ಬ್ರಾಹ್ಮಣ ಸಾರ್ ಎಂದು ಹೀಗೆ ಮಾಡಿ ಜಾತಿಯ ಹೆಸರಿನಲ್ಲಿ ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಪ್ರಯತ್ನ ಮಾಡತಕ್ಕಂಥ ಅಧಿಕಾರಿಗಳನ್ನು ನಾವು ನಿಷ್ಠೂರವಾಗಿ ಚಿವುಟಿ ಹಾಕಲು ಸಾಧ್ಯವಾಗುತ್ತದೆಯೇ? ನೀನು ಯಾವನೇ ಇರು ದೂರ ಇರು ಎಂದು ಹೇಳಬೇಕಾಗುತ್ತದೆ. ಹಾಗೆ ನಾವು ಒಂದು ಆಡಳಿ-ತಾತ್ಮಕವಾದ ಸರ್ಕ್ಯುಲರ್ ಇಶ್ಯೂ ಮಾಡಿದರೆ ಅದಕ್ಕೇನಾದರೂ ಬೆಲೆ ಇದೆಯೇ? ಈ ಸರ್ಕ್ಯುಲರ್ ನಮ್ಮ ನಡತೆಯಿಂದ ಇಶ್ಯೂ ಆಗಬೇಕು. ನಾವು ಅವರನ್ನು ದೂರ ಇಡುವುದರಿಂದ ಈ ಡಿಸಿಪ್ಲಿನ್ ಶುರುವಾಗಬೇಕು. ಹಾಗೆ ಇಲ್ಲದಿದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಸುಮ್ಮನೆ ಹೇಳಿಕೊಳ್ಳ-ಬೇಕು. ಪಾಪ ಹನುಮಂತಯ್ಯನವರು ರಿಫಾರ್ಮ್ಸ್ ಬಗ್ಗೆ ಒಂದು ದೊಡ್ಡ ಪುಸ್ತಕವನ್ನೇ ಬರೆದರು. ನಾನು ಅದನ್ನು ಪೂರ್ತಿ ಓದುವುದಕ್ಕೂ ಆಗಲಿಲ್ಲ. ಓದಿದರೂ ಕೂಡ ಪ್ರಯೋಜನವಿಲ್ಲ. ಏಕೆಂದರೆ ಈಗ ಅದನ್ನೆಲ್ಲಾ ಮಾಡುವುದಕ್ಕೂ ಬರುವುದಿಲ್ಲ. ಅದಕ್ಕೋಸ್ಕರ ಭ್ರಷ್ಟಾಚಾರ, ಜಾತೀಯತೆ, ವರ್ಗ, ಜಾತಿ, ಗೋತ್ರ, ಇವುಗಳ ಒಂದು ದೊಡ್ಡ ಪರಂಪರೆ ಇದೆ. ಆ ಪರಂಪರೆಯ ಹಿನ್ನೆಲೆಯಲ್ಲಿ ಬಿ.ಡಿ.ಎ. ಅಧಿಕಾರಿ ಇವನು ಯಾವ ಗೋತ್ರದವನು ಎಂದು ಹುಡುಕಬೇಕಾದರೆ ಬಹಳ ಕಷ್ಟ. ಷೆಡ್ಯೂಲ್ಡ್ ಕಾಸ್ಟ್ ಬಗ್ಗೆ ಬಂದಾಗ ಹಿಂದೆ ಇದರ ಬಗ್ಗೆ ನಾನು ಅಸೆಂಬ್ಲಿಯಲ್ಲಿ ಹೇಳಿದ್ದೆ. ನಾವು ಷೆಡ್ಯೂಲ್ಡ್ ಕಾಸ್ಟ್, ನಾವೆಲ್ಲಾ 18 ಪರ್‌ಸೆಂಟ್. ಅವರು ಬ್ರಾಹ್ಮಣರು 30 ಪರ್‌ಸೆಂಟೋ 40 ಪರ್‌ಸೆಂಟೋ ಅವರು ತಿಂದುಹಾಕುತ್ತಾರೆ. ನಾವೆಲ್ಲಾ 18 ಪರ್‌ಸೆಂಟ್ ತಿಂದರೆ ಏನು ಮಹಾ? ಈ ರೀತಿಯಾದರೆ ಹೇಗೆ? ನಾವು ಎಷ್ಟು ಈ ರೀತಿ ಸಮಾಜವನ್ನು ಕೆಡಿಸುತ್ತಿದ್ದೇವೆ ಎಂದರೆ ಅದರೊಳಗೆ ಇರುವ ಯಾವುದೇ

ಸತ್ವ, ಯಾವುದೇ ಟೆಕ್ಸ್ ಚರ್, ಯಾವುದೇ ಹಿಡಿತ ಇಲ್ಲದೇ ಇರುವ ರೀತಿಯಲ್ಲಿ ಪ್ರತಿಯೊಬ್ಬರೂ ಪ್ರತಿಯೊಂದು ತಪ್ಪಿಗೂ ಜಾತಿಯನ್ನು, ವರ್ಗವನ್ನು, ಅವರ ಸಂಬಂಧಗಳನ್ನು ಮುಂದಿಟ್ಟುಕೊಂಡು ಹೋಗುತ್ತಿದ್ದೇವೆ. ಇವತ್ತು ನಾವು ಹೇಗೆ ಎಲೆಕ್ಟ್ ಆಗುತ್ತೇವೆ? ಇವತ್ತು ಪ್ರತಿಯೊಬ್ಬರನ್ನೂ ಕೇಳೋಣ. ಈ ಸದನವನ್ನೇ ದೇವರು ಎಂದು ತಿಳಿದುಕೊಳ್ಳೋಣ. ಹೇಗೆ ಎಲೆಕ್ಟ್ ಆಗಿ ಬಂದೆವು? ನಮಗೆ ರೆಫ್ರೆ-ಸೆಂಟೇಷನ್ ಆಫ್ ಪೀಪಲ್ ಅಕ್ಟ್ ಯಾವುದಾದರೂ ಕಾನೂನು ಅಪ್ಲೈ ಆಗಿದೆಯೇ? ಯಾರಾದರೂ ಮನಬಿಚ್ಚಿ ಹೇಳಲಿ? ಯಾರೂ ಬರುವುದಿಲ್ಲ. ಎಷ್ಟು ಹೆಚ್ಚು ದುಡ್ಡು ಖರ್ಚು ಮಾಡಿ ನಾನು ಗೆಲ್ಲ-ಬೇಕೋ ಅಷ್ಟಾದರೂ ಖರ್ಚು ಮಾಡುತ್ತೇವೆ. ದುಡ್ಡಿನ ಬಲದಿಂದ ಮಸಲ್ ಆರ್ಗನೈಜ್ ಮಾಡು-ತ್ತೇವೆ, ದುಡ್ಡಿನ ಬಲದಿಂದ ನಮ್ಮ ಜಾತಿಯನ್ನು ಇವೇ even cordinal principles of election practices, ಯಾವ ಶೇಷನ್‌ನಿಂದ ಏನು ಮಾಡುವುದಕ್ಕಾಗುತ್ತದೆ? ಯಾವ ಸುಪ್ರೀಂ ಕೋರ್ಟ್ ತಾನೆ ಏನು ಮಾಡುವುದಕ್ಕಾಗುತ್ತದೆ? The entire corruption, nepotism and red-tapisim is born out of election... ನಮ್ಮ ಈ ರಾಜಕೀಯ ಶಿಶು ಎಂಎಲ್‌ಎ ಎನ್ನುವುದು ಹುಟ್ಟುವುದೇ gutters ನಿಂದ, ಅದನ್ನು ಮಾಡದೇ ಯಾರೂ ಗೆಲ್ಲುವುದಿಲ್ಲ. ಇನ್ಯಾರೋ ಜಯಪ್ರಕಾಶ್‌ರಂಥವರು ಎಂದೆಂದೂ ಎಲೆಕ್ಷನ್‌ಗೆ ನಿಲ್ಲುವುದಿಲ್ಲ. ಅವರು ಎಲ್ಲರಿಗೂ ಸರಿಯಾಗಿರಿ ಎಂದು ಹೇಳುತ್ತಾರೆ. ಅವರು ಒಂದು ಎರಡು ಸಾರಿ ನಿಂತಿದ್ದರೆ ಅವರಿಗೆ ಏನು ಆಗುತ್ತಿತ್ತೋ ಏನೋ ಗೊತ್ತಿಲ್ಲ. ಅವರು ಎಲೆಕ್ಷನ್‌ಗೆ ನಿಲ್ಲುವುದಕ್ಕೆ ಹೋಗಲಿಲ್ಲ. ಮಹಾತ್ಮಾಗಾಂಧಿಯಂಥವರು ಅಧಿಕಾರ-ಕ್ಕಾಗಿ ಹೋಗಲಿಲ್ಲ. ನಾನು ಮಂತ್ರಿಯಾಗುತ್ತೇನೆ ಎಂದು ಹೇಳಿ ಹೋಗಲಿಲ್ಲ. ಅವರೆಲ್ಲಾ ಏನೂ ಆಗದೇ ಇದ್ದವರು ಬುದ್ಧಿವಾದ ಹೇಳಿದರು. ಕೆಲವು ಸಾರಿ ಸ್ವಾಮಿಗಳು, ಕುಡಿಯುವುದು ಬಿಡು, ಕುಡಿಯು-ವುದು ಬಿಡು, ಆರೋಗ್ಯ ಕೆಡುತ್ತದೆ ಎಂದು ಹೇಳುತ್ತಿದ್ದರು. ಆದರೆ ಕುಡಿದವನಿಗೆ ಅದನ್ನು ಬಿಡುವುದು ಎಷ್ಟು ಕಷ್ಟ ಎಂಬುದು ಗೊತ್ತೇ ಹೊರತು ನಿಮಗೇನು ಗೊತ್ತು ಸ್ವಾಮಿ ಎಂದು ಹೇಳಿದೆ. ಹೇಳುವುದಕ್ಕೆ ಎಲ್ಲರಿಗೂ ಬರುತ್ತದೆ. ಕುಡಿದವನಿಗೆ ಬಿಡುವುದು ಎಷ್ಟು ಕಷ್ಟ, ಅದನ್ನು ಕಷ್ಟ ತಿಳಿದುಕೊಳ್ಳಬೇಕಾದರೆ ಅವನೇ ಸ್ವಯಂ ಆರೋಗ್ಯದ ಅನುಭವ ಇರಬೇಕು. ಅಲ್ಲಾ, ನೀವು ಹೊಸದಾಗಿರುವವರು ಯಾರು ಅನುಭವ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ವಾಟಾಳಂತೂ ಮಾಡುವುದಕ್ಕೆ ಹೋಗುವುದಿಲ್ಲ, ಗೊತ್ತಿದೆ. ಬಹಳ ಜನರಿಗೆ ಗೊತ್ತಿದೆ.

ಶ್ರೀ ಹೆಚ್.ಎನ್. ನಂಜೇಗೌಡ:- ಅಲ್ಲಾ, ಸ್ವಾಮಿಗಳಿಗೂ ಹೇಳಿದ್ದಿರಾ ಅನುಭವ ತೆಗೆದುಕೊಳ್ಳಿ ಎಂದು.

ಶ್ರೀ ಜೆ.ಹೆಚ್. ಪಟೇಲ್:- ಅವರಿಗೆ ಒಂದು ಉದಾಹರಣೆ ಕೊಟ್ಟೆ. ಒಂದು ಹಳ್ಳಿಯಲ್ಲಿ ಒಬ್ಬೆ ಸ್ವಾಮಿಗಳು ದರ್ಬಾರ್ ನಡೆಸಿದ್ದರು. ಎದುರಿಗೆ ಯಾರೋ ಒಬ್ಬ ಬಂದ. ಬಂದ ತಕ್ಷಣ ಜನರ ಎದು-ರಿಗೆ ಬೈಯಬೇಕಲ್ಲ ಎಂದು "ಏನಪ್ಪ ಮರುಳಾ, ಜನ ಎಲ್ಲಾ ಮಾತನಾಡುತ್ತಿದ್ದಾರೆ" "ಏನು ಸ್ವಾಮಿ, ಏನು ಬುದ್ಧಿ, ನಾನೇನು ಅಂಥದ್ದು ಏನು ಮಾಡಲಿಲ್ಲವಲ್ಲಾ" ಎಂದ, "ಥೂ, ನೀನು ಬರೀ ಕುಡಿ-ಯುತ್ತೀಯಂತೆ ಕಣೊ". "ಅಯ್ಯೋ ಶಿವನೇ, ಹೋದ ಸಾರಿ ನಾನು ನಿಮ್ಮ ಜೊತೆಗೆ ಕುಡಿದಿದ್ದೇ

ಸ್ವಾಮಿ, ಆಮೇಲೆ ನಾನು ಎಂದೆಂದೂ ಕುಡಿದಿಲ್ಲ" ಎಂದ. ಆಮೇಲೆ ಆ ಸ್ವಾಮಿಗಳು ಅವನ ಸುದ್ದಿ ಮಾತನಾಡಲಿಕ್ಕೇ ಹೋಗಲಿಲ್ಲ. ಇದು ಕೆಲವು ವಿಚಾರಾತ್ಮಕವಾದಂಥ ವಿಷಯಗ್ಳು. ಲಂಚದ ರೂಪ-ಗಳು ಹೇಗೆ ಇರುತ್ತವೆ ಎಂದು ಹೇಳುತ್ತೇನೆ. ಒಬ್ಬ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರು ಹೈಕೋರ್ಟಿಗೋ ಏನೋ ಕ್ಯಾಂಡಿಡೇಟ್ಸ್‌ನ್ನು ಸೆಲೆಕ್ಟ್ ಮಾಡಬೇಕಾಗಿತ್ತು. ಆಗ ಸುಪ್ರೀಂಕೋರ್ಟ್ ಚೀಫ್ ಜಸ್ಟೀಸ್ ಜೊತೆಗೆ ಇನ್ನು ಮೂರು-ನಾಲ್ಕು ಜನ ಕುಳಿತಿದ್ದರು. ಎಂಟು-ಹತ್ತು ಕೇಸ್ ಆದ-ಮೇಲೆ ಹನ್ನೊಂದನೆಯದು ಬಂದಾಗ, ಇಲ್ಲಾ, ನಾನು ಎದ್ದು ಹೋಗುತ್ತೇನೆ ಎಂದರು. ಏಕೆ ಸಾರ್ ಕುಳಿತುಕೊಳ್ಳಿ ಎಂದು ಇವರು ಅಂದರು. ಇಲ್ಲಾ, ಈಗ ಬರುವವನು ನನಗೆ ಬಹಳ ಹತ್ತಿರದ ಸಂಬಂಧಿಕ, ನಾನು ಇರಬಾರದು ಎಂದು ಹೊರಗೆ ಹೋದರು. ಸಾಕು, ಅಷ್ಟು ಹೇಳಿದ್ದು. ಮೂರು ಜನ ಅವನನ್ನೇ ಆರಿಸಿದರು. ಮೊದಲನೆಯದಾಗಿ ಸರ್ಕಾರದಲ್ಲಿ ಲೋಪದೋಷಗಳು ಇದ್ದಾವೆ. ನಮ್ಮ ಜನರನ್ನು ನಾವು ಇವತ್ತು ಧೃತಿಗೆಡಿಸಿದ್ದೇವೆ. ಮಹಾನ್ ದೊಡ್ಡ ದುರಂತ ಏನು ಎಂದರೆ ಜನರಿಗೆ ವಿಶ್ವಾಸ ಉಳಿಯಬೇಕಲ್ಲಾ! ಯಾವುದೂ ವಿಶ್ವಾಸ ಉಳಿದಿಲ್ಲ. ಸಿನಿಕಲ್ ಆಗಿದ್ದಾರೆ. ಯಾವ ತತ್ವ, ಯಾವ ಸಿದ್ಧಾಂತ, ಯಾವ ಕಾನ್ಸ್‌ಟಿಟ್ಯೂಷನ್, ಯಾವ ಹಿಂದುತ್ವವೂ ಇಲ್ಲ. ಮುಂದುತ್ವವೂ ಇಲ್ಲ. People have lost faith in everything. They have become cynical... ಸಿನಿಕಲ್ ಏಕೆ ಆಗಿದ್ದಾರೆ, ನಾವು ಬರುತ್ತಾ ಬರುತ್ತಾ ಅಬಲರಾಗುತ್ತಿದ್ದೇವೆ. ನೆಹರೂ ಅವರ ಕಾಲದ ಒಬ್ಬ ಪ್ರಧಾನಿಗಿದ್ದಂಥ ಡಿಸಿಪ್ಲಿನ್ ಆಗಲಿ, ಮತ್ತೊಂದು ಆಗಲಿ, ಬಂದಂಥ ಅವರ ಮಕ್ಕಳ ಕಾಲಕ್ಕೆ ಆಗಲಿಲ್ಲ. ಏನೋ ಕಾರಣಾಂತರಗಳಿಂದ. ಇವತ್ತು ನಾವು ಪ್ರತಿಯೊಬ್ಬ ಭಾರತೀಯನೂ ಇದರೊಳಗೆ ನನ್ನ ತಪ್ಪು ಇದೆ, ಇದನ್ನು ನಾವೇ ಕಡೆದು ಹುಟ್ಟಿಸಿರುವ ವಿಷ. ಈಗ ಅದಕ್ಕೆ ಯಾರೊ ಒಬ್ಬ ನೀಲ-ಕಂಠ ಬರುವುದಿಲ್ಲ. ಹಾಗೆ ನಾವು ಎಲ್ಲೋ ನೋಡಿ ಗಾಬರಿಯಾಗಿ ಅಲ್ಲಿಂದ ಬಂದಾನು, ಇಲ್ಲಿಂದ ಬಂದಾನು, ಜ್ಞಾನಿಯಾದರೆ ನಾನು ಯಾವ ಕಡೆಯಿಂದ ಬರುತ್ತೇನೆ ಎಂದು ಅವತಾರ ಮಾಡುತ್ತೇನೆ ಎಂದು ಹೇಳಿದಹಾಗೆ ಅವತಾರವಾಗುದಿಲ್ಲ. We have to take the example of Soviet Union, ಸೋವಿಯತ್ ಯೂನಿಯನ್ ನಮಗಿಂತ ಸಬಲವಾದಂಥ ರಾಷ್ಟ್ರ. ಈಗಲೂ ಒಲಂಪಿಕ್ಸ್-ನಲ್ಲಿ ನಂಬರ್ 2. ಈಗಲೂ ಅವರಿಗೆ ಫೈರಿಂಗ್ ಪವರ್ ಇದೆ. equally even it is better than America. ಎಷ್ಟು ದೂರಕ್ಕಾದರೂ ಯಾರನ್ನಾದರೂ ಗುರಿ ಇಟ್ಟು ಹೊಡೆಯಬಲ್ಲರು. ಅಂಥವರೇ ಸಾಮಾನ್ಯ ಹಳ್ಳಿಗಲ್ಲಿಯೇ ಕಿತ್ತಾಡಲಿಕ್ಕೆ ಆಗಲಿಲ್ಲ ಹಾಗಾಗಿ ಇವತ್ತೆಲ್ಲಾ ಡಿಸ್‌ಮ್ಯಾಂಟಲ್ ಆಗಿ ಕುಳಿತ್ತಿದ್ದಾರೆ. 72 ವರ್ಷಗಳ ಸಾಹಸ, 72 ವರ್ಷಗಳ ಪರೀಕ್ಷೆ laboratory ಅವರ ಪ್ರಯೋಗ-ಗಳು ಎಲ್ಲಾ ಫೇಲ್ ಆದವು. ನನ್ನದೂ ರಥ ಸಾಗಬಹುದು ಎಂಬುದು ನನ್ನ ನಂಬಿಕೆ, ಅಥವಾ ನನ್ನ ರಥ ಸಾಗಬಹುದು ಎಂದು ನಿಮ್ಮದು. ಇದು ರಥ ಸಾಗುವ ದಾರಿಯಲ್ಲಿಲ್ಲ. ಯಾರದೇ ರಥ ಸರಿಯಾಗಿ ಸಾಗುವುದಾದರೆ ಸರಿಪಡಿಸೋಣ. ದೇಶ ಒಂದು ದೃಷ್ಟಿಯಿಂದ ಇನ್ನೊಂದು ಮಟ್ಟಕ್ಕೆ ಹೋಗಬೇಕಾದರೆ ಸ್ಯಾಕ್ರಿಫೈಸ್ ಆಗಲೇಬೇಕಾಗುತ್ತದೆ. ಬ್ಲಡ್‌ಷೆಡ್ ಆಗಲೇಬೇಕಾಗಿದೆ. ಕೆಲವು ದೇಶ-ಗಳಲ್ಲಿ ಆಗಿದೆ. ಇಲ್ಲಿ ಆಗಿಲ್ಲ. ಇಲ್ಲಿ ಬ್ಲಡ್‌ಷೆಡ್ ಮಾಡೋಣ ಎಂದು ಅಲ್ಲ ನಾನು ಹೇಳಿದ್ದುದು, ಇದಕ್ಕೆ

ಉತ್ತರ ಏನೆಂದರೆ ದಯೆ ಮನೆಯಿಂದ ಶುರುವಾಗಬೇಕು. ಧರ್ಮ ಮನೆಯಿಂದ ಶುರುವಾಗಬೇಕು. ಹಾಗೆಯೇ ನಮ್ಮ ಈ ಸದನದ ಪ್ರತಿಯೊಬ್ಬ ಸದಸ್ಯರಿಂದ ಶುರುವಾಗಬೇಕು ಇವತ್ತು ಕಂಟ್ರೋಲ್ ಓವರ್ ಅಡ್ಮಿನಿಸ್ಟ್ರೇಷನ್. ಹಾಗೆಂದು ನೀವು ಹೋದವರೇ ತಹಶೀಲ್ದಾರ್‌ರವರನ್ನು ಕರೆದು ನಾಳೆ ಬೆಳಿಗ್ಗೆ ನೀನು ಹೀಗೆ ಮಾಡಿದ್ದರೆ ಅದು ಹಾಗೆ ಆಗುತ್ತಿತ್ತು, ನಿನ್ನ ಊರಿಗೆ ಕಳುಹಿಸಿ ಬಿಡುತ್ತೇನೆ, ನೋಡು, ಎಂದು ಹೇಳುವುದಲ್ಲ. ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಬೇರೆ. ನೈತಿಕ ಭಯ ಬೇರೆ. ನನ್ನ ಪಾರ್ಟಿಯವರೇ ನನಗೆ ಕೇಳಿದರು. ನಮಗೇನು ಕೆಲಸ? ಎಂಎಲ್‌ಎ ಆದವನು ನಾನೊಂದು ಐದು ಮನೆ ಕೊಡಲಿಕ್ಕಾಗಲಿಲ್ಲ. ಎಂದರೆ ಹೇಗೆ? ಆಯಿತು, ಎಂಎಲ್‌ಎ ಆದವನು ಮನೆ ಕೊಡಬೇಕು. ನಾವು ಎಂ.ಎಲ್.ಎ.ಗಳಾಗಿದ್ದಾಗ ಮನೆಯೂ ಇಲ್ಲ. ಗುಡಿಸಲೂ ಇಲ್ಲ. ನಮಗೆ ಸಂಬಳವೂ ಬಹಳ ಕಡಿಮೆ ಬರುತ್ತಿತ್ತು. ಆದರೂ ಶಾಸಕರ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಕೆಲವು ಸವಲತ್ತುಗಳು ಬೇಕು. ಅದನ್ನು ಒಪ್ಪಿಕೊಳ್ಳುತ್ತೇನೆ. ಶಾಸಕರು ಹಾಗೆ ಬೀದಿಯಲ್ಲಿ ಓಡಾಡಿ ಕೊಂಡಿರಬೇಕು ಎಂದಲ್ಲ. ಆದರೆ ಯಾವ ದೃಷ್ಟಿಯಿಂದ ಯಾವ ಸವಲತ್ತು ಬೇಕು ನಮಗೆ. ಯಾರನ್ನು ಹೇಗೆ ನಾವು ಇವತ್ತು ನಿಭಾಯಿಸಬಲ್ಲೆವು. ಅದನ್ನು ನಾವು ಇವತ್ತು ಅರ್ಥಮಾಡಿಕೊಳ್ಳದೇ ಹೋದರೆ ಬರೀ ಯಾರೋ ಒಬ್ಬ ಅಧಿಕಾರಿ, ಅವನು ಇಷ್ಟು ವರ್ಷದಿಂದ ಇಲ್ಲಿದ್ದಾನೆ, ಇಷ್ಟೆಲ್ಲಾ ಪಾಲಿಟಿಕ್ಸ್ ಮಾಡುತ್ತಾನೆ, ಅವನೆಲ್ಲಾ ಬಿಜೆಪಿ ಪರ ಇರುವವರನ್ನೇ ಕೂರಿಸಿಕೊಂದು ಮಾತನಾಡುತ್ತಾನೆ ಎಂದು ನಮ್ಮ ಡೆಪ್ಯುಟಿ ಕಮಿಷನರ್ ಮೇಲೆ ನಮ್ಮವರೇ ಬಂದು ಹೇಳುತ್ತಿದ್ದರು. ಬಿಜೆಪಿಯವರಾದರೂ ಕುಳಿತುಕೊಳ್ಳಲಿ, ಕಮ್ಯುನಿಸ್ಟ್-ನವರಾದರೂ ಕುಳಿತುಕೊಳ್ಳಲಿ. ಜನರಿಗೆ ಏನಾದರೂ ತೊಂದರೆ ಕೊಟ್ಟರೆ ನಮ್ಮ ಅಧಿಕಾರಿಯನ್ನು ನಾವು ಹ್ಯಾಂಗ್ ಮಾಡೋಣ. ಜನರ ಕೆಲಸ ನಾವು ಮಾಡುವಾಗ ಬಿಜೆಪಿ ಎಂಎಲ್‌ಎ ಇದ್ದಾಗ ಜನರ ಕೆಲಸ ಮಾಡಬಾರದು ಎಂದು ಏನೋ ಇಲ್ಲವಲ್ಲಾ. ಅಥವಾ ಬಿಜೆಪಿ ಇದ್ದ ಸರ್ಕಾರಗಳು ಹಾಗೂ ಬೇರೆಯವರು ಇದ್ದ ರಾಜ್ಯಗಳನ್ನೂ ನಾವು ನೋಡಿದ್ದೇವೆ, ನಮಗೂ ಗೊತ್ತಿದೆ. ಅದಕ್ಕೆ ಇವತ್ತು ಸರ್ಕಾರ ಅಂದರೆ, ಪ್ರತಿ ಒಂದಕ್ಕೂ ಸರ್ಕಾರ, ಪ್ರತಿ ಒಂದಕ್ಕೂ ಸರ್ಕಾರದ ಮೇಲೆ ಹೇಳುವುದು. ಈ ಆಟಿಟ್ಯುಡ್ ಟು ಗೌರ್ನಮೆಂಟ್ ಇದು ಸರ್ವಾಂತರ್ಯಾಮಿ; ಸರ್ವಶಕ್ತಿ ಎಲ್ಲಾ ಇದೆ. ಕೆಲವು ದೇಶದಲ್ಲಿ ಸರ್ಕಾರಿ ನೌಕರ ಎಂದರೆ ನಗುತ್ತಾರೆ. ಅಲ್ಲಿ ಸರ್ಕಾರಿ ಕೆಲಸಕ್ಕೆ ಯಾರೂ ಸೇರುವುದಿಲ್ಲ. ನಾರ್ವೆ, ಸ್ವೀಡನ್ ದೇಶಕ್ಕೆ ಯಾರಾದರೂ ಹೋಗಿ ಬಂದಿರಬಹುದು. ಅಲ್ಲಿ ಸರ್ಕಾರಿ ಕೆಲಸಕ್ಕೆ ಯಾರೂ ಸೇರುವುದಿಲ್ಲ. ಏಕೆಂದರೆ ಬೇರೆ ಕಡೆ ಸುಖವಾಗಿರುತ್ತೇವೆ, ನಮ್ಮ ಸ್ವಾತಂತ್ರ ಏಕೆ ಕಳೆದುಕೊಳ್ಳಬೇಕು ಎನ್ನುತ್ತಾರೆ. ಸರ್ಕಾರಿ ಕೆಲಸ ಮಾಡಿದರೆ ನಾವು ನಿಷ್ಠೆಯಿಂದ ದುಡಿಯ ಬೇಕಾಗುತ್ತದೆ ಎಂದು. ಇಲ್ಲಿ ಹಾಗಲ್ಲ ಸರ್ಕಾರಿ ಕೆಲಸ, ಏನಾದರೂ ಕೆಲಸ ಬೇಕು ಸರ್ಕಾರಿ ಕೆಲಸ ಬೇಕು, ಏಕೆ? ಮಳೆ ಇರಲಿ, ಬೆಳೆ ಇರಲಿ, ಇಲ್ಲದೇ ಇರಲಿ. ರೈತರು ಬದುಕಿದರೂ ಬದುಕಲಿ, ಕಾರ್ಮಿಕರು ಸತ್ತರೂ ಸಾಯಲಿ ಇವರಿಗೆ ಸಂಬಳ ಬರುತ್ತದೆ. ಇವನು ಅಂದರೆ ಯಾರು? ಅವನು ನನ್ನ ಮಗ ಇರಬಹುದು ಅಥವಾ ನಿಮ್ಮ ತಮ್ಮ ಇರಬಹುದು. ಸರ್ಕಾರಿ ನೌಕರಿಯಲ್ಲಿ ಆಸಕ್ತಿಯನ್ನು ಹುಟ್ಟಿಸಿ ಸೆಕ್ಯುರಿಟಿ ಆಫ್ ಲೈಫ್. ಸರ್ಕಾರಿ ಕೆಲಸ ಅಂದರೆ ಸೆಕ್ಯುರಿಟಿ ಆಫ್ ಲೈಫ್ ಇರುತ್ತದೆ.

ಇನ್ನೇನೂ ಅಲ್ಲ, ಅವನು ಚೆನ್ನಾಗಿ ದುಡಿಯಬೇಕು ಮಾಡಬೇಕು ಎಂದಲ್ಲ. ಈ ಸೆಕ್ಯುರಿಟಿಗೋಸ್ಕರ ನಾವು ಇವತ್ತು ಈ ಆಡಳಿತ ನಾನು ಹೌಸ್ ಆಫ್ ಕಾಮನ್ಸ್‌ನಲ್ಲಿ ಅವರ ತ್ರಿಕೋಣ ಇದೆಯಲ್ಲಾ ಅದು ನೋಡಿದ್ದೇನೆ. ಆಡಳಿತ ಪಿರಮಿಡ್ ಇಲ್ಲಿಗಿಂತ ಬಹಳ ಮೇಲೆ ಇದೆ. ನಮ್ಮದು ಹಾಗೆ ಆಗಿಲ್ಲ; ಕೆಲವು ಸಾರಿ ಪಿರಮಿಡ್ ತಿರುಗಾಗಿ ಬಿಟ್ಟಿದೆ. ಟಾಪ್ ಆಫೀಸರ್ಸ್ ಬಹಳ, ಕೆಳಗೆ ಕೆಲಸ ಮಾಡುವವನು ಕಡಿಮೆ.

Mr. SPEAKER :- Top heavy.

ಶ್ರೀ ಜೆ.ಹೆಚ್. ಪಟೇಲ್:- ಹೌದು. ಟಾಪ್ ಹೆವಿ; ಟಾಪ್ ಆಫೀಸರ್ಸ್ ಬಹಳ, ಕೆಳಗೆ ಕೆಲಸ ಮಾಡುವವನು ಬೇರೆ. ಯಾರೋ ಒಂದು ದಿವಸ ಹೇಳಿದರು. ಒಂದು ಸೂಜಿ ಏಳು ಹೊರು ಎಂದರೆ ಯಾರು ಹೊರುತ್ತಾರೆ? ಹಾಗಾಗಿದೆ. ಏಳು ಜನ ಸೂಜಿ ಹೊರುವ ಕೆಲಸ ಮಾಡಿಕೊಂಡು ಬಂದಿದ್ದೇವೆ. ಈಗೇನು ನಾನೂ ಗೌಡರು ಬಂದ ತಕ್ಷಣ ಬಂತು ಎಂದಲ್ಲ. But, it takes time, it takes time. ಈಗ ಒಂದೊಂದು ಕಡೆನೂ ಬಿಗಿ ಮಾಡುವಾಗ ಎಲ್ಲಾ ಆಗುತ್ತದೆ. ಮಾನ್ಯ ಬೈರೇಗೌಡರ ವಿಚಾರ. ಬೈರೇಗೌಡರು ಸರ್ಕಾರಿ ನೌಕರನನ್ನು ಹೊಡೆದು ಏನು ಪ್ರಚಾರ ಮಾಡಿದರು? ಬೈರೇಗೌಡರು ಸರ್ಕಾರಿ ನೌಕರರನ್ನು ಹೊಡೆದು ಬಿಟ್ಟರು, ಅವನಿಗೆ ಕಾಲು ಮುರಿದು ಆಸ್ಪತ್ರೆಗೆ ಸೇರಿಸಿ ಬಿಟ್ಟರು ಎಂದು ಹೇಳಿ ಪ್ರಚಾರ ಆಯಿತು. ಆತ ಮಾಡಿದ್ದೇನು? ಏನು ಮಾಡುವುದಕ್ಕೆ ಹೋಗಿದ್ದ? ಆತ ತಾನು ಇಲ್ಲದೇ ಇದ್ದದ್ದನ್ನು ತಿದ್ದಿಕೊಳ್ಳುವುದಕ್ಕೋಸ್ಕರ ಪುಸ್ತಕ ಹಿಡಿದುಕೊಂಡು ಕುಳಿತಿದ್ದ. ಅಂತಹವರು ಎಷ್ಟು ಜನ ಇಲ್ಲ. ಆ ತಾಲ್ಲೂಕು ಲೆವೆಲ್‌ನಲ್ಲಿ ಅಂತಹ ಎಷ್ಟು ಜನ ಇಲ್ಲ? ಹಳ್ಳಿಗರು ಈತ ಶುಕ್ರವಾರ ಊರಿಗೆ ಹೋದವನು ಮಂಗಳವಾರ ಬರುತ್ತಾನೆ. ಅವರು ಬಂದು ಓಡಾಡಿ ಓಡಾಡಿ ಸಾಕಾಗಿ ಇಲ್ಲಿಗೆ ಬರುವುದೇ ಬೇಡಪ್ಪ ಎಂದು ಶಾಪ ಹಾಕುತ್ತಾರೆ. ಅದು ಯಾವ ಸರ್ಕಾರನಪ್ಪಾ ಎಂದು ಸರ್ಕಾರಕ್ಕೆ ಶಾಪ ಹಾಕಿ ಇವರ ಮನೆ ಹಾಳಾಗಿ ಹೋಗಲಿ ಎಂದು ಊರಿಗೆ ಹೋಗುತ್ತಾರೆ. ಯಾರು ಪೋಲೀಸರ ಹತ್ತಿರ ರಕ್ಷಣೆಗೆ ಹೋಗುತ್ತಾರೆ ಅವರು ಅಲ್ಲಿ ಹೊಡೆತ ತಿಂದರೆ ಅವರಿಗೆ ಏನು? ದೇವರಿಗೆ ಮೊರೆ ಇಡುವುದು. ಅಕ್ಕಿ ಮಾರುವವನು ವಿಷ ಮಾರಿದರೆ, ತುಪ್ಪದಲ್ಲಿ ಎಣ್ಣೆ ಸೇರಿಸುವವನು, ಅಕ್ಕಿಯಲ್ಲಿ ಕಲ್ಲು ಸೇರಿಸುವವನು, ದೇವರ ಹೆಸರಿನಲ್ಲಿ ದಾನ ಮಾಡುವವನು. ದೊಡ್ಡ ದೊಡ್ಡ ದೇವಸ್ಥಾನಗಳನ್ನು ಕಟ್ಟಿಸುವವನು. ಇವನಿಗೆ ಏನು ಮಾಡುತ್ತೀರಿ? ಇವನನ್ನು ಎಲ್ಲಿಗೆ ಕಳುಹಿಸುತ್ತೀರಿ. ನೀವು ಒಂದು ದೃಷ್ಟಿಯಲ್ಲಿ, ಒಂದು ಲೆವೆಲ್‌ನಲ್ಲಿ ಅವರಿಗೆ ರೆಸ್ಪೆಕ್ಟಬಲಿಟಿ ಬಂದು ಬಿಡುತ್ತದೆ. ಅವರು ಕೆಳಗೆ ಇಳಿಯುವುದಿಲ್ಲ. ಅವರು ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಟಾಪ್‌ಗೆ ಹೊರಟು ಹೋಗಿಬಿಟ್ಟರೆ ಅವರು ಟೋಕಿಯೋಗೊ, ವಾಷಿಂಗ್‌ಟನ್‌ಗೆ ಕನೆಕ್ಷನ್ ಇರುತ್ತದೆ. ನಮ್ಮ ನಿಮ್ಮ ಕನೆಕ್ಷನ್ ಇರುವುದಿಲ್ಲ. ನಾವು ಇಲ್ಲಿ ಬಾಟಮ್‌ನಲ್ಲಿ ಇರುತ್ತೇವೆ. ಹೀಗೆ ಈ ದೇಶನೇ ಒಂದು country of compartments ಆಗಿದೆ. ಹಳ್ಳಿಯದು ಒಂದು ಕಂಪಾರ್ಟ್‌ಮೆಂಟ್ಸ್, ಟೌನ್‌ಗಳ ಒಂದು ಕಲ್ಚರ್, ಸಿಟಿಗಳದ್ದೇ ಮತ್ತೊಂದು, ಸ್ಲಮ್ಸ್‌ದೇ ಒಂದು. ಹೀಗಾಗಿ ಒಂದು ದೃಷ್ಟಿಯಿಂದ ನಾನು ದುರಂತದ

ಭವಿಷ್ಯ ಹೇಳುತ್ತೇನೆ ಎಂದಲ್ಲ. ನಾವು ಈ ಸಮಾಜವನ್ನು ಈ ನಡವಳಿಕೆಗಳನ್ನು ತಪ್ಪಿಸದೇ ಹೋದರೆ ಬರೇ ಅಧಿಕಾರಿಗಳನ್ನು ನಂಬಿ ನಾವು ಕುಳಿತು, ಅವನನ್ನು ತೆಗೆ ಇವನನ್ನು ತೆಗಿ ಎಂದು ಕೂತಲೆ we are out for some disaster. ಅದು ಒಂದು, ಅದನ್ನು ಆಡಳಿತಾತ್ಮಕವಾಗಿ, ಮಾನ್ಯ ನಂಜೇ-ಗೌಡರು ಹೇಳಿದಾಗ ನನಗೂ ಅನಿಸಿತು. ಏಕೆ ಬೇಕು ಇಷ್ಟೊಂದು ಐ.ಎ.ಎಸ್. ಆಫೀಸರ್ಸ್? We have sufficient people here. ಹಿಂದೆ ಒಂದು ಸಾರಿ ಕಾಮರಾಜ್ ನಾಡಾರ್ ಅವರು ಬೇಡವೇ ಬೇಡ ನಮಗೆ ದಿಲ್ಲಿ ಕಡೆ ಜನ; ನಮ್ಮ ಹಳ್ಳಿಯವರನ್ನು ಹಚ್ಚಿಕೊಂಡು ಕೆಲಸ ಮಾಡುತ್ತೇನೆ ಎಂದು ಹೇಳಿದರು ಎಂದು ಕೇಳಿದ್ದೆ. ಬಹುಶಃ ನೀವು ಯಾಕಾದರೂ ಆ ವಯಸ್ಸಿನಲ್ಲಿ ಇದ್ದರೋ ಏನೋ ಗೊತ್ತಿಲ್ಲ. ಅದಕ್ಕೆ ನಾನು ನಮ್ಮ ಆಫೀಸರ್ಸ್‌ಗಳನ್ನು ಕೇಳಿದೆ. ಎಲ್ಲೆಲ್ಲಿ ಎಷ್ಟು ಜನ ಇದ್ದಾರೆ ವಶಿಷ್ಟರು. ತಮಿಳುನಾಡಿನಲ್ಲಿ 314 ಜನ ಇದ್ದಾರೆ. ಆಂಧ್ರಪ್ರದೇಶದಲ್ಲಿ 326 ಜನ ಇದ್ದಾರೆ. ಕೇರಳ-ದಲ್ಲಿ 162 ಜನ ಇದ್ದಾರೆ. ಮಹಾರಾಷ್ಟ್ರದಲ್ಲಿ 364 ಜನ ಇದ್ದಾರೆ. ಕರ್ನಾಟಕದಲ್ಲಿ 258 ಜನ ಇದ್ದಾರೆ. ಈ ಪ್ರಪೋಷನ್ ಅನ್ನು ಹೇಗೆ ಕಡಿಮೆ ಮಾಡಬೇಕು? ಅಂದರೆ ನಾವು ಇಲ್ಲಿ ಕರ್ನಾಟಕದಲ್ಲಿ ಕಡಿಮೆ ಮಾಡುವುದಕ್ಕೆ ಬರುವ ಹಾಗೆ ಇಲ್ಲ. ಅಲ್ಲಿ ದೆಹಲಿಯಲ್ಲಿ ಕಡಿಮೆ ಮಾಡಬೇಕು. ನಿಮ್ಮ ತಲೆಗೆ ಟೋಪಿ ಹೊಲಿಯುವುದು ಅಲ್ಲಿ ನಮ್ಮ ಸೈಜಿಗೆ ಅಲ್ಲ ಅವರ ಟೋಪಿ. ಅವರ ಟೋಪಿ ಸೈಜಿಗೆ ನಮ್ಮ ತಲೆ. ಅದು ಛೇಂಚ್ ಆಗಬೇಕು. That has got to be changed. ಅದಕ್ಕೆ ತಾವು ಕೊಟ್ಟಿರುವ ಸಲಹೆಗಳನ್ನು ನೆನಪಿನಲ್ಲಿ ಇಟ್ಟುಕೊಂಡಿದ್ದೇನೆ. ಆಮೇಲೆ ಬಿ.ಡಿ.ಎ.ನಲ್ಲಿ ನಡೆಯುವ ಅನಾಹುತಗಳ ಬಗ್ಗೆ ಮಾನ್ಯ ಅನಂತ್‌ನಾಗ್ ಅವರಿಗೆ ವಹಿಸಿಕೊಟ್ಟಿದ್ದೇವೆ. ಅವರು ಉತ್ತರ ಕೊಡುತ್ತಾರೆ. ಉತ್ತರ ಕೊಡುವು-ದಕ್ಕೆ ಆಗದೇ ಇರುವಂತಹ ಘಟನೆಗಳೂ ಅಲ್ಲಿ ಇದ್ದಾವೆ. ನೀವು ಕೇಳಿದಿರಿ ಎಂದು ಉತ್ತರ ಕೊಡುವು-ದಿಲ್ಲ. ನಿಜವಾಗಿ ಸರಿಯಾಗಿ ಆಗದೇ ಇರುವಂತಹ ಘಟನೆಗಳೂ ಇವೆ. ಅದರಲ್ಲಿ ಬಹಳ ಜನರ ಕೈವಾಡ ಇದೆ ಬಹಳ ಜನರ ಪ್ರಭಾವ ಇದೆ. ಆ ಮಾತು ಒಟ್ಟಿಗೆ ಇರಲಿ. ಅನಂತರ ಪವರ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಪವರ್ ಬಗ್ಗೆ ಹೇಳುವಾಗ ಕೋಜೆಂಟ್ರಿಕ್ಸ್ ಇರಲಿ ಅಥವಾ ಬೇರೆ ಬೇರೆ ಪ್ರಾಜೆಕ್ಟ್ಸ್‌ಗಳ ವಿಚಾರ. ಅದು 25, 50 ಮೆಗಾವ್ಯಾಟ್ ಪ್ರಾಜೆಕ್ಟ್ಸ್‌ಗಳು ಇರಲಿ. ಒಂದು ವರ್ಷದಲ್ಲಿ ಬರುವಂತಹದು ಇರಲಿ, ಮೂರು ವರ್ಷದೊಳಗೆ ಬರುವುದು ಇರಲಿ. ಒಂದು ವಿಚಾರದಲ್ಲಿ ತಾವು ನನಗೆ ಸಹಕಾರ ಕೊಡಬೇಕು. ಮಂಗಳೂರಿನ ಮಾನ್ಯ ಸಭಾಪತಿಯವರು ಏನಾದರೂ ಆಗಲಿ ಆಗ-ಕೂಡದು ಎಂದು ಬಹಳ ಚೆನ್ನಾಗಿ ಭಾಷಣ ಮಾಡಿದರು. ಅವರೂ ನಮ್ಮ ಹಾಗೆ ಚೆನ್ನಾಗಿ ಭಾಷಣ ಮಾಡುತ್ತಾರೆ. ವಿಷಯ ಏನಪ್ಪಾ? ಪವರ್ ಬೇಡ ಎಂದರೆ ಎಲ್ಲಿ ಪವರ್‌ನ್ನು ಜನರೇಟ್ ಮಾಡು-ತ್ತೀರಿ? ಹೇಗೆ ಮಾಡುತ್ತೀರಿ? ಅದನ್ನು ಕುಳಿತು ಮಾತನಾಡೋಣ. ಪರಿಸರ ಮಾಲಿನ್ಯದ ಬಗ್ಗೆ ಹೇಳುವ-ವರಷ್ಟೇ ಆಸಕ್ತಿ ನಮ್ಮದೂ ಇದೆ. ನಾನು ಅದಕ್ಕೇ ಕೇಳುವುದು ಪರಿಸರ ಮಾಲಿನ್ಯದ ಬಗ್ಗೆ ಇವತ್ತು ಬೇರೆ ದೇಶಗಳು ಬಹಳ ಹಣ ಖರ್ಚು ಮಾಡಿವೆ. ನಾನು ಹಿಂದೆ ಒಂದು ಸಾರಿ ಹೇಳಿದ್ದೆ. ನಾವು ಒಂದು ವರ್ಷಕ್ಕೆ 18 ಕೋಟಿ ಟನ್ ಆಹಾರವನ್ನು ಸುಡುತ್ತೇವೆ. ಅನ್ನ ಮಾಡುವುದಕ್ಕೆ, ಮುದ್ದೆ ಮಾಡುವುದಕ್ಕೆ ಮತ್ತೊಂದಕ್ಕೆ, 18 ಕೋಟಿ ಟನ್ ಮರ ಕಡಿದರೆ ಇನ್ನು ಹತ್ತು ವರ್ಷಗಳಲ್ಲಿ ಬಹಳಷ್ಟು ಅಲ್ಲ, ಒಂದು

ಶತಮಾನದಲ್ಲಿ ಆಡು, ಮೇಕೆ ತಿನ್ನುವುದಕ್ಕೆ ಒಂದು ಗರಿ ಸೊಪ್ಪು ಸಿಗುವುದಿಲ್ಲ. ಐಸಾಕ್ ಅಸಿಮಾ ಎನ್ನುವ ಭೌತಶಾಸ್ತ್ರಜ್ಞ 2040ನೇ ಇಸವಿಯಲ್ಲಿ ನಮ್ಮ ಪಾಪ್ಯುಲೇಷನ್ ಎರಡೂವರೆಯಷ್ಟು ಆಗು-ತ್ತದೆ; 1100 ಕೋಟಿ ಆಗುತ್ತದೆ ಎಂದು ತಿಳಿಸಿದ್ದಾನೆ. 1100 ಕೋಟಿ ಆದಾಗ ಹಸಿರು ಸಿಗದೇ ಇದ್ದರೆ ಹಸಿರನ್ನು ತಿಂದು ಬದುಕುವ ಪ್ರಾಣಿಗಳು ಸಾಯುತ್ತವೆ. ಆ ಪ್ರಾಣಿಗಳನ್ನು ತಿಂದು ಬದುಕುವ ಮನುಷ್ಯ ಸಾಯುತ್ತಾನೆ. ಮನುಷ್ಯ ತಿನ್ನುವ ಪ್ರಾಣಿಗಳು ಹಸಿರನ್ನು ತಿಂದು ಬದುಕುತ್ತವೆ. ಪ್ರಾಣಿಗಳು ತಿಂದು ಬದುಕುವಂತಹ ಪ್ರಾಣಿಗಳನ್ನು ಮನುಷ್ಯ ತಿನ್ನುವುದಿಲ್ಲ. ಅವನಿಗೆ ಜಗಿಯುವುದಕ್ಕೆ ಆಗುವುದಿಲ್ಲ. ನೀವು ಏನಾದರೂ ಪ್ರಯತ್ನ ಮಾಡಿರಬಹುದು. ಹಲ್ಲಿ, ಪಲ್ಲಿ ಯಾರಿಗೂ ತಿನ್ನುವುದಕ್ಕೆ ಆಗುವುದಿಲ್ಲ, ಅದು ಗೊತ್ತಿರುವುದೇ. ಮಾನ್ಯ ಖರ್ಗೆಯವರು ಏನಾದರೂ ತಿಂದರೂ ತಿನ್ನಬಹುದು, ಏಕೆಂದರೆ ಅವರು ಗಟ್ಟಿಯಾಗಿದ್ದಾರೆ. ಆದರೆ ಅದು ಆಗುವುದಿಲ್ಲ. ನೇಚರ್‌ಗೆ ಅದು ಒಗ್ಗುವುದಿಲ್ಲ. ಅವರ ಊರಿನಲ್ಲಿ ಅವರು ಹುಲಿ ತಿಂದುಕೊಳ್ಳುತ್ತಾ ಬಂದಿದ್ದಾರೆ. ಅದಕ್ಕೆ ಪ್ರಕೃತಿ ವಿಕೋಪದಿಂದ ಮನುಷ್ಯನನ್ನು ಉಳಿಸ-ಬೇಕು ಎನ್ನುವ ಸದಿಚ್ಛೆ ಇರುವವರು ಅವರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಆದರೆ ವಾಸ್ತವಿಕವಾಗಿ ಇವತ್ತು ಇರತಕ್ಕ ಇಂಡಸ್ಟ್ರೀಯಲ್ ವರ್ಲ್ಡ್ ವಿಚಾರ. We have trapped ourselves into a industrial culture. ಅದನ್ನು ಬ್ರೇಕ್ ಮಾಡುವುದಕ್ಕೆ ಸಾಧ್ಯ ಆಗುತ್ತಾ ಇಲ್ಲ. ಅದು ಬ್ರೇಕ್ ಆಯಿತು ಎಂದು ತಿಳಿದುಕೊಂಡು, ಇಂಡಸ್ಟ್ರೀಸ್ ಕ್ಲೋಸ್ ಆದರೆ ಎಂತಹ ಭಯಾನಕವಾದ ದೃಷ್ಟಿ ಬರಬಹುದು? ಮನುಷ್ಯ ಏನು ತಿಂದು ಬದುಕುತ್ತಾನೆ ಯಾವುದಕ್ಕೋಸ್ಕರ ಅಣು ಪ್ರಸಾರ ಆಗಬಾರದು ಎಂದು ಹೇಳುತ್ತಿದ್ದೆವು ಅದು ಏಕ ಕಾಲದಲ್ಲಿ ಬರತಕ್ಕ ಪ್ರಸಂಗ ಬಂದರೂ ಬರಬಹುದು. ಇವೆಲ್ಲಾ connected physical, astronomical ಅಥವಾ ಆಕಾಶಕ್ಕೆ ಸಂಬಂಧ ಪಟ್ಟ ವಿಷಯಗಳು ಇದ್ದಾವೆ. ಆದರೆ ಇವತ್ತು ಎಲೆಕ್ಟ್ರಿಸಿಟಿ ಇಲ್ಲದೇ ನಿವು ಫ್ಲೋರ್ ಮಿಲ್ ಹೇಗೆ ನಡೆ-ಸುತ್ತೀರಿ? ಪರಿಸರ ಮಾಲಿನ್ಯದ ಬಗ್ಗೆ ಮಾತನಾಡುವ ಮಹಾ ಪಂಡಿತರು ಕಾರ್‌ನಲ್ಲಿ ಬರುತ್ತಾರೆ. They pollute air, they burn oil. ಆ ರೀತಿ ಏನೂ ಬರ್ನ್ ಮಾಡದೇ ಇರಬೇಕು ಎಂದರೆ ಎಲ್ಲಾ ಸೈಕಲ್ ಮೇಲೆ ಓಡಾಡೋಣ ಹೊತ್ತು ಮುಳುಗುವ ಮೊದಲೇ ಮಲಗೋಣ, ಹೊತ್ತು ಹುಟ್ಟಿದ ಮೇಲೆ ಏಳೋಣ. ಇವೆಲ್ಲಾ ನಿರರ್ಥಕ ಮಾತು ಸಭಾಧ್ಯಕ್ಷರೇ, ಅಥವಾ ಬೇರೆ ಮಾರ್ಗ ಸೂಚಿಸಿ. I am prepared to have talks. ಆದ್ದರಿಂದ ಎಲೆಕ್ಟ್ರಿಸಿಟಿ ಪ್ರಾಜೆಕ್ಟ್‌ಗೆ ವಿನಾಕಾರಣ ಅಡ್ಡಿ ಬರದ ಹಾಗೆ ನಮ್ಮ ಸ್ನೇಹಿತರು ಮಾಡಿದರೆ ಒಳ್ಳೆಯದು. ಇನ್ನು ಮುಂದಿನ ಮೂರುವರೆ ವರ್ಷ, ನಾನು ಹೆಚ್ಚು ಕೇಳುತ್ತಾ ಇಲ್ಲ. ಐದು ವರ್ಷದಿಂದ ಎಷ್ಟು ಕಷ್ಟ ಅನುಭವಿಸುತ್ತಿದ್ದೇವೆ. ಆ ಕಷ್ಟವನ್ನು ಪರಿಹಾರ ಮಾಡುವುದರಲ್ಲಿ, ಸರ್‌ಪ್ಲಸ್ ಆಗುತ್ತದೆ ಎಂದು ಹೇಳುವುದಿಲ್ಲ. May be; we may reach about 10 to 10.5 M.W. of electricity. ಅಷ್ಟಕ್ಕೆ ಮಾಡಿದರೆ ಒಳ್ಳೆಯದಾಗು-ತ್ತದೆ. ಕರ್ನಾಟಕ ಎಂದರೆ ಜನ ಇವತ್ತು ಬರುತ್ತಾರೆ ರಾಮಕೃಷ್ಣ ಅವರೇ, ಕರ್ನಾಟಕ ಎಂದರೆ ಏಕೆ ಬರುತ್ತಾರೆ ಎಂದರೆ ಅವರು ನಮ್ಮ ಸಂಸ್ಕೃತಿಯನ್ನು ನಮ್ಮ ಜನರ ಸಂಪನ್ನತೆ ಬಗ್ಗೆ ಬರುತ್ತಾರೆ. ಬೇರೆ ರಾಜ್ಯಕ್ಕೆ ಹೋಲಿಸಿ ಬಂದವರೆಲ್ಲಾ ಕರ್ನಾಟಕ ಬೇಕು ಎನ್ನುವವರು. ಹಾಗೆ ಬಂದವರನ್ನು ಸ್ವಾಗತ

ಮಾಡುತ್ತೇವೆ ಅಷ್ಟೆ. ಬೀಗರು ಬರುತ್ತಿದ್ದಾರೆ ಎಂದರೆ ನಮ್ಮ ಮನೆಯಲ್ಲಿ ಇರುವ ಅಕ್ಕಿಗಿಂತ ಜಾಸ್ತಿ ಬರುತ್ತಿದ್ದಾರೆ. ಆದರೆ ಅವರನ್ನು ಹೋಗಿರಿ ಎನ್ನುವ ಹಾಗೆ ಇಲ್ಲ, ಉಳಿಸಿಕೊಳ್ಳುವ ಹಾಗೂ ಇಲ್ಲ. ಈ ಸ್ಥಿತಿ ಇದೆ. ಹೀಗಿರುವಾಗ ನಮ್ಮ ಎಲೆಕ್ಟ್ರಿಸಿಟಿ ಬಗ್ಗೆ, ಇರಿಗೇಷನ್ ಪೊಟೆನ್‌ಷಿಯಲ್ಸ್ ಬಗ್ಗೆ ಮಾನ್ಯ ನಾಗೇಗೌಡರು ಮಾತನಾಡುತ್ತಾರೆ. ಅದೇ ರೀತಿಯಾಗಿ ಇವತ್ತು ಕೆಲವು ಕಡೆ ಬರಗಾಲ ಪರಿಸ್ಥಿತಿ ಇದೆ. ಕೆಲವು ಕಡೆ ಹೆವಿ ರೇನ್ಸ್ ಇದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಎಲ್ಲವನ್ನೂ ನೋಡಬಹುದು. ನಮ್ಮ ರಾಜ್ಯ ಮಿನಿ ಭಾರತ ಇದ್ದ ಹಾಗೆ. ಹೆಚ್ಚು ಕಡಿಮೆ ಇಂಡಿಯಾದ ಮೂಲೆ ಮೂಲೆಯಲ್ಲಿ ಏನು ಗುಣ-ಗಳನ್ನು ಕಾಣಬಹುದು, ಅದನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಕಾಣಬಹುದು.

7.20 ಪಿ.ಎಂ.

ದೊಡ್ಡ ಕಾಡು ನೋಡುತ್ತೇವೆ, ಸಮುದ್ರ ನೋಡುತ್ತೇವೆ, ಬರ ನೋಡುತ್ತೇವೆ. ಕೃಷ್ಣಾ ಮೇಲ್ದಂಡೆ ಯೋಜನೆ ಜಾರಿಯಾದ ನಂತರ ರಾಯಚೂರು ಜಿಲ್ಲೆ ಸ್ಥಿತಿ–ಗತಿಯಲ್ಲಿ ಏನಾದರೂ ಸ್ವಲ್ಪ ಉತ್ತಮ ಗೊಳ್ಳಬೇಕೇ ಹೊರತು ಈಗಿರುವಂಥ ರೀತಿಯಲ್ಲಿ ಅಲ್ಲ. ಬಳ್ಳಾರಿ ಅಂತಹ ಕಡೆಗಳಲ್ಲಿ ಜನರು ಹೇಗೆ ಜೀವಿಸುತ್ತಾರೆಂದು ಯೋಚಿಸಿದಾಗ ಆ ಜಿಲ್ಲೆಯವರಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಎಂ.ಪಿ. ಪ್ರಕಾಶ್‌ರವರನ್ನು ನೋಡಿದಾಗ ಪರವಾಗಿಲ್ಲ, ನಾನಾ ರೀತಿಯ ಜಿಯೋ, ಎಕನಾಮಿಕಲ್, ಸೋಷಿಯಲ್ ಕಂಡೀಷನ್ಸ್ ಇರುವ ಈ ರಾಜ್ಯದಲ್ಲಿ ಜನರು ಬದುಕುತ್ತಾರೆಂದು ಗೊತ್ತಾಯಿತು. ಮಾನ್ಯ ವಿರೋಧಪಕ್ಷದ ನಾಯಕರು ಕೆಲವು ಸಲಹೆಗಳನ್ನು ಕೊಟ್ಟಿದ್ದು, ಅದರ ಬಗ್ಗೆ ನಾನು ಟಿಪ್ಪಣಿ ಮಾಡಿಟ್ಟುಕೊಂಡಿದ್ದು, ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಪಡುವುದಾದರೆ ಅದನ್ನು ನಾನು ಸರಿಪಡಿಸುತ್ತೇನೆ. But if that is the disease, symptoms ಕೈಯಲ್ಲಿ ಎಲ್ಲಿಯೋ ಒಂದೆ-ರಡು ಕಡೆ ಬೊಕ್ಕೆ ಬಂದರೆ ಅದಕ್ಕೆ ಮುಲಾಮು ಹಚ್ಚಿ ಸರಿಪಡಿಸಬಹುದು. ಆದರೆ, ರಕ್ತವೇ ಕೆಟ್ಟಿದ್ದರೆ ಹುಣ್ಣು ಇನ್ನೂ ಜಾಸ್ತಿಯಾಗಬಹುದು, ಕೆಟ್ಟಿರುವ ರಕ್ತವನ್ನು ಸರಿಪಡಿಸದ್ದಿದ್ದರೆ ದೇಹಕ್ಕೆ ಸಮಾಧಾನ-ವಾಗುವುದಿಲ್ಲ, ರಕ್ತ ಶುದ್ಧಗೊಳಿಸದೆ ಹುಣ್ಣನ್ನು ವಾಸಿ ಮಾಡುವುದಕ್ಕಾಗುವುದಿಲ್ಲ. ರಕ್ತವನ್ನು ಸರಿಪಡಿಸು-ವುದಕ್ಕೆ ಕೇವಲ ಸರ್ಕಾರವೇ ಒಂದು ಅಸ್ತ್ರವಲ್ಲ. ಆ ರಕ್ತ ಕೆಟ್ಟಿರುವುದಕ್ಕೆ ಬೇರೆ ಯಾವುದೋ ಒಂದು ಕೀಟ ಕಾರಣವಲ್ಲ ಅಥವಾ ಒಂದು ಜನಾಂಗ ಕಾರಣವಲ್ಲ. ಅದಕ್ಕೋಸ್ಕರ, ಅಮೇರಿಕಾದ ಇವೊತ್ತಿನ ಸಮಾಜ ಆರೋಗ್ಯ ಪೂರ್ಣವಾಗಿರಲು ಅವರು ಎಷ್ಟೆಷ್ಟು ಅಬ್ಸಾರ್ಬ್ ಮಾಡುತ್ತಾ ಹೋದರೋ ಆ ರೀತಿ ಅಬ್ಸಾರ್ಬ್ ಮಾಡಿಕೊಂಡು ನಾವು ಬರಲಿಲ್ಲ. ನಾವು ಕೆಲವರನ್ನು ಇಟ್ಟೆವು. ಅವರು ಜನರನ್ನು ಗುಂಡಿಟ್ಟು ಕೊಂದರು, ನಾವು ಗುಂಡಿಟ್ಟು ಕೊಲ್ಲಲಿಲ್ಲ. ಏಕೆಂದರೆ, ಆತ ಸತ್ತರೆ ಕಸ ಹೊಡೆಯುವುದಕ್ಕೆ ಒಬ್ಬ ಮನುಷ್ಯ ಕೂಡ ಇರುವುದಿಲ್ಲವೆಂದು. ಆದುದರಿಂದ, ಆತ ತಾನಾಗೇ ಸಾಯುವಂತೆ ಒಂದು ಮಂತ್ರ ಹೇಳಿಬಿಟ್ಟೆವು. We have killed our people, their soul, by reciting mantras. ನಮ್ಮವರು ಹೊಡೆದಾಡಿ ಕೊಲ್ಲುವ ಜನರಲ್ಲ, ಬಹಳ ಜಾಣರು. ನಾಲ್ಕೂವರೆ ಸಾವಿರ ವರ್ಷಗಳಷ್ಟು ಹಳೆಯದಾದ ಸಂಸ್ಕೃತಿ ಸಾಯುತ್ತದೆಯೇ ಎಂದುಕೊಂಡರೆ ಸಾಯುವುದಿಲ್ಲ. ಇದು

ಸಾಯುತ್ತದೆಯೇ ಎನ್ನುವುದರ ಬಗ್ಗೆ ಯಾರು ಬೇಕಾದರೂ ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಲಿ, ಸಾಯುವುದಿಲ್ಲ. ಇದರ ಇನ್‌ಹರೆಂಟ್ ಕ್ವಾಲಿಟಿ to survive ಇದೆ. India has inherent potential for survival. It will never be like Soviet Union. ಏಕೆಂದರೆ, ಬ್ಯಾಂಡೇಜ್ ಬೇರೆ ಇದೆ, ಇದನ್ನು ಕಟ್ಟಿರುವುದು ಬೇರೆ. ಭಾರತ ದೇಶದ ಬಗ್ಗೆ ಕಾಳಿದಾಸನ ವರ್ಣನೆ ಹೇಗಿದೆಯೆಂದರೆ, ಆತ ಹಿಮಾಲಯ ಪರ್ವತದ ಮೇಲೆ ಕುಳಿತು ಎರಡೂ ಕಡೆಗಳಿಗೂ ಕೈಗಳನ್ನು ಚಾಚುತ್ತಾನೆ. ಎಡಗಡೆ ಚಾಚಿದ ದಿಕ್ಕಿನ ಕಡೆ ಇವೊತ್ತು ಇಂಡೋನೇಷಿಯಾ, ಬಲಗಡೆ ಚಾಚಿದ ದಿಕ್ಕಿಗೆ ಕಾನ್‌ಸ್ಟಾಂಟಿನೋಪಲ್, ಇರಾನ್ ಇರಾಕ್ ಇದೆ. ಭಾರತ ಭೂಮಿ ಬರಬರುತ್ತಾ ಹಿಗ್ಗುತ್ತಾ, ಹಿಗ್ಗುತ್ತಾ ದೊಡ್ಡದಾಯಿತು. ನಾವು ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿದ್ದಾಗ ಇದ್ದಂಥ ಭಾರತ ಭೂಪಟವೇ ಬೇರೆ, ಈಗಿರುವುದೇ ಬೇರೆಯಾಗಿದೆ. ಹೀಗೆ ಮಾಡುತ್ತಾ ಹೋದರೆ ನಾವು ಬಹಳ ಸಣ್ಣ ಸಣ್ಣ ಭೂಪಟಗಳನ್ನು ಬರೆಯಬೇಕಾಗುತ್ತದೆ. ಆದುದರಿಂದ ಭೂಪಟ ಬರೆಯುವುದಕ್ಕೆ ಹೋಗುವುದು ಬೇಡ, ಇರುವ ವ್ಯವಸ್ಥೆಯಲ್ಲೇ ನಾವು ಮುಂದುವರಿದರೆ ಸಾಕು. ನಾನು, ಸಿದ್ಧರಾಮಯ್ಯ ಮತ್ತು ಎಂ.ಪಿ. ಪ್ರಕಾಶ್ ದೇವತೆಗಳಲ್ಲ. ನಮ್ಮಲ್ಲೂ ಸಹ ಸಾಮಾನ್ಯ ಮನುಷ್ಯರಲ್ಲಿ ಕಾಣಬಹುದಾದಂಥ ಗುಣಗಳನ್ನು ಕಾಣಬಹುದು. ಅದರಲ್ಲೂ ನನಗೂ ಮತ್ತು ನಂಜೇಗೌಡರಿಗೂ ಸಮಾನ ಗುಣಗಳಿವೆ. Whatever human effort we could do, we will try to do. ನಿರ್ದಿಷ್ಟ ಪ್ರಶ್ನೆಗಳಿದ್ದರೆ ಉತ್ತರಿಸುತ್ತೇನೆಂದು ಹೇಳುತ್ತಾ ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕಲ್ಪಿಸಿದ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಆಡಳಿತವನ್ನು ಸುಧಾರಣೆ ಮಾಡುವ ದೃಷ್ಟಿಯಿಂದ ಎಲ್ಲಾ ರೀತಿಯ ಸಹಕಾರ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆಂದು ವಿರೋಧಪಕ್ಷದ ಸದಸ್ಯರುಗಳೆಲ್ಲರ ಪರವಾಗಿ ನಿಮಗೆ ಆಶ್ವಾಸನೆ ಕೊಡುತ್ತೇನೆ. ತಾವು ನಿಜವಾಗಿಯೂ, ಪ್ರಾಮಾಣಿಕವಾಗಿ ಈಗ ಮಾತನಾಡುತ್ತಾ ಬರೀ ಕೊರತೆಗಳನ್ನು ಏನು ಹೇಳಿದಿರಿ, ಯಡಿಯೂರಪ್ಪನವರೇ ನನ್ನ ಕಾಲದಲ್ಲಿ ಆ ಕೊರತೆಗಳಿವೆ, ಹಿಂದೆ ಯಾರು ಮಾಡಿದ್ದರೋ ಏನೋ ಗೊತ್ತಿಲ್ಲ, ಆದಕ್ಕೋಸ್ಕರ ಇಂತಹುದನ್ನು ನಾನು ಬದಲಾವಣೆ ಮಾಡಬೇಕೆಂದಿದ್ದು, ಅದಕ್ಕೆ ತಮ್ಮ ಸಹಕಾರ ಬೇಕೆಂದು ನೀವು ಕೇಳಿದ್ದರೆ ನಾವು ಇಲ್ಲವೆಂದು ಹೇಳಿದ್ದರೆ, 'ನೋಡಿ, ನೀವೇ ಅಡ್ಡಿ ಪಡಿಸುತ್ತಿದ್ದೀರಿ, ನಾವು ಹೇಗೆ ಕೆಲಸ ಮಾಡುವುದು? ಎಂದು ಹೇಳಬಹುದಾಗಿತ್ತು, ಆದರೆ ಮುಖ್ಯಮಂತ್ರಿಗಳು ಬೇಡಿಕೆಗಳ ಮೇಲೆ ಉತ್ತರ ಕೊಡುವಂಥ ಕಾಲದಲ್ಲಿ ಮಾನ್ಯ ಹಿರಿಯ ಸದಸ್ಯರಾದ ಹೆಚ್.ಎನ್. ನಂಜೇಗೌಡರು ಹೇಳಿರುವುದು ಅಕ್ಷರಶಃ ನಿಜ. ಒಬ್ಬರು ಮಾಡುವ ಕೆಲಸಕ್ಕೆ ಹತ್ತು ಜನರನ್ನು ನೇಮಿಸುತ್ತಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲದೆ, ಸರ್ಕಾರಿ ಅಧಿಕಾರಿಗಳಿಗೆ ಇಷ್ಟು ಪ್ರಮಾಣದಲ್ಲಿ ಹಣ ವ್ಯಯ ಮಾಡುತ್ತಿರುವುದರಿಂದ ಇದನ್ನು ಸರಿಪಡಿಸಬೇಕೆಂಬ ಬಗ್ಗೆ ಸಲಹೆ ಕೊಟ್ಟಿದ್ದೇವೆ. ಆದರೆ, ತಮ್ಮ ಉತ್ತರದಲ್ಲಿ ಕೊಟ್ಟಿರುವ ಸಲಹೆ ಬಗ್ಗೆ

ಕೆಟ್ಟಿರುವುದನ್ನು ರಿಪೇರಿ ಮಾಡುತ್ತೇನೆಂದು ಹೇಳದೆ, ಕೇಂದ್ರ ಸರ್ಕಾರದತ್ತ ತೋರಿಸಿದಿರಿ. ಕೊಜೆಂಟ್ರಿಕ್ಸ್ ಬಗ್ಗೆ ತಾವು ಮಾತನಾಡಿದಿರಿ. ಇದರ ಬಗ್ಗೆ ಪರಿಷ್ಕೃತವಾಗಿರುವ ಪಿ.ಪಿ.ಎ. ಏನಿದೆ, ಇದನ್ನು ಒದಗಿಸಿ-ಕೊಡಬೇಕೆಂದು ನಾವು ಅವೊತ್ತಿನಿಂದ ಇವೊತ್ತಿನವರೆಗೂ ಕೇಳುತ್ತಿದ್ದೇವೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಒಮ್ಮೆ ಸಿಕ್ಕಿದಾಗ ಖಾಸಗಿಯಾಗಿ ಒಂದು ಪತ್ರ ಕೊಟ್ಟೆ. ಇದರಲ್ಲಿ ರಹಸ್ಯ-ವೇನಿದೆ? ನಾವು ಇಲ್ಲಿ ಕುಳಿತುಕೊಂಡು ಏನಾದರೂ ಕೆಲಸ ಮಾಡಬೇಕೆಂದು ಹೇಳಿದಂತಹ ಕಾಲದಲ್ಲಿ ಈ ಗುಟ್ಟು ಏಕೆ? ಏಕೆ ಈ ವಿಚಾರವನ್ನು ಬಹಿರಂಗಪಡಿಸುವುದಿಲ್ಲ? ಇದರ ಬಗ್ಗೆ ನಾವು ಸಲಹೆಗಳನ್ನು ಕೊಟ್ಟು ಗಂಟೆಗಟ್ಟಲೆ ಚರ್ಚೆ ಮಾಡಿದೆವು. ಕರ್ನಾಟಕಕ್ಕೆ ಎಲ್ಲಾ ಜನರನ್ನೂ ಕರೆದುಕೊಂಡು ಬರುತ್ತಿ-ದ್ದೀರಿ, ನಮ್ಮಲ್ಲಿಯೇ ಅಕ್ಕಿ ಇಲ್ಲ, ಬೇರೆ ಕಡೆಯಿಂದ ತರುವಂಥ ಪರಿಸ್ಥಿತಿ ಇದೆಯೆಂದು ಹೇಳಿದಿರಿ. ನಮ್ಮವರು ಇಲ್ಲವೆಂದಾಗ ಆ ರೀತಿ ಬರುವವರಿಗೆ ಕೊಡಿ. ಅಲಮಟ್ಟಿಯನ್ನು ಎಲೆಕ್ಟ್ರಿಸಿಟಿ ಪ್ರಾಜೆಕ್ಟ್-ಗಾಗಿ ಕೆ.ಪಿ.ಸಿ.ಯವರಿಗೆ ವಹಿಸಿಕೊಡಿ ಎಂದು ನಾವು ಕೇಳಿದ್ದು, ನಮ್ಮವರೆಲ್ಲರೂ ಅಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಸಿದ್ಧರಿದ್ದಾರೆ. ನೀವು ಹೊರಗಡೆಯವರನ್ನು ಏಕೆ ಕರೆದುಕೊಂಡು ಬರುತ್ತಿ-ದ್ದೀರಿ? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನು ಪ್ರಶ್ನೆ ಕೇಳುವುದಿಲ್ಲ, ಅಲ್ಲದೆ, ಬೇಡಿಕೆ-ಗಳ ಬಗ್ಗೆಯೂ ಹೆಚ್ಚು ಮಾತನಾಡಿಲ್ಲ, ಕಾರಣ, ನಮ್ಮ ಹೊಸ ಸದಸ್ಯ ಸ್ನೇಹಿತರುಗಳು ಮಾತನಾಡ-ಲೆನ್ನುವ ಉದ್ದೇಶದಿಂದ. ನೀವು ಆಯವ್ಯಯದ ಮೇಲೆ ಉತ್ತರ ಕೊಡುವಂಥ ಕಾಲದಲ್ಲೂ ಸಹ ಎರಡು ತಿಂಗಳುಗಳು ಕಳೆದುಹೋಯಿತು. ಇಷ್ಟೊಂದು ಅನುಭವವಿರುವಂಥ ನೀವು, ಯಾವ ಪೂರ್ವ ಜನ್ಮದ ಪುಣ್ಯದ ಫಲದಿಂದಲೋ, ನಿಮ್ಮ ಹೋರಾಟದಿಂದಲೋ ಏನೋ ಮುಖ್ಯಮಂತ್ರಿಗಳಾದಿರಿ. ಮುಖ್ಯಮಂತ್ರಿಗಳಾದ ನಂತರ ಕನ್ನಡ ನಾಡಿನ ಜನರ ಹಿತದೃಷ್ಟಿಯಿಂದ ಈ ಕೆಲಸವನ್ನು ಏನು ಮಾಡಬೇಕೆಂದಿದ್ದೀರೋ ತಮ್ಮ ಉತ್ತರದಲ್ಲಿ ಆ ಕುರಿತ ಒಂದು ಶಬ್ದವೂ ಸಹ ತಮ್ಮ ಬಾಯಿಂದ ಬರಲಿಲ್ಲ. ನಾವು ಮಾತನಾಡಿರಬಹುದು, ಮಾತನಾಡದಿರಬಹುದು ಕೆಲವು ವಿಷಯಗಳನ್ನು ಪ್ರಸ್ತಾಪಿಸಿ-ರಬಹುದು, ಪ್ರಸ್ತಾಪಿಸದೇ ಇರಬಹುದು. ಆದರೆ, ಏನು ಕೊರತೆಗಳಿದ್ದವು? ಏನು ತಪ್ಪುಗಳಾಯಿತು? ಏತಕ್ಕೋಸ್ಕರ, ಈ ರಾಜ್ಯ ಇಂತಹ ದುಸ್ಥಿತಿಗೆ ಬಂತು? ಇದನ್ನು ಸರಿಪಡಿಸುವ ಬಗ್ಗೆ ತಮ್ಮ ಉತ್ತರದಲ್ಲಿ ಏನೂ ಹೇಳದೆ ಇದ್ದಾಗ ನಾನೇನು ಸ್ಪಷ್ಟೀಕರಣ ಕೇಳಬಹುದು. ಆದರೆ, ನಾನು ತಮ್ಮಲ್ಲಿ ವಿನಂತಿಸಿ-ಕೊಳ್ಳುವುದೇನೆಂದರೆ, ಎಲ್ಲಾ ರೀತಿಯ ಸಹಕಾರವನ್ನು ಕನ್ನಡ ನಾಡಿನ ಜನರ ಹಿತದೃಷ್ಟಿಯಿಂದ ನಾವು ಕೊಡಲು ಸಂಪೂರ್ಣವಾಗಿ ಸಿದ್ಧರಿದ್ದೇವೆ. ಅಧಿಕಾರದಲ್ಲಿರುವುದೇ ಬಹಳ ಮುಖ್ಯ ಸಂಗತಿಯಲ್ಲ. ಆಡಳಿತ ವೈಖರಿಯನ್ನು ನೋಡಿದಾಗ ಇದನ್ನು ಸರಿಪಡಿಸುವುದಕ್ಕೆ ಯಾವುದೇ ದಿಟ್ಟ ಹೆಜ್ಜೆಯನ್ನು ತಾವು ಇದುವರೆವಿಗೂ ಯಾವುದೋ ಕಾರಣಕ್ಕಾಗಿ ಇಡುವುದಕ್ಕಾಗಲಿಲ್ಲ ಮತ್ತು ತಮ್ಮ ಉತ್ತರದಲ್ಲೂ ಆ ಕುರಿತು ಏನನ್ನೂ ಕಾಣಲಿಲ್ಲ. ಇವೊತ್ತಲ್ಲ ನಾಳೆ ಏನಾದರೂ ಮಾಡುತ್ತೇವೆಂದು ಹೇಳಿ. ಇನ್ನು ಕೊಜೆಂಟ್ರಿಕ್ಸ್ ಬಗ್ಗೆ ನಾನು ಏನು ಹೇಳಿದೆ, ಪರಿಷ್ಕೃತಗೊಂಡ ಪಿ.ಪಿ.ಎ. ಪ್ರತಿಯನ್ನು ತಾವು ದಯ-ಪಾಲಿಸಿ ಕಳುಹಿಸಿಕೊಟ್ಟರೆ ಅದರ ಬಗ್ಗೆ ನಾವು ಸಲಹೆ ಕೊಡುವುದಕ್ಕೆ ಅನುಕೂಲವಾಗಬಹುದು.

Sri J.H. PATEL:- Power Purchase Agreement has been cleared. Only counter guarantee from the Finance Ministry is awaited. May be, in a few days it will come.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅದನ್ನು ಮಾಡಿದ್ದರೂ, ನಾನು ಕೇಳುತ್ತಿರುವುದು, ನಾನು ವಿರೋಧಪಕ್ಷದ ನಾಯಕನ ಸ್ಥಾನದಲ್ಲಿ ಕುಳಿತುಕೊಂಡಿದ್ದರೂ ಪರಿಷ್ಕೃತಗೊಂಡ ಪಿ.ಪಿ.ಎ ಪ್ರತಿ ನಮಗೆ ಇನ್ನೂ ಸಿಗಲಿಲ್ಲ. ಇದರಲ್ಲಿ ಏಕೆ ಗುಟ್ಟು ಎಂಬುದು ನಮಗೆ ಗೊತ್ತಾಗಲಿಲ್ಲ ಮತ್ತು ಈಗಲಾದರೂ ಸಹ ಅಲಮಟ್ಟಿ ಎಲೆಕ್ಟ್ರಿಸಿಟಿ ಪ್ರಾಜೆಕ್ಟ್ ಬಗ್ಗೆ ಯಾರನ್ನೋ ಕರೆದುಕೊಂಡು ಬಂದು, ಯಾರಿಗೋ ತಿನ್ನುವುದಕ್ಕೆ ಅವಕಾಶ ಕೊಡದೆ ಯೋಜನೆಯನ್ನು ಕೆ.ಪಿ.ಸಿ.ಯವರಿಗೆ ವಹಿಸುವಂಥ ಕೃಪೆಯನ್ನು ತಾವು ಮಾಡಬೇಕು.

+ **ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):-** ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡ ನಂತರ ಬಹುಶಃ ಇದೇ ಮೊದಲ ಸಲ ದೀರ್ಘವಾಗಿ ತಮ್ಮ ಭಾಷಣ ಮಾಡಿದ್ದಾರೆ. ಭಾಷಣದಲ್ಲಿ ರಾಜಕೀಯ ತತ್ವ ಮತ್ತು ಸಾಮಾಜಿಕ ತತ್ವದ ಮೇಲೆ ಜಾಸ್ತಿ ಒತ್ತುಕೊಟ್ಟು ಮಾತನಾಡಿದ್ದಾರೆ. ತಮ್ಮದೇ ಧಾಟಿಯಲ್ಲಿ ಈ ಆಡಳಿತವನ್ನು ಯಾವ ರೀತಿಯಲ್ಲಿ ಸುಧಾರಿಸಬಹುದು; ಇದಕ್ಕೆ ಏನು ತೊಡಕುಗಳಿವೆ? ಮತ್ತು ಪ್ರಸ್ತುತ ಸಂದರ್ಭದಲ್ಲಿ ಆ ರೀತಿ ಮಾಡುವುದಕ್ಕೆ ಸಾಧ್ಯವೇ, ಹೇಗೆ, ಎನ್ನುವುದರ ಬಗ್ಗೆಯೂ ಬಹಳ ಗಂಭೀರವಾಗಿ ಪ್ರಸ್ತಾಪಿಸಿದರು. ನಾವು ಒಪ್ಪಿಕೊಳ್ಳುತ್ತೇವೆ. ಏಕೆಂದರೆ, ಯಾರಿಗೂ ಕೂಡ ತಕ್ಷಣ ಎಲ್ಲವನ್ನೂ ಕೂಡ ಸುಧಾರಿಸುವುದಕ್ಕಾಗುವುದಿಲ್ಲವೆನ್ನುವ ವಿಚಾರವನ್ನು ನಾವೆಲ್ಲರೂ ಕೂಡ ಒಪ್ಪಿಕೊಳ್ಳಬೇಕಾಗಿದೆ. ಆದರೆ, ಅವರು ಉತ್ತರಿಸುವಾಗ ಒಂದು ಮಾತು ಹೇಳುವುದನ್ನು ಮರೆತರು. ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಅಥವಾ ಮತ್ತೊಬ್ಬ ಬೇರೆ ಜಾತಿಗೆ ಸೇರಿರುವ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರ ಎಕನಾಮಿಕ್ ಸ್ಟೇಟಸ್ ಅನ್ನು ಹೋಲಿಸಿ ಅನೇಕ ಸಾರಿ ಆ ಕ್ಲಾಸ್ ಒಂದೇ ಇದ್ದರೆ ಹೊಂದಾಣಿಕೆ ಬರುತ್ತದೆನ್ನುವ ಮಾತನ್ನು ಅವರು ಹೇಳಿದರು. ಅದು ಸತ್ಯ. ಈ ರೀತಿ ಪಟ್ಟಣಗಳಲ್ಲಿ ನಡೆಯಬಹುದು. ಮತ್ತು ಬೇರೆ ಕಡೆಗಳಲ್ಲಿ ಹೊಂದಾಣಿಕೆ ಆಗುವ ಸಾಧ್ಯತೆ ಇದೆ. ಆದರೆ ಎಲ್ಲಿಯವರೆಗೆ? ಟೇಬಲ್ ಮಟ್ಟದವರೆಗೆ ಅಂದರೆ ಟೇಬಲ್ ಮಟ್ಟದವರೆಗೆ, ಕುರ್ಚಿ ಮಟ್ಟದವರೆಗೆ ಅಂದರೆ ಕುರ್ಚಿ ಮಟ್ಟದವರೆಗೆ, ಸೋಫಾಸೆಟ್ ಮಟ್ಟದವರೆಗೆ ಅಂದರೆ ಸೋಫಾಸೆಟ್ ಮಟ್ಟದವರೆಗೆ; ಆದರೆ, ಒಂದು ವಿಚಾರವನ್ನು ನಾವು ಮರೆಯಬಾರದು. ಈ ದೇಶದಲ್ಲಿ ಕ್ಲಾಸ್ ಮತ್ತು ಕಾಸ್ಟ್ ಕೆಲವು ಕಡೆಗಳಲ್ಲಿ ಒಂದೇ ಆಗಿವೆ. ಆ ಕ್ಲಾಸ್ ಅನ್ನು ನೀವು ಏನೆಂದು ಕರೆಯುತ್ತೀರಿ? ಆ ಕಾಸ್ಟ್‌ಗೂ ಕೂಡ ಸಂಬಂಧಪಟ್ಟಿದ್ದು ಇದೆ. ಈಗ ಅದರ ಬಗ್ಗೆ ಉದಾಹರಣೆಗೆ ನಾನು ಬಿಚ್ಚಿ ಹೇಳಬಹುದಾದರೆ, ಇದು ತಮಗೆ ಗೊತ್ತಾಗುತ್ತದಾದ್ದರಿಂದ ಪುನಃ ನಾನು ಹೇಳಬೇಕಾಗಿಲ್ಲ. ಆದರೆ, ಸದನದ ಗಮನಕ್ಕೆ ತರುವುದೇನೆಂದರೆ, ಈ ದೇಶದಲ್ಲಿ ಜಾತೀಯ ವ್ಯವಸ್ಥೆ ಇರುವ ಕಾರಣ, ಇದರ ಬಗ್ಗೆ ಪದೇ ಪದೇ ಏಕೆ ಮಾತನಾಡುತ್ತೇವೆಂದರೆ, ನೀವು ಸ್ವಲ್ಪ ಬೇರೆ ರೀತಿಯಿಂದ ಹೇಳಿದಿರಿ. ಧಾಟಿಯಲ್ಲೂ ಬೇರೆ ರೀತಿಯಲ್ಲಿ ಹೇಳಿದಿರಿ, ಕೊನೆಗೆ 18 ಪರ್‌ಸೆಂಟ್

ಮೀಸಲಾತಿಯಲ್ಲಿ ನೂರು ಪರ್‌ಸೆಂಟ್ ಭ್ರಷ್ಟಾಚಾರ ಮಾಡಿರುವುದಕ್ಕೂ ಹೋಲಿಸಿ ಮಾತನಾಡಿದಿರಿ. ಈ ದೇಶದಲ್ಲಿ ಜಾತಿಯ ಪದ್ಧತಿಯಿರುವುದರಿಂದ ಆಯಾಯ ಜಾತಿಗಳು ಆಯಾಯ ಕ್ಲಾಸ್‌ಗೆ ಹೊಂದಿಕೊಂಡಿವೆ. ಇಂದು ಪರಿಶಿಷ್ಟ ಜಾತಿಯ ಜನಾಂಗದವರು social credit lineನಲ್ಲಿ ಅತ್ಯಂತ ಕೆಳಗಿರಬಹುದು. ಅದನ್ನು ನಾವು ಮಾಡಿಕೊಂಡಿರುವ ಸಾಮಾಜಿಕ ವ್ಯವಸ್ಥೆ. ಅದೇ ರೀತಿ ತಾವು ಆರ್ಥಿಕ ದೃಷ್ಟಿಕೋನದಿಂದ ಇದನ್ನು ನೋಡಿದಾಗಲೂ ಈ ಪರಿಶಿಷ್ಟ ಜಾತಿಯವರು ಕೆಳಗಡೆಯೇ ಇದ್ದಾರೆ. ಯಾರೋ ಒಬ್ಬಿಬ್ಬರು ಅಧಿಕಾರಿಗಳಾಗಿ ಬಂದಿರಬಹುದು, ಮಂತ್ರಿಗಳಾಗಿರಬಹುದು, ಎಂ.ಎಲ್.ಎ.ಗಳಾಗಿರಬಹುದು. ಆದರೆ ಆ ಕಾಸ್ಟ್ ಮತ್ತು ಪೂರರ್ ಕ್ಲಾಸ್ ಒಂದೇ ಎಂಬುದನ್ನು ಸಮಾಜ ಎಂದೂ ಮರೆಯಬಾರದು. ಅನಂತರ ಹಿಂದುಳಿದ ವರ್ಗಗಳದ್ದೂ ಅದೇ ವ್ಯವಸ್ಥೆಯಾಗಿದೆ. ನಮ್ಮಲ್ಲಿ ಈಗ ಕ್ಲಾಸಿಫಿಕೇಷನ್‌ನಲ್ಲೂ ಗ್ರೆಡೇಷನ್ ಇದೆಯೇ ಹೊರತು ಕೇವಲ ಎರಡು ಕ್ಲಾಸ್ ಮಾತ್ರ ಉಳಿ-ದಿಲ್ಲ. ಕೇವಲ ನಾಲ್ಕು ಚಾತುರ್ವಣದ ವರ್ಣಾಶ್ರಮವಿದ್ದರೆ ಪರವಾಗಿಲ್ಲ, ಇಲ್ಲಿ 2378 ಜಾತಿಗಳು ಇರುವುದರಿಂದ ಆ ಜಾತಿಗಳ ಅನುಗುಣವಾಗಿಯೇ ಹೆಚ್ಚು ಕಡಿಮೆ ಕ್ಲಾಸೆಸ್‌ಗಳ ಕ್ಲಾಸಿಫಿಕೇಷನ್ ಆಗಿದೆ. ಆದ್ದರಿಂದ ಅಧಿಕಾರವನ್ನು ಹಂಚಬೇಕಾದರೆ ಇವುಗಳೆಲ್ಲವನ್ನು ನೋಡಬೇಕಾಗುತ್ತದೆ. ನಾವು ಬಹಳ ವಿಶಾಲವಾಗಿ ಫಿಲಾಸಫಿಯನ್ನು ಹೇಳಿದರೂ ಸಹ ಇವುಗಳ ಬಗ್ಗೆ ಗಮನಹರಿಸಬೇಕಾಗುತ್ತದೆ. ಮಂತ್ರಿಮಂಡಲವನ್ನು ರಚಿಸುವಾಗಲೂ ಜಾತಿಯನ್ನು ನೋಡುತ್ತೇವೆ. ಈ ಜಾತಿಯವರನ್ನು ತೆಗೆದು-ಕೊಂಡಿದ್ದೇವೆ. ಆ ಜಾತಿಯವರನ್ನು ತೆಗೆದುಕೊಂಡಿದ್ದೇವೆಂದು ಹೇಳುತ್ತೇವೆ. ಮತ್ತು ನಮ್ಮ ಜಾತಿ-ಯವರನ್ನು ತೆಗೆದುಕೊಳ್ಳಲಿಲ್ಲ, ಆ ಜಾತಿಯವರನ್ನು ತೆಗೆದುಕೊಳ್ಳಲಿಲ್ಲವೆಂದು ಅನೇಕ ಗ್ರಿವೆನ್ಸ್‌ಸ್ ಇರುತ್ತದೆ. ಮಂತ್ರಿಮಂಡಲವನ್ನು ರಚನೆ ಮಾಡುವಾಗಲೇ ಈ ರೀತಿ ಸಾಮಾಜಿಕ ಅಸಮಾನತೆಯ ಬಗ್ಗೆ ಮಾತನಾಡುತ್ತೇವೆ. ಆದ್ದರಿಂದ ಆಡಳಿತದಲ್ಲೂ ಸಮಾನತೆಯನ್ನು ಕೇಳುವುದು ಸಹಜ. ಎಲ್ಲಿಯವರೆಗೆ ಈ ವ್ಯವಸ್ಥೆ ಇರುತ್ತದೆ, ಎಲ್ಲಿಯವರೆಗೆ ಈ ವ್ಯವಸ್ಥೆಗೆ ಬೆಂಬಲವನ್ನು ಕೊಡತಕ್ಕ ಜನರಿದ್ದಾರೆ, ಎಲ್ಲಿಯ-ವರೆಗೆ ಈ ವ್ಯವಸ್ಥೆಯ ಮೇಲೆ ನಂಬಿಕೆಯನ್ನಿಟ್ಟುಕೊಂಡು ಆಡಳಿತವನ್ನು ನಡೆಸುತ್ತಾರೆ. ಅಲ್ಲಿಯವರೆಗೆ ಈ ರೀತಿ ಕೇಳುವುದು ಸಹಜವಾಗಿರುತ್ತದೆ. ಆದ್ದರಿಂದ ನಾವು ಇದನ್ನು ಸರಿಪಡಿಸಬೇಕೇ ಹೊರತು ಅಲ್ಲಗಳೆಯಲಾಗದು. ಆದ್ದರಿಂದ ಆಡಳಿತದಲ್ಲಿ ಕಾರ್ಯನಿರ್ವಾಹಕ ಹುದ್ದೆಗಳಿದ್ದಾಗ ಕೆಲವು ಹುದ್ದೆ-ಗಳನ್ನು ಪರಿಶಿಷ್ಟ ಜಾತಿಯವರಿಗೆ, ಕೆಲವನ್ನು ಹಿಂದುಳಿದ ವರ್ಗದವರಿಗೆ ಕೊಡಬೇಕಾಗುತ್ತದೆ. ಕೆಲವನ್ನು ಮುಂದುವರೆದ ವರ್ಗದವರಿಗೆ ಕೊಡಬೇಕಾಗುತ್ತದೆ. ಏಕೆಂದರೆ ನಮ್ಮ ವ್ಯವಸ್ಥೆಯಲ್ಲಿ ಇದು ಸಹಜ-ವಾಗಿ ಕೊಡಲೇ ಬೇಕಾಗುತ್ತದೆ. ತಾವು ಮೊನ್ನೆ ಶಿವಮೊಗ್ಗದಲ್ಲಿ ನೀಡಿದ ಹೇಳಿಕೆಯನ್ನು ನೋಡಿದೆ. ತಾವು ಅಲ್ಲಿ ಏನು ಹೇಳಿದ್ದೀರೆಂದರೆ, ಈ ದೇಶದಲ್ಲಿ ಜಗಳ ತರತಕ್ಕ ಬಹಳಷ್ಟು ಪ್ರಯತ್ನ ಮಾಡುತ್ತಿ-ದ್ದಾರೆ. ಯಾವ ಮಟ್ಟದಲ್ಲಿ ಜಗಳ ತರಲು ಪ್ರಯತ್ನ ಮಾಡುತ್ತಿದ್ದಾರೆಂದರೆ ಒಕ್ಕಲಿಗರು ಮತ್ತು ಲಿಂಗಾ-ಯಿತರು ಒಂದಾಗ ತಕ್ಕದ್ದನ್ನು ಸಹಿಸದೆ ಅವರ ಹೊಂದಾಣಿಕೆಯನ್ನು ಒಡೆಸಬೇಕು ಎನ್ನುವ ಮಟ್ಟಿಗೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ತಾವು ಹೇಳಿದ್ದೀರಿ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಅಧ್ಯಕ್ಷರೇ, ನಾನು ಇದೇ ವ್ಯವಸ್ಥೆಯ ಬಗ್ಗೆ ಹೇಳುತ್ತಾ ನಾವು ಜನಾಂಗವನ್ನು ಒಡೆಯುವುದರಲ್ಲಿ ನಿಸ್ಸೀಮತೆಯನ್ನು ತಂದಿದ್ದೇವೆ. ಕೇವಲ ವರ್ಣಾಶ್ರಮವಾಗಿದ್ದರೆ ಸಹಿಸಿಕೊಳ್ಳಬಹುದಾಗಿತ್ತು, ಆದರೆ ಯಾವ ಮಟ್ಟದಲ್ಲಿ ಜನಾಂಗವನ್ನು ಒಡೆದಿದ್ದಾರೆಂದರೆ, ಎಡ-ಬಲ, ಸಣ್ಣ ಕಂಬಳಿ, ದೊಡ್ಡ ಕಂಬಳಿ, ಮೂರು ದಿವಸದವನು ನಾಲ್ಕು ದಿವಸದವನು ಮುಂತಾಗಿ ಮಾಡಿದ್ದಾರೆ. ಮೂರು ಸಾವಿರ ವರ್ಷಗಳ ನಮ್ಮ ಪಾಂಡಿತ್ಯದಿಂದ ಎಷ್ಟು ಪದರಪದರವಾಗಿ ಸೂಕ್ಷ್ಮವಾಗಿ ಬಿಡಿಸಿಕೊಂಡು ಬಂದಿದ್ದೇವೆಂದರೆ ಅದನ್ನು ಈಗ ಸರಿಪಡಿಸುವುದಕ್ಕೇ ಕಷ್ಟವಾಗಿದೆ. ಆದ್ದರಿಂದ ಜನಾಂಗವನ್ನು ಒಡೆಯತಕ್ಕದ್ದು ಧರ್ಮವಾಗಬಾರದು. ಒಕ್ಕಲಿಗರು ಮತ್ತು ಲಿಂಗಾಯಿತರುಗಳೇಕೆ ಕೂಡಿಕೊಳ್ಳಬಾರದು? ವರ್ಗದ ದೃಷ್ಟಿಯಿಂದ ಅವರುಗಳು ಬೇರೆಯವರಿಗಿಂತ ಉತ್ತಮವಾಗಿರಬಹುದು Give them their due share, if one is a devil call him a devil. ಒಕ್ಕಲಿಗರು ಲಿಂಗಾಯಿತರು ಸೇರಿಕೊಂಡುಬಿಟ್ಟರೆಂದು ಉಳಿದವರೆಲ್ಲಾ ಒಡೆಯಲು ಹೋಗುವುದಿಲ್ಲ. ನಾವು ಜನಾಂಗದವರನ್ನು ಕೂಡಿಸಬೇಕು. ನಾವು ಇದರ ಬಗ್ಗೆ ಮಾತನಾಡುತ್ತೇವೆಯೆ ಹೊರತು ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಹಿಂದೆ ಬಿದ್ದಿದ್ದೇವೆ. ಕೆಲವು ಜಾತಿಗಳ ರಕ್ತ ಸಂಬಂಧವನ್ನು ಮಾಡಿದಾಗ ಇದರ ಕಷ್ಟ ಗೊತ್ತಾಗುತ್ತದೆಯೇ ಹೊರತು ಕೇವಲ ಅದರ ಬಗ್ಗೆ ಹೇಳಿಕೊಂಡು ಹೋದರೆ ಆಗುವುದಿಲ್ಲ. ಬೇರೆ ಬೇರೆ ಜನಾಗಂದವರನ್ನು ಒಂದಾಗುವಂತೆ ಮಾಡಬೇಕು. ಕೆಲವು ಕಡೆಗಳಲ್ಲಿ ಜನಾಂಗದವರನ್ನು ಒಡೆಯುವುದೇ ಕೆಲಸವಾಗಿ ಮಾಡಿಕೊಂಡು ಬಿಟ್ಟಿದ್ದಾರೆ. ಆ ರೀತಿ ಒಡೆಯಲು ಹೋಗಬೇಡಿ ಎಂದು ನಾನು ಹೇಳಿದ್ದೇನೆ. ಒಕ್ಕಲಿಗರು ಲಿಂಗಾಯಿತರು ಕೂಡಿಕೊಂಡರೆ ಒಡೆಯಲು ಹೋಗಬೇಡಿ ಎಂದು ನಾನು ಹೇಳಿದ್ದು. ಒಕ್ಕಲಿಗರು ಮತ್ತು ಲಿಂಗಾಯಿತರುಗಳು ಕೂಡಿಕೊಂಡು ಬಿಟ್ಟರೆ ಸಾಕಾಗುವುದಿಲ್ಲ, ಅದೇ ರೀತಿ ಸಮಾಜದಲ್ಲಿ ಬೇರೆ ಜನಾಂಗದವರೂ ಕೂಡಿಕೊಳ್ಳಬೇಕು. ಹೆಣ್ಣು ಗಂಡು ಕೊಟ್ಟು ತಂದು ಜನಾಂಗದವರನ್ನು ಸೇರಿಸಬೇಕೆಂದು ಬಸವಣ್ಣನವರೇನು ಹೇಳಿದ್ದರೋ ಅದರಂತೆ ನಡೆದುಕೊಂಡು ಬಂದಿದ್ದರೆ ಇಂದು ಮಲ್ಲಿಕಾರ್ಜುನ ಖರ್ಗೆ ಮತ್ತು ನಾನು ಅಣ್ಣ ತಮ್ಮಂದಿರಂತೆ ಆಗಿರುತ್ತಿದ್ದೆವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈ ದೇಶದಲ್ಲಿ 2378 ಜಾತಿಗಳಿವೆ, ಅಸ್ತಿತ್ವದಲ್ಲಿವೆ. ಇದರ ಜೊತೆಗೆ ಇನ್ನೂ ಅನೇಕ ಜಾತಿಗಳು ಇರಬಹುದು. ಆದ್ದರಿಂದ ಈ ಜನಾಂಗದವರಿಗೆಲ್ಲ ಅಧಿಕಾರದಲ್ಲಿ ಇತರೆ ಮೂಲಗಳಲ್ಲಿ ಪಾಲನ್ನು ಕೊಟ್ಟು ಬ್ಯಾಲೆನ್ಸ್ ಮಾಡುವ ಅಧಿಕಾರ ತಮ್ಮ ಕೈಯಲ್ಲಿದೆ. ಏಕೆಂದರೆ ತಾವು ಅಧಿಕಾರವನ್ನು ವಹಿಸಿಕೊಂಡ ಮೇಲೆ ಜನರಿಗೆ, ಮತ್ತು ಸಮಾಜಕ್ಕೆ ತಮ್ಮಿಂದ ಏನಾದರೂ ಅಪೇಕ್ಷೆ ಇರುತ್ತದೆ. ಹೇಗೆ ದೇವರಾಜ್ ಅರಸುರವರು ಅಧಿಕಾರಕ್ಕೆ ಬಂದಾಗ ಜನರಿಂದ ಅಪೇಕ್ಷೆ ಇತ್ತು ಎಂದರೆ, ದೇವರಾಜ್ ಅರಸುರವರು ಹಿಂದುಳಿದ ವರ್ಗದವರು, ಅವರು ಈ ಜನಾಂಗದವರ ಅಭಿವೃದ್ಧಿಗಾಗಿ ಏನು ಮಾಡುತ್ತಾರೆ ಎನ್ನತಕ್ಕ ಅಪೇಕ್ಷೆ ಇರುತ್ತದೆ, ನೋಡೋಣ ಎಂದು ಇರುತ್ತದೆ. ಅನೇಕ ಸೋಷಿಯಲ್ ರಿಫಾರ್ಮ್ಸ್‌ಗಳಲ್ಲಿ, ಲ್ಯಾಂಡ್ ರಿಫಾರ್ಮ್ಸ್ ಇರಬಹುದು, Debt Relief Act ಇರಬಹುದು, ಮನೆ ಕೊಡತಕ್ಕದ್ದು ಇರಬಹುದು, ಹಿಂದುಳಿದ ವರ್ಗಗಳ ಕಮೀಷನ್ನನ್ನು ಜಾರಿಗೆ

ತರುವುದು ಇರಬಹುದು, ಈ ರೀತಿ ಹತ್ತಾರು ಅಪೇಕ್ಷೆಯನ್ನು ಜನರು ಇಟ್ಟುಕೊಂಡಿರುತ್ತಾರೆ. ಸಮಾಜವನ್ನು ಪೂರ್ತಿ ಪರಿವರ್ತನೆಯಾಗಬೇಕೆಂದು ಹೇಳಲಾಗುವುದಿಲ್ಲ, ಆದರೆ ಈ ಸಮಾಜದ ಪರಿವರ್ತನೆ ಮಾಡಲು ಪ್ರಯತ್ನಮಾಡಿ ಕೆಲವು ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ಕಾನೂನನ್ನು ದೇವರಾಜ್ ಅರಸುರವರು ತಂದರೋ ಅದೇ ರೀತಿ ನಿಮ್ಮಿಂದ ಆ ರೀತಿ ಕೆಲಸ ಆಗಬಹುದು ಎನ್ನತಕ್ಕ ಅಪೇಕ್ಷೆ ಜನರಲ್ಲಿ, ಸಮಾಜದಲ್ಲಿದೆ. ಸಮಾಜವಾದದ ತತ್ವದಲ್ಲಿ ವಿಶ್ವಾಸವಿಟ್ಟಿರುವ ಜೆ.ಹೆಚ್. ಪಟೇಲರು ಯಾವ ರೀತಿಯಾದ ಆಡಳಿತವನ್ನು ಕೊಡುತ್ತಾರೆ, ಯಾವ ದಿಕ್ಕಿನಲ್ಲಿ ಹೋಗುತ್ತಾರೆ ಎನ್ನತಕ್ಕ ಅಪೇಕ್ಷೆ ನಮ್ಮಲ್ಲಿತ್ತು. ಆ ನಮ್ಮ ಅಪೇಕ್ಷೆಯ ಪ್ರಕಾರ ತಾವು ನಡೆದುಕೊಂಡು, ಇದರ ಬಗ್ಗೆ ಮಾರ್ಗಸೂಚಿ-ಯನ್ನು ಹಾಕಿ, ನಮ್ಮ ಸರ್ಕಾರ ಇಂಥ ಕೆಲಸವನ್ನು ಮಾಡುತ್ತದೆ, ಇಂತಿಂಥ ಕಾರ್ಯಕ್ರಮವನ್ನು ಹಾಕಿಕೊಂಡಿದೆ ಎಂದು ತಾವು ಭಾಷಣದಲ್ಲಿ ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ತಾವು ಕೇವಲ ಫಿಲಾಸಫಿಯ ಬಗ್ಗೆ ಹೇಳಿದ್ದೀರಿ, ತಮ್ಮ ತತ್ವಾಧಾರಿತ ಚಿಂತನೆಯೇನಿತ್ತು ಆ ಚಿಂತನೆಯ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಮಾಡುವ ಸಲುವಾಗಿ ತಾವು ಯಾವುದೇ ಪ್ರಯತ್ನ ಮಾಡಿರುವ ಬಗ್ಗೆ ಹೇಳ-ಲಿಲ್ಲ. ನನ್ನ ಜೀವನಪರ್ಯಂತ ಯಾರಿಗಾಗಿ ದುಡಿದಿದ್ದೇನೆ, ಯಾವ ತತ್ವದ ಮೇಲೆ ನನಗೆ ವಿಶ್ವಾಸ-ವಿದೆ, ಅದನ್ನು ಈ ರೀತಿಯಾಗಿ ಸಮಾಜದಲ್ಲಿ ಕಾರ್ಯಕ್ರಮದ ಮೂಲಕ ತರಬೇಕೆಂದು ಮಾಡಿದ್ದೇನೆ, ನನ್ನ ಕೈಯಲ್ಲಿ ಆಡಳಿತ ಸಿಕ್ಕಿದಾಗ, ಅದು ಒಂದು ತಿಂಗಳಿರಬಹುದು, ಒಂದು ವರ್ಷವಿರಬಹುದು, 5 ವರ್ಷಗಳಿರಬಹುದು ನಾನು ಆ ಕೆಲಸವನ್ನು ಮಾಡಿಯೇ ತಿರುತ್ತೇನೆ, ಇದು ನನ್ನ ಸಂಕಲ್ಪ ಎನ್ನತಕ್ಕ ಗುರಿಯನ್ನಿಟ್ಟುಕೊಂಡು ಹಾಕಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಯಾವುದನ್ನೂ ಹೇಳಲಿಲ್ಲ. ತಾವೇನು ಸಾಮಾಜಿಕ ಪರಿವರ್ತನೆಯ ಬಗ್ಗೆ ವಿಶ್ವಾಸವನ್ನಿಟ್ಟುಕೊಂಡು ಅದನ್ನು ಆಡಳಿತದಲ್ಲಿ ಅನ್ವ-ಯಿಸಿಕೊಂಡು ಸಾಮಾಜಿಕ ಪರಿವರ್ತನೆಗೆ ಚಾಲನೆಯನ್ನು ಕೊಡದಿದ್ದರೆ ಖಂಡಿತವಾಗಿ ಈ ಸಮಾಜ-ದಲ್ಲಿ ಬದಲಾವಣೆ ಆಗುತ್ತದೆ ಎಂದು ನಾವು ನಂಬುವುದಿಲ್ಲ. ಒಬ್ಬೊಬ್ಬರು ಬಂದ ಮೇಲೆ ಒಂದೊಂದು ಹಂತದಲ್ಲಿ ಆಡಳಿತದಲ್ಲಿ ಸುಧಾರಣೆಯಾಗುತ್ತದೆ, ಆಡಳಿತದಲ್ಲಿ ಬದಲಾವಣೆಯಾಗುತ್ತದೆ ಎನ್ನತಕ್ಕ ಭಾವನೆಯಿಂದ ತಾವು ಏನಾದರು ಹೇಳುತ್ತೀರೆಂದು ತಿಳಿದುಕೊಂಡಿದ್ದೆವು. ಆದರೆ ತಾವು ತಮ್ಮ ಭಾಷಣದಲ್ಲಿ ಅದರ ಬಗ್ಗೆ ಯಾವುದೇ ವಿಚಾರವನ್ನು, ಚಿಂತನೆಯನ್ನು ಪ್ರಕಟಿಸಲಿಲ್ಲ. ಅನಂತರ ಮತ್ತೊಂದು ವಿಚಾರವನ್ನು ಈ ಸದನದಲ್ಲಿ ಹೇಳಿದ್ದೆ. ಹೋದ ಅಧಿವೇಶನದಲ್ಲೂ ಚರ್ಚೆಗೆ ಬಂದಿತ್ತು, ತಮಗೂ ಅದು ಗೊತ್ತಿದೆ. 77ನೇ ಸಂವಿಧಾನದ ತಿದ್ದುಪಡಿಯಾದ ಮೇಲೆ ಬಡ್ತಿಯ ಸಮಯದಲ್ಲೂ ಮೀಸಲಾತಿಯನ್ನು ಅನುಸರಿಸಬೇಕು ಎನ್ನತಕ್ಕ ಕಾನೂನನ್ನು ಸಂವಿಧಾನವೇ ಒಪ್ಪಿಕೊಂಡಿದೆ. ಅದರ ಬಗ್ಗೆ ತಾವು ಒಂದು ಸಮಿತಿಯನ್ನು ಮಾಡಿ, ಕ್ಲಾಸಸ್ ಆಫ್ ಪೋಸ್ಟ್ ಎನ್ನತಕ್ಕದ್ದು, ಅಂದರೆ ಅವರಿಗೆ ಎಲ್ಲಿಯವರೆಗೆ ಬೇಕಾದರೂ ಮೀಸಲಾತಿಯ ಸೌಲಭ್ಯವನ್ನು ಮಾಡಿಕೊಡುವ ಅಧಿಕಾರ ರಾಜ್ಯ ಸರ್ಕಾರಕ್ಕಿದೆ. ಅದು ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಇದ್ದ ಕಾರಣ ಅದರ ಬಗ್ಗೆ ತಾವು ಹೇಳುತ್ತೀ-ರೆಂದು ನಾನು ತಿಳಿದುಕೊಂಡಿದ್ದೆ. ಏಕೆಂದರೆ ಇದರ ಬಗ್ಗೆ ಹೊರಗಡೆ ಸಹ ತಮ್ಮ ಜೊತೆ ಪ್ರಸ್ತಾಪ ಮಾಡಿದ್ದೆ, ಸದನದಲ್ಲಿ ಸಹ ಮಾನ್ಯ ನಾಣಯ್ಯನವರು ಇದ್ದರು ಆಗಲೂ ಪ್ರಸ್ತಾಪ ಮಾಡಿದ್ದೆ, ಆದ್ದರಿಂದ

ಆ ವಿಚಾರದ ಬಗ್ಗೆ ತಾವು ಹೇಳಬೇಕಾಗಿತ್ತು. ಇವೇಲ್ಲವೂ ಸಾಮಾಜಿಕ ನ್ಯಾಯದ ಅಡಿಯಲ್ಲಿ ಬರುತ್ತವೆ. ನಾವು ಸಂಪೂರ್ಣವಾಗಿ ಆ ನಿಟ್ಟಿನಲ್ಲಿ ಕೆಲಸ ಮಾಡದಿದ್ದರೂ ಅದಕ್ಕೆ ಹತ್ತಿರವಾಗಿಯಾದರೂ ಕೆಲಸ ಮಾಡುವ ಮಟ್ಟಕ್ಕೆ ಪ್ರಯತ್ನ ಮಾಡಬೇಕು. ಆ ರೀತಿ ಕೆಲಸ ಮಾಡುವಾಗ ತೊಂದರೆಗಳು ಬಂದರೆ, ನೋಡಿ, ನಾನು ಆ ದಿಕ್ಕಿನಲ್ಲಿ ಕೆಲಸ ಮಾಡಲು ಪ್ರಯತ್ನ ಮಾಡಿದರೂ ಆಗಲಿಲ್ಲವೆಂದು ಹೇಳಲು ಸಾಧ್ಯವಾಗುತ್ತದೆ. ತಾವು ಸಾಮಾಜಿಕ ನ್ಯಾಯದ ನೆಲೆಯ ಮೇಲೆ ಅಧಿಕಾರಕ್ಕೆ ಬಂದಂಥವರು. ಆದರೆ ತಾವು ಸಾಮಾಜಿಕ ನ್ಯಾಯದ ಬಗ್ಗೆ, ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ತಮ್ಮ ಭಾಷಣದಲ್ಲಿ ಯಾವುದೇ ರೀತಿಯಲ್ಲಿ ಪ್ರಸ್ತಾಪ ಮಾಡಲಿಲ್ಲ. ಅದರ ಬಗ್ಗೆ ತಾವೇನು ಹೇಳುತ್ತೀರಿ ಅದನ್ನು ಹೇಳಬೇಕು. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಕೇಳಬಯಸುತ್ತೇನೆ.

+ ಶ್ರೀ ಯು.ಆರ್. ಸಭಾಪತಿ (ಉಡುಪಿ):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಕ್ರಾಂತಿಕಾರಿ, ಲೋಹಿಯಾವಾದಿ, ಸಮಾಜವಾದಿ ಹೋರಾಟಗಾರ ಎಂದು ಹೇಳುವಂಥ ಕೀರ್ತಿ ಪಡೆದಂಥ ಒಬ್ಬ ವ್ಯಕ್ತಿ. ಇವತ್ತು ಮುಖ್ಯಮಂತ್ರಿಗಳಾದ ಮೇಲೆ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಅವರು ಕೊಟ್ಟಂತಹ ಉತ್ತರವನ್ನು ನೋಡಿದಾಗ, ಅವರು ಮುಖ್ಯಮಂತ್ರಿಗಳಾಗಿ ಉತ್ತರಿಸಿಲ್ಲ, ಅವರೊಬ್ಬರು ಫಿಲಾಸಫರ್ ಆಗಿ ಉತ್ತರಿಸಿದ್ದಾರೆಂದು ಹೇಳುವಂತಹ ಮಾತನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಸಂಪೂರ್ಣವಾಗಿ ಸರ್ಕಾರದ ಆಡಳಿತ ವೈಫಲ್ಯವನ್ನು ಅವರು ಒಪ್ಪಿಕೊಂಡಿದ್ದಾರೆ. ಅಷ್ಟೇ ಅಲ್ಲ, ಆಡಳಿತ ಸುಧಾರಣೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಿರಾಸೆಯನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಸುಧಾರಣೆ ಮಾಡಲಿಕ್ಕೆ ಬರುತ್ತದೋ, ಇಲ್ಲವೋ ಎನ್ನುವ ಮನೋಭಾವ ಕೂಡ ಇವತ್ತಿನ ಅವರ ಭಾಷಣದಲ್ಲಿ ಪ್ರಕಟವಾಗುತ್ತಿದೆ. ಇವತ್ತು ನಿಮ್ಮ ರಥ ಕೂಡ ಸರಿಯಾಗಿ ಹೋಗುತ್ತಿಲ್ಲ ಎನ್ನುವುದನ್ನೂ ಕೂಡ ನಿಮ್ಮ ಮಾತಿನಲ್ಲಿ ನೀವು ಒಪ್ಪಿಕೊಂಡಿದ್ದೀರಿ. ನಾವು ಇವತ್ತು ನಿಮಗೆ ಹೇಳುವುದು ಏನು ಅಂತ ಹೇಳಿದರೆ, ಮಾನ್ಯ ಖರ್ಗೆಯವರು ಬಹಳ ಉತ್ತಮವಾಗಿ ಹೇಳಿದ್ದಾರೆ. ನೀವೊಬ್ಬರು ಲೋಹಿಯಾನವಾದಿ ಎಂದು ಹೇಳುವಂತ, ಒಬ್ಬ ಕ್ರಾಂತಿಕಾರಿ ಸಮಾಜವಾದಿ ಹೋರಾಟಗಾರರಾಗಿದ್ದುಕೊಂಡು, ಸಾಮಾಜಿಕ ನ್ಯಾಯದ ಬಗ್ಗೆ ಹೋರಾಟ ಮಾಡಿ, ಒಂದು ಪಕ್ಷದ ನೇತಾರರಾಗಿದ್ದು ಕೊಂಡು, ಇವತ್ತು ಆಡಳಿತ ವೈಫಲ್ಯವನ್ನು ನೀವು ಒಪ್ಪಿಕೊಂಡು, ನಿರಾಸೆ ಪಡುವಂತಹ ಕಾರಣ ಏನಾಗಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ನಿಮ್ಮ ಆಡಳಿತ ನ್ಯೂನತೆಗಳನ್ನು ನೀವು ಒಪ್ಪಿಕೊಳ್ಳುವುದಾದರೆ, ದಯವಿಟ್ಟು ನೀವು ಆ ಸ್ಥಾನದಲ್ಲಿ ಇರಲಿಕ್ಕೆ ಸಮರ್ಥರು ಅಲ್ಲ ಎನ್ನುವುದನ್ನು ನೀವಾಗಿಯೇ ಒಪ್ಪಿಕೊಂಡ ಹಾಗಾಯಿತು. ನಿಮ್ಮ ತತ್ವಗಳು ಏನಿದೆ, ನಿಮ್ಮ ಆದರ್ಶಗಳು ಏನಿದೆ, ಅದನ್ನೆಲ್ಲಾ ನೀವು ಬಲಿಕೊಟ್ಟು, ಇಲ್ಲಿ ನಡೆದಿರತಕ್ಕಂತಹ ಸರ್ಕಮ್‌ಸ್ಟೆನ್‌ಸಸ್ ಏನಿದೆ, ರಾಜಕಾರಣದಲ್ಲಿ ಇರಲಿ ಅಧಿಕಾರ ವಲಯದಲ್ಲಿ ಇರಲಿ, ಏನೇ ಇರಲಿ, ಭ್ರಷ್ಟಾಚಾರದಲ್ಲಿ ನನಗೆ ಮುಂದೆ ಹೋಗಲಿಕ್ಕೆ ಸಾಧ್ಯವಿಲ್ಲ, ನಿಮ್ಮ ಸರ್ಕಾರ ಏನಾಗಿದೆ, ಆ ಸರ್ಕಾರದಲ್ಲಿ ಏನಾಯಿತು, ಈ ಸರ್ಕಾರದಲ್ಲಿ ಏನಾಯಿತು ಎನ್ನುತ್ತಿದ್ದೀರಿ. ಅದೇ ಸರ್ಕಾರದ ಪ್ರಕಾರ ನಿಮ್ಮ ಸರ್ಕಾರ ಏಕೆ ಹೋಗಬೇಕು? ಹಿಂದಿನ ಸರ್ಕಾರದಲ್ಲಿ ಇದ್ದಂತಹ ಭ್ರಷ್ಟಾಚಾರದ ಬಗ್ಗೆ ನೀವು ವಿರೋಧಪಕ್ಷದಲ್ಲಿ ಇದ್ದುಕೊಂಡು ಸಮರ್ಥರಾಗಿ ಹೋರಾಟ ಮಾಡಿದ್ದೀರಿ, ಜನತೆಯ

ಮುಂದೆ ಹೋಗಿದ್ದೀರಿ, ಇವತ್ತು ನೀವು ಅಧಿಕಾರಕ್ಕೆ ಬಂದ ಕೂಡಲೇ ನಿಮ್ಮ ಹಿಂದಿನ ಸರ್ಕಾರದ ನಡವಳಿಕೆ ಏನಿತ್ತೋ, ಅದನ್ನು ನೀವು ಹೇಳುತ್ತಾ ಹೋದರೆ, ನಿಮ್ಮಲ್ಲಿ ಆದ ಬದಲಾವಣೆ ಏನು? ಹೊಸ ಸರ್ಕಾರ ಬಂತು, ಹೊಸ ನಾಯಕತ್ವ ವಹಿಸಿಕೊಂಡು ನೀವು ತಂದಂತಹ ಬದಲಾವಣೆ ಏನು ಎಂದು ನಾವು ಜನರಿಗೆ ಉತ್ತರ ಕೊಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಏನೊಂದು ಬೇಡಿಕೆ-ಗಳನ್ನು ಇಲ್ಲಿ ಮಂಡಿಸಿದ್ದಾರೆ, ಅವುಗಳ ಬಗ್ಗೆ ನಾವು ಬಹಳಷ್ಟು ಚಿಂತನೆಯನ್ನು ಮಾಡಬೇಕಾಗಿದೆ. ಜನ ನಮ್ಮನ್ನೆಲ್ಲ ಕಾಯುತ್ತಿದ್ದಾರೆ, ನಾವು ಏನು ಈ ಸದನದಲ್ಲಿ ಮಾತನಾಡಿದ್ದೇವೆ, ಸರ್ಕಾರ ನಮಗೆ ಏನು ಉತ್ತರ ಕೊಟ್ಟಿದೆ ಎಂದು ನೋಡುತ್ತಿದ್ದಾರೆ. ನೀವು ಹೇಳಿದಂತೆ ಫಿಲಾಸಫಿಯನ್ನು ನಾವು ಅಲ್ಲಿ ಹೋಗಿ ಹೇಳಲಿಕ್ಕಾಗುವುದಿಲ್ಲ. ನಾವು ಸ್ಪಷ್ಟವಾದ ಸರ್ಕಾರದ ನಿಲುವನ್ನು ಜನರಿಗೆ ಹೇಳಬೇಕಾಗಿದೆ. ಅದು ಏನೇ ಇರಲಿ ನೀವಂತೂ ಸಂಪೂರ್ಣವಾಗಿ ನಿಮ್ಮ ಆಡಳಿತ ವೈಫಲ್ಯವನ್ನು ಒಪ್ಪಿಕೊಂಡಿದ್ದೀರಿ ಎಂದು ನಾನು ಹೇಳುತ್ತಿದ್ದೇನೆ. ಅದರ ಜೊತೆಗೆ ನಾವು ಅನೇಕ ಪ್ರಶ್ನೆಗಳನ್ನು ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ನಿಮಗೆ ಕೇಳಿದ್ದೆವು. ಅವುಗಳಲ್ಲಿ ಒಂದಕ್ಕೂ ನೀವು ಉತ್ತರವನ್ನು ಕೊಟ್ಟಿಲ್ಲ. ಕೇವಲ ಒಂದು ರೀತಿಯ ಹಾರಿಕೆಯ ಉತ್ತರವನ್ನು ಮಾತ್ರ ನಮ್ಮ ಮುಂದಿಟ್ಟಿದ್ದೀರಿ. ಎಲ್ಲಕ್ಕಿಂತಲೂ ಮುಖ್ಯ-ವಾಗಿ ನೀವು ನಮ್ಮ ವಿದ್ಯುತ್ ಯೋಜನೆಗಳ ಬಗ್ಗೆ ಪ್ರಸ್ತಾಪಿಸಿದ್ದೀರಿ. ನಾನು ಇದನ್ನು ಸ್ಪಷ್ಟವಾಗಿ ಹೇಳ-ಬಯಸುತ್ತೇನೆ. ಕಳೆದ ಒಂದೂವರೆ ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಸರದ ಮೇಲೆ ಆಗ-ತಕ್ಕಂತಹ ಮಾಲಿನ್ಯದ ಬಗ್ಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ನಿಲುವನ್ನು ಸ್ಪಷ್ಟಪಡಿಸಿಕೊಂಡು ಹೋಗಿ-ದ್ದೇವೆ. ಇವತ್ತು ನಾವು ಅಂದು ಏನು ಹೇಳುತ್ತಿದ್ದೆವೋ, ಅದು ಇವತ್ತು ಸತ್ಯ, ಇಷ್ಟೆಲ್ಲಾ ಏಕೆ, ಆ ಸತ್ಯ ಇವತ್ತು ನಮಗೆ ಕಾಣುತ್ತಿದೆ. ಇವತ್ತು ಒಂದು ಎಂ.ಆರ್.ಪಿ.ಎಲ್. ಬರಬೇಕು ಅಂತ ಹೇಳಿ ನಾವು ಹೋರಾಟ ಮಾಡಿದವರು. ಅದು ಬಂದರೆ ನಮಗೆ ಉದ್ಯೋಗ ಸಿಗುತ್ತದೆ, ನಮ್ಮ ಜಿಲ್ಲೆ ಅಭಿವೃದ್ಧಿ-ಯಾಗುತ್ತದೆ ಎಂದು ಹೇಳಿಕೊಂಡು ಹೋರಾಟ ಮಾಡಿದೆವು. ಇವತ್ತು ಎಂ.ಆರ್.ಪಿ.ಎಲ್. ಬಂದು ಆದಂತಹ ಅನಾಹುತಗಳು ಏನು ಎಂಬುದರ ಬಗ್ಗೆ ದಿನಾಂಕ 26.12.95ರಂದು ಹಿಂದಿನ ಮುಖ್ಯ-ಮಂತ್ರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಎಲ್ಲಾ ಶಾಸಕರು, ಪರಿಸರವಾದಿಗಳು, ಮೀನುಗಾರರನ್ನು ಕರೆಸಿ-ಕೊಂಡು, ಹಿಂದಿನ ಮುಖ್ಯಮಂತ್ರಿಗಳು ಒಂದು ತೀರ್ಮಾನವನ್ನು ಕೈಗೊಂಡಿದ್ದರು, ಏನು ಎಂದು ಹೇಳಿದರೆ, ದಕ್ಷಿಣ ಕನ್ನಡ ಜಿಲ್ಲೆಯ ಧಾರಣ ಶಕ್ತಿ, ಕ್ಯಾರಿಯಿಂಗ್ ಕೆಪ್ಯಾಸಿಟಿ, ಇವತ್ತು ಈ ಕ್ಯಾರಿ-ಯಿಂಗ್ ಕೆಪ್ಯಾಸಿಟಿ ಅಂದರೆ ಏನು ಎನ್ನುವುದು ನಿಮ್ಮ ಪರಿಸರ ಮಂತ್ರಿಗಳಿಗೆ ಗೊತ್ತಿಲ್ಲ. ಪತ್ರಿಕಾ ಗೋಷ್ಠಿಯೊಂದರಲ್ಲಿ ಅವರು ಹೋದಾಗ ಅವರು ಕೇಳುತ್ತಾರೆ, ಕ್ಯಾರಿಯಿಂಗ್ ಕೆಪ್ಯಾಸಿಟಿ ಎಂದರೆ ಏನು ಎಂದು? ಆ ಬಗ್ಗೆ ಪತ್ರಿಕೆಗಳಲ್ಲೆಲ್ಲಾ ಬಂದಿದೆ. ಪರಿಸರ ಮಂತ್ರಿಗಳಿಗೆ ಕ್ಯಾರಿಯಿಂಗ್ ಕೆಪ್ಯಾಸಿಟಿ ಅಂದರೆ ಗೊತ್ತಿಲ್ಲ ಎಂದು. ಇಂತಹ ಒಂದು ಪರಿಸ್ಥಿತಿಯಲ್ಲಿ ನೀವು ಇದ್ದೀರಿ. ಇವತ್ತು ದಿನಾಂಕ 26.12.95ರಲ್ಲಿ ನೀವೇನು ಹಿಂದಿನ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಿರ್ಣಯ ತೆಗೆದುಕೊಂಡಿ-ದ್ದೀರಿ ನಮ್ಮ ಜಿಲ್ಲೆಯ ಬಗ್ಗೆ, ಅದನ್ನು ಇವತ್ತಿನವರೆಗೆ ನೀವು ಮಾನ್ಯತೆ ಮಾಡಿದ್ದೀರೋ? ಅದರ ಬಗ್ಗೆ ನೀವು ನಮಗೆ ಉಪದೇಶ ಮಾಡುತ್ತೀರಿ, ನೀವು ಹೇಳಿದಿರಿ, 18 ಟನ್ ಮರ ಕಡಿದರೆ 10 ವರ್ಷದ–

ವರೆಗೂ ಹಸಿರು ಸಿಗುವುದಿಲ್ಲ ಎಂದು. ಇವತ್ತು ಒಂದು ಎಂ.ಆರ್.ಪಿ.ಎಲ್.ನಿಂದ 60 ಸಾವಿರ ದೊಡ್ಡ ದೊಡ್ಡ ಮರಗಳನ್ನು ಕಡಿದು, 30 ಸಾವಿರ ಸಸಿಗಳನ್ನು ನೆಟ್ಟಿದ್ದೀರಿ. ಹಾಗಾದರೆ ನಮ್ಮ ಪರಿಸ್ಥಿತಿ ಎಲ್ಲಿಯ-ತನಕ ಬಂದಿದೆ ಎಂದು ಗೊತ್ತಾಗುತ್ತದೆ. ಒಂದು ಇಂಡಸ್ಟ್ರಿಯಿಂದ ಇಷ್ಟೆಲ್ಲಾ ಆಗಿದೆ. ಇವತ್ತು ನಮ್ಮ ಜಿಲ್ಲೆಗೆ 22 ಇಂಡಸ್ಟ್ರೀಸ್‌ಗಳನ್ನು ಹಾಕಿಕೊಂಡು, 4 ಸಾವಿರ ಮೆಗಾವ್ಯಾಟ್‌ನಷ್ಟು ಥರ್ಮಲ್ ಪ್ಲಾಂಟ್-ಗಳನ್ನು ನಮ್ಮ ಒಂದೇ ಜಿಲ್ಲೆಗೆ ಹೇರಿಕೊಂಡು, ವಿದ್ಯುತ್ ಬೇಡವೇ, ವಿದ್ಯುತ್ ಬೇಡವೇ ಎಂದು ಹೇಳಿ-ದ್ದೀರಿ. ವಿದ್ಯುತ್ ಯೋಜನೆಯ ಬಗ್ಗೆ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಂತಹ ನೀವು ವರಾಹಿ ಯೋಜನೆ ಅಭಿವೃದ್ಧಿ ಬಗ್ಗೆ ನೀವೇನು ಪ್ರಾಧಾನ್ಯತೆ ಕೊಟ್ಟಿದ್ದೀರಿ ಎಂಬುದನ್ನು ಹೇಳಿ. ರಾಯಚೂರು ಯೋಜನೆ ಬಗ್ಗೆ, ಉಷ್ಣ ವಿದ್ಯುತ್ ಸ್ಥಾವರದಲ್ಲಿ ಇಂಪ್ರೂವ್‌ಮೆಂಟ್ ಮಾಡಲಿಕ್ಕೆ ನೀವೇನು ಕಾರ್ಯ-ಕ್ರಮ ಹಾಕಿಕೊಂಡಿದ್ದೀರಿ? ಇವತ್ತು ವರಾಹಿ ಮತ್ತು ರಾಯಚೂರು ಉಷ್ಣವಿದ್ಯುತ್ ಸ್ಥಾವರದ ಅಭಿ-ವೃದ್ಧಿ ಬಗ್ಗೆ ಏನೂ ಗಮನ ಕೊಡದೇ, ನೇರವಾಗಿ ನಮ್ಮ ಮೇಲೆ ಆರೋಪ ಹೊರಿಸಿ, ನಮ್ಮ ಜಿಲ್ಲೆಯ ಜನರನ್ನು ಬಲಿಪಶು ಮಾಡುತ್ತಿದ್ದೀರಿ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಅಧ್ಯಕ್ಷರೇ, ನಾನು ವಿವರಗಳನ್ನು ಮಾನ್ಯ ಸದಸ್ಯರಿಗೆ ಆಗಲೀ ಹೇಳಲಿಲ್ಲ. ರಾಯಚೂರು 5ನೇ ಮತ್ತು 6ನೇ ಘಟಕಗಳು ಈಗಾಗಲೇ ಕೆಲಸ ಪ್ರಾರಂಭಿಸಿವೆ. ನಾನೀಗ ಏನಾದರೂ ಹೇಳುವುದಕ್ಕೆ ಹೋದರೆ, ಮತ್ತೆ ಹಿಂದಿನವರ ಮೇಲೆ ಹೇಳುತ್ತೀರಿ ಎನ್ನುತ್ತಾರೆ. ಹಿಂದೆ ಇದೇ 5ನೇ ಮತ್ತು 6ನೇ ಘಟಕಗಳನ್ನು ಬೇರೆಯವರಿಗೆ, ಅಂದರೆ ಖಾಸಗಿಯವರಿಗೆ ವಹಿಸಿ-ಕೊಡಲು ಯೋಚನೆ ಮಾಡಿದ್ದರು. ನಾವು ಅಧಿಕಾರಕ್ಕೆ ಬಂದ ಮೇಲೆ ಕರ್ನಾಟಕ ಪವರ್ ಕಾರ್ಪೊ-ರೇಷನ್‌ಗೆ ಕೆಲಸ ಇನ್ನೂ ಹೆಚ್ಚು ಬೇಕಾಗುತ್ತದೆ ಎಂದು ಈಗ ಅದಕ್ಕೆ ವಹಿಸಿದ್ದೇವೆ. ಕೊಡಸಳ್ಳಿ, ಕಾದ್ರಾ, ಗೇರುಸೊಪ್ಪ ಈ ಮೂರು ಕಡೆ ಕೆಲಸ ನಡೆಯುತ್ತಿದೆ. ಅಲ್ಲಿ ಆನ್ ಗೋಯಿಂಗ್ ವರ್ಕ್ಸ್ ಫಾಸ್ಟಾಗಿ ನಡೆಯುತ್ತಿದೆ. ಈ ಮೂರರ ಜೊತೆಗೆ ರಾಯಚೂರು 5ನೇ ಮತ್ತು 6ನೇ ಘಟಕ ಕೂಡ ಕೆಲಸ ಪ್ರಾರಂಭಿಸಿದೆ. ಬೆಂಗಳೂರಿನ ಬಿಡದಿ ಬಳಿ 300 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಒಂದು ಮಲ್ಟಿಫ್ಯೂಯಲ್ ಒಂದು ಬಂದಿದೆ. ರಾಯಚೂರಿನಲ್ಲಿ ಕೆ.ಪಿ.ಸಿ.ಗೇ ಕೊಟ್ಟಿದ್ದೇವೆ. ಅಲ್ಲಿ ಈಗ ಕೆಲಸ ನಡೆಯುತ್ತಿದೆ. ನಾವೇನು ಕೆಲಸ ಮಾಡಿದ್ದೇವೆ ಎಂದು ನೀವು ಕೇಳುತ್ತೀರಿ, ಆರು ತಿಂಗಳು ಸ್ವಲ್ಪ ತಡೆ-ಯಿರಿ, ಏನು ಮಾಡಿದ್ದೇವೆ ಎಂಬುದು ನಿಮಗೇ ಗೊತ್ತಾಗುತ್ತದೆ.

ಶ್ರೀ ಯು.ಆರ್. ಸಭಾಪತಿ:- ಏನೇ ಆದರೂ ಕೂಡ ಒಂದು ಮಾತು ಮಾತ್ರ ನಾನು ಸ್ಪಷ್ಟ-ವಾಗಿ ಹೇಳುತ್ತೇನೆ.

ಅಧ್ಯಕ್ಷರು:- ಸ್ಪಷ್ಟೀಕರಣ ಕೇಳುವುದೇ ಒಂದು ಮಿನಿ ಭಾಷಣವಾಗುತ್ತಿದೆ. ಸ್ಪಷ್ಟೀಕರಣ ಅಂದರೆ, ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರ ಕೊಟ್ಟರೋ ಅದಕ್ಕೆ ಸಂಬಂಧಿಸಿದಂತೆ ಮಾತ್ರ ಸ್ಪಷ್ಟೀಕರಣ ಕೇಳಬೇಕು.

ಶ್ರೀ ಯು.ಆರ್. ಸಭಾಪತಿ:- ಸ್ಪಷ್ಟೀಕರಣ ಎಂದು ಹೇಳಿದರೆ ಮುಖ್ಯವಾಗಿ ಇವತ್ತು ಜಿಲ್ಲೆಯಲ್ಲಿ.

ಅಧ್ಯಕ್ಷರು:- ನೀವು ಬೇಸರ ಪಟ್ಟುಕೊಂಡರೂ ಪರವಾಗಿಲ್ಲ, ನನಗಿಲ್ಲಿ ಏನು ಕಷ್ಟವಾಗುತ್ತದೆ ಎನ್ನುವುದನ್ನು ಹೇಳುತ್ತೇನೆ. ಮೊದಲ ಬೆಂಚ್‌ನಲ್ಲಿರುವವರೆಲ್ಲಾ ಸ್ಪಷ್ಟೀಕರಣ ಕೇಳಲಿಕ್ಕೆ ಇಷ್ಟೊಂದು ಸಮಯವನ್ನು ತೆಗೆದುಕೊಂಡರೆ, ಪಾಪ ಹಿಂದಿನ ಸಾಲಿನಲ್ಲಿರುವವರ ಗತಿ ಏನು? ಸುಮಾರು ಜನ ಆಗಿನಿಂದ ಕೈ ಎತ್ತುತ್ತಿದ್ದಾರೆ, ಸ್ಪಷ್ಟೀಕರಣ ಕೇಳುವುದಕ್ಕಾದರೂ ನಾನು ಅವರಿಗೆ ಅವಕಾಶ ಕೊಡ-ಬೇಕಲ್ಲಾ, ಅದಕ್ಕೋಸ್ಕರ ಬೇಗ ಮುಗಿಸಿ.

ಶ್ರೀ ಯು.ಆರ್. ಸಭಾಪತಿ:- ಆಯಿತು, ನಾನು ಬೇಗ ಮುಗಿಸುತ್ತೇನೆ. ನಾನು ಇಷ್ಟೇ ಮಾತು ಹೇಳುತ್ತಿದ್ದೇನೆ, ನೀವು ಕೊಜೆಂಟ್ರಿಕ್ಸ್ ತನ್ನಿ, ಇನ್ನೆಷ್ಟೋ ವಿದ್ಯುತ್ ಸ್ಥಾವರ ತನ್ನಿ, ಒಂದು ಮಾತು ಮಾತ್ರ ಸ್ಪಷ್ಟ. ದಿನಾಂಕ 26.12.95ರ ನಿರ್ಣಯ ಏನು ಇದೆ, ಆ ನಿರ್ಣಯದಲ್ಲಿನ ಒಂದೇ ಒಂದು ಅಂಶ-ವನ್ನೂ ಕೂಡ ನೀವು ಇವತ್ತಿನವರೆಗೆ ಜಾರಿಗೆ ತರಲಿಲ್ಲ. ಕ್ಯಾರಿಯಿಂಗ್ ಕೆಪಾಸಿಟಿ ಅಧ್ಯಯನ ಮಾಡದೇ ಕೊಜೆಂಟ್ರಿಕ್ಸ್ ಆಗಲಿ, ಇನ್ನು ಯಾವುದೇ ಸ್ಥಾವರಗಳು ಆಗಲಿ ನಮ್ಮ ಜಿಲ್ಲೆಗೆ ತರಲಿಕ್ಕೆ ನಮ್ಮ ಜಿಲ್ಲೆಯ ಜನರು ಬಿಡುವುದಿಲ್ಲ. ಈ ಮಾತನ್ನು ನಾನು ನಿಮಗೆ ಖಡಾಖಂಡಿತವಾಗಿ ಹೇಳಬಯಸು-ತ್ತೇನೆ. ನೀವು 4 ಸಾವಿರ ಮೆಗಾವ್ಯಾಟ್ ವಿದ್ಯುತ್ ಸ್ಥಾವರಗಳನ್ನೆಲ್ಲಾ ನಮ್ಮ ಒಂದೇ ಜಿಲ್ಲೆಗೆ ಹಾಕಿ, ಬೇರೆ ಯಾವ ಜಿಲ್ಲೆಗೆ ನೀವು ವಿದ್ಯುತ್ ಸ್ಥಾವರಗಳ ರಚನೆ ಬಗ್ಗೆ ನಿರ್ಣಯ ತೆಗೆದುಕೊಂಡಿದ್ದೀರಿ? ಇವತ್ತು ಇಷ್ಟೊಂದು ವಿದ್ಯುತ್ ಸ್ಥಾವರಗಳನ್ನು ನಮ್ಮ ಜಿಲ್ಲೆಗೆ ಹಾಕುವಂತಹ ಒಂದು ಕೆಲಸ ಮಾಡಲಿ-ಕ್ಕೆ ಹೊರಟರೆ ನಮ್ಮದು ಅಭಿವೃದ್ಧಿಯಾದಂತಹ ಜಿಲ್ಲೆ. ನಮ್ಮಲ್ಲಿ ಶೈಕ್ಷಣಿಕ ಕ್ರಾಂತಿಯಾಗಿದೆ, ಆರ್ಥಿಕ ಕ್ರಾಂತಿಯಾಗಿದೆ, ಮೀನುಗಾರಿಕೆ ಉದ್ಯಮ ಇದೆ, ಬೀಡಿ ಉದ್ಯಮ ಇದೆ, ಹೆಂಚಿನ ಉದ್ಯಮ ಇದೆ, ಇಷ್ಟೊಂದು ಅಭಿವೃದ್ಧಿ ಆದಂತಹ ಒಂದು ಪ್ರದೇಶದಲ್ಲಿ ನೀವು ಆ ಪ್ರದೇಶಗಳನ್ನೆಲ್ಲ ಅಕ್ವೈರ್ ಮಾಡಿ-ಕೊಂಡು ವಿದ್ಯುತ್ ಅನ್ನು ಪಡೆಯುವ ದೃಷ್ಟಿಯಿಂದ, ಅದನ್ನೇ ಒಂದು ನೆಪವನ್ನಾಗಿ ಮುಂದಿಟ್ಟು-ಕೊಂಡು ನಮ್ಮ ಜಿಲ್ಲೆಯ ಸರ್ವನಾಶಕ್ಕೆ ಹೊರಟ್ಟಿದ್ದೀರಿ ಎಂಬುದು ನನ್ನ ಭಾವನೆ. ನಮ್ಮನ್ನು ಸರ್ವನಾಶ ಮಾಡಿ ಈ ರಾಜ್ಯಕ್ಕೆ ವಿದ್ಯುತ್ ಕೊಟ್ಟು, ಸೌಲಭ್ಯ ಒದಗಿಸುವುದಾದರೆ ನಮ್ಮ ಜಿಲ್ಲೆಯ ಜನ ಅಂತೂ ಅದಕ್ಕೆ ಖಂಡಿತ ಬಿಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಅದರ ಜೊತೆಗೆ ದಿನಾಂಕ 26.12.95ರಂದು ಅದಂತಹ ನಿರ್ಣಯದ ಬಗ್ಗೆ ನೀವು ಏನು ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ಹೇಳಬೇಕು. ನಾನು ಸಂಜಯಗಾಂಧಿ ಆಸ್ಪತ್ರೆಯ ಬಗ್ಗೆ ಕೂಡ ಇಲ್ಲಿ ಪ್ರಸ್ತಾಪ ಮಾಡಿದೆ. ಬಹುಶಃ ಮಾನ್ಯ ಆರೋಗ್ಯ ಸಚಿವರು ಅದಕ್ಕೆ ಉತ್ತರ ಕೊಡಬಹುದು. ಏನಿದ್ದರೂ ಕೂಡ ಒಟ್ಟಿನಲ್ಲಿ ತಾವು ಇಷ್ಟು ಕ್ಲಾರಿಫಿಕೇಶನ್‌ಗೆ ನನಗೆ ಉತ್ತರ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಮುಂದಿನ ಬೆಂಚಿನವರು ಜಾಸ್ತಿ ಸಮ-ಯವನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳುತ್ತಿದ್ದೀರಿ. ನಾವೇನೂ ಜಾಸ್ತಿ ಸಮಯವನ್ನು ತೆಗೆದು-ಕೊಳ್ಳಲಿಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು:- ನನ್ನ ಅಭಿಪ್ರಾಯ ಏನೆಂದರೆ, ಇದು ಹಿಂದೆ ಇರತಕ್ಕಂಥವರಿಗೆ ಮಾದರಿ ಆಗ-ಬೇಕು. ಮಾನ್ಯ ಸಭಾನಾಯಕರು ಉತ್ತರ ಕೊಟ್ಟಿದ್ದು ಆದಮೇಲೆ, ಅವರು ಹೇಳಿರತಕ್ಕಂತಹ ಉತ್ತರ-ದಲ್ಲಿ ಅಸ್ಪಷ್ಟತೆ ಯಾವುದಾದರೂ ಇದ್ದರೆ, ಅದರ ಬಗ್ಗೆ ಮಾತ್ರ ಸ್ಪಷ್ಟೀಕರಣ ಕೇಳಬೇಕು. ಆದರೆ ಅದೇ ಒಂದು ಭಾಷಣವಾಗಬಾರದು ಎಂಬುದೇ ನನ್ನ ಅಭಿಪ್ರಾಯವಾಗಿದೆ. ಹೀಗಾದರೆ ಹಿಂದಿನ ಬೆಂಚಿ-ನವರ ಗತಿಯೇನು?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರಿಂದ ಸ್ಪಷ್ಟೀಕರಣ ಕೇಳುವುದು ಪ್ರಾರಂಭವಾಗುತ್ತದೆ. ನಂತರ ಒಬ್ಬೊಬ್ಬರಾಗಿ ಮುಂದಿನ ಸಾಲಿನವರು ಸ್ಪಷ್ಟೀ-ಕರಣ ಕೇಳುತ್ತೇವೆ. ಮೊದ ಮೊದಲಿಗೆ ನೀವು ತಾಳ್ಮೆಯಿಂದ ಇರುತ್ತೀರಿ, ಸರದಿ ನಮ್ಮಲ್ಲಿಗೆ ಬಂದ ತಕ್ಷಣ ತಮ್ಮ ತಾಳ್ಮೆ ಕೆಟ್ಟು ನಾವು ಸಿಕ್ಕಿಹಾಕಿಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಸ್ಪಷ್ಟೀಕರಣ ಕೇಳಲಿಕ್ಕೆ ಎರಡು ನಿಮಿಷಕ್ಕಿಂತ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಲಿಲ್ಲ.

ಅಧ್ಯಕ್ಷರು:- ಅದು ನನಗೆ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ಮುಂದಿನ ಸಾಲಿನವರು ಸ್ಪಷ್ಟೀಕರಣ ಕೇಳಿಕೊಂಡು ಬರುತ್ತಾ, ಸರದಿ ನನ್ನ ಹತ್ತಿರ ಬರುವ ವೇಳೆಗೆ ಸ್ವಲ್ಪ ಸ್ವಲ್ಪವಾಗಿ ನಿಮ್ಮ ತಾಳ್ಮೆ ಕೆಡುತ್ತಾ, ನಮ್ಮ ಹತ್ತಿರ ಬರುವುದ-ರೊಳಗೆ ತೀರಾ ಕೆಟ್ಟಿರುತ್ತದೆ. ನಮ್ಮನ್ನು ಬೇಕಾದರೆ ಹಿಂದಿನ ಸಾಲಿಗೆ ಕಳುಹಿಸಿ, ನಾನು ಹೋಗಲಿಕ್ಕೆ ಸಿದ್ಧನಾಗಿದ್ದೇನೆ. ಹೇಗಿದ್ದರೂ ನೀವು ಹಿಂದಿನ ಸಾಲಿನವರಿಗೇ ಹೆಚ್ಚಿನ ಎನ್‌ಕ್ರೇಜ್, ಸಪೋರ್ಟ್ ಮಾಡುವುದರಿಂದ, ನಿಮ್ಮ ಸಪೋರ್ಟ್ ನಮಗೇ ಸಿಗುತ್ತದೆ.

ಅಧ್ಯಕ್ಷರು:- ಬರೀ ಬಾಯಿ ಮಾತಿನ ಸಪೋರ್ಟ್ ಅಷ್ಟೆ, ಪಾಪ ಅವರಿಗೆ ಇನ್ನಾವ ಸಪೋರ್ಟ್ ಸಿಕ್ಕಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನೀವು ನಮ್ಮನ್ನೂ ಅವರನ್ನೂ ಎತ್ತಿಕಟ್ಟಿ ಫಜೀತಿ ಮಾಡಿಬಿಟ್ಟೀರಿ. ಬೆಳಿಗ್ಗೆ ಆಯಿತಲ್ಲಾ, ಆ ರೀತಿ ಮಾಡಬೇಡಿ. ಬೆಳಿಗ್ಗೆ ಹೆಂಗಸರನ್ನು ನಮ್ಮ ಮೇಲೆ ಎತ್ತಿಕಟ್ಟಿ ನಮ್ಮ ಹಣೆಬರಹ ನೋಡಿದ್ದೀರಿ. ಮತ್ತೊಮ್ಮೆ ಹಾಗಾಗಬಾರದು. ಶ್ರೀಮಾನ್ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾದ ನಂತರ ಪ್ರಪ್ರಥಮವಾಗಿ ಅವರು ತಮ್ಮ ಬೇಡಿಕೆಗಳ ಮೇಲೆ ನಡೆದಂತಹ ಚರ್ಚೆಗೆ ಉತ್ತರ ನೀಡಿದ್ದಾರೆ. ನಾನು ಅವರ ಉತ್ತರದಿಂದ ಬಹಳ ನಿರಾಶನಾಗಿದ್ದೇನೆ. ಅವರಿಗೆ ಇರತಕ್ಕಂತಹ ಶಕ್ತಿ, ವ್ಯಕ್ತಿತ್ವ ಮತ್ತು ಅನುಭವದ ಆಧಾರದ ಮೇಲೆ ಅವರು ಆಡಳಿತವನ್ನು ನಡೆಸುತ್ತಿದ್ದಾರೆ.

7.50 ಪಿ.ಎಂ.

ಅವರು ಯಾವುದಾದರೂ ಒಂದು ನಮ್ಮ ಆಡಳಿತದಲ್ಲಿ ನಾನು ಈ ರೀತಿ ಮಾಡುವುದಕ್ಕೆ ಹೊರಟ್ಟಿದ್ದೇನೆ ಇನ್ನು ನಮ್ಮ ಆಡಳಿತ ಸ್ಪಷ್ಟ ಅನ್ನುವ ಒಂದು ಅಕ್ಷರ ಅವರು ಹೇಳಲಿಲ್ಲ. ತತ್ವಜ್ಞಾನಿ ಪ್ರಕಾರ ಬೆಳಿಗ್ಗೆಯಿಂದ ಅವರು ತತ್ವಗಳನ್ನೇ ಹೇಳಿಕೊಂಡು ಬರುತ್ತಿದ್ದಾರೆ. ಬೆಳಿಗ್ಗೆ ಕನಕದಾಸರದು ಹೇಳಿದರು, ಪುರಂದರದಾಸರದ್ದು ಹೇಳಿದರು, ಈಗ ಕಾಳಿದಾಸನಿಗೆ ಬಂದಿದ್ದಾರೆ. ದೇಶ ವಿದೇಶಗಳದ್ದು ಎಲ್ಲಾ ಮಾತನಾಡಿಕೊಂಡು ಬಂದಿದ್ದಾರೆ. ಅವೆಲ್ಲಾ ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಒಂದು ನನ್ನ ಸರ್ಕಾರದ ನೀತಿ ಈ ರೀತಿ ಇದೆ, ಈ ರೀತಿ ಮಾಡುತ್ತಿದ್ದೇವೆ, ಒಂದು, ಎರಡು, ಮೂರು ಈ ರೀತಿಯಾಗಿ ನಮ್ಮ ಗುರಿ ಸಿದ್ಧಾಂತ ಇದೆ, ಇದನ್ನು ಜಾರಿಗೆ ತರಲು ಹೊರಟಿದ್ದೇವೆ ಎನ್ನತಕ್ಕಂಥದ್ದನ್ನು ಅವರು ತಿಳಿಸಲಿಲ್ಲ. ಎರಡನೆಯದು ಶಾಸಕರ ಬಗ್ಗೆ ಮಾತನಾಡುತ್ತ ಏಕೋ ಭ್ರಷ್ಟಾಚಾರ ಶಾಸಕರಿಂದ ಪ್ರಾರಂಭವಾಯಿತು ಎನ್ನತಕ್ಕಂತಹ ಅರ್ಥದಲ್ಲಿ ಅವರು ಮಾತನಾಡಿದರು. ಅದು ನನಗೆ ಅಷ್ಟು ಸಾಧುವಾಗಿ ಅನ್ನಿಸಲಿಲ್ಲ. ಭ್ರಷ್ಟಾಚಾರ ಶಾಸಕರಿಂದ ಪ್ರಾರಂಭವಾಯಿತು ಎಂದರೆ ಕಷ್ಟ. ಶಾಸಕರು ಅಧಿಕಾರಿಗಳನ್ನು ಒಂದು ಮಾತು ಆಡಿದರೆ ಕಷ್ಟ, ನಮ್ಮ ಕುನ್ನೂರು ಅವರ ಹಣೆಬರಹ ಹಾಗಾಯಿತು, ಇವರು ಏನೋ ಹೇಳುವುದಕ್ಕೆ ಹೋಗಿ ಹೀಗೆ ಆಯಿತು. ನಾಳೆ ನಾವು ಯಾರನ್ನೂ ಮಾತನಾಡುವ ಹಾಗಿಲ್ಲ. ನಾವು ಶಾಸಕರು ಯಾವ ಅಧಿಕಾರಿ, ತಹಶೀಲ್ದಾರನನ್ನೂ ಮಾತನಾಡಿಸುವ ಹಾಗಿಲ್ಲ. ಒಬ್ಬ ಗುಮಾಸ್ತನನ್ನು ಮಾತನಾಡಿಸುವ ಹಾಗಿಲ್ಲ. ಈ ಪರಿಸ್ಥಿತಿ ನಿರ್ಮಾಣಕ್ಕೆ ನೀವೇ ಎತ್ತಿ ಕಟ್ಟಿದರೆ ನಾಳೆ ಶಾಸಕರ ಪರಿಸ್ಥಿತಿ ಏನು? ಅದರ ಬಗ್ಗೆ ತಾವು ಪ್ರಸ್ತಾಪ ಮಾಡಬೇಕು. ನಮ್ಮ ಕಾಲದಲ್ಲಿ ಶಾಸಕರ ಸಂಬಳ ಬಹಳ ಕಡಿಮೆ ಇತ್ತು. ನಾನು 1967ರಲ್ಲಿ 150 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದೆ. ಇಲ್ಲಿ ಒಂದು ದಿನಕ್ಕೆ 15 ರೂಪಾಯಿ ಕೊಡುತ್ತಿದ್ದರು. ಆಗ ವಿರೋಧಪಕ್ಷದ ನಾಯಕರಿಗೆ ಕಾರು ಇರಲಿಲ್ಲ, ಮನೆ ಇರಲಿಲ್ಲ, ನಾವೆಲ್ಲಾ ಬಹಳ ಪ್ರಾಮಾಣಿಕವಾಗಿ ಈಗ ಎಷ್ಟು ಕೂತಿದ್ದೇವೆ ಇದೇ ಪ್ರಕಾರ 11 ಗಂಟೆಗೆ ಬಂದರೆ ಸಾಯಂಕಾಲ ಆರು ಗಂಟೆಯವರೆಗೆ ಕೂಡುತ್ತಿದ್ದೆವು. ಅದರಲ್ಲಿ ಏನೂ ಹಿಂದು ಮುಂದು ಇಲ್ಲ.

ಅಧ್ಯಕ್ಷರು:- ಆಗ ದಿವಸಕ್ಕೆ ಮೂರು ಸಲ ಎತ್ತಿ ಹೊರಗೆ ಹಾಕಿ ಮತ್ತೆ ಒಳಗೆ ಕರೆದುಕೊಳ್ಳುತ್ತಿದ್ದರು.

ಶ್ರೀ ವಾಟಾಳ್ ನಾಗರಾಜ್:- ಅದು ಅವತ್ತಿನ ಪರಿಸ್ಥಿತಿ. ಹೊರಗೆ ಹಾಕುತ್ತಿದ್ದರು, ದಿನಗಟ್ಟಲೆ ಹೊರಗೆ ಹೋಗುತ್ತಿದ್ದೆವು, ಬರುತ್ತಿದ್ದೆವು ಅದು ನಡೆದಿದೆ. ಶಾಸಕರು ಇವತ್ತಿನ ಪರಿಸ್ಥಿತಿ ವ್ಯವಸ್ಥೆ ಬೇರೆ. ಮಾನ್ಯ ಶಾಸಕರು ಆಶ್ರಯ ಮನೆಗಳ ವಿಚಾರದಲ್ಲಿ ಕೇಳುವುದು ಸರಿ ಇದೆ. ಶಾಸಕರಿಗೆ ಅಧಿಕಾರ ಕೊಡಬೇಕು, ಶಾಸಕರ ಹೆಸರಿನಲ್ಲಿ ಕನಿಷ್ಟ ಅವರು ಹೇಳಿದ ರಸ್ತೆಗಳು, ಕೆಲವು ಕೊಳವೆ ಬಾವಿಗಳು ಕೊಡತಕ್ಕಂಥದ್ದಕ್ಕೆ ಕೆಲವು ಮನೆ ಕಟ್ಟಿಸುವುದಕ್ಕೆ ಅವನು ಶಾಸಕನಾಗಿ ಉಳಿಯಬೇಕು ಅಂದರೆ ಇವೆಲ್ಲಾ ಇರಬೇಕಾಗುತ್ತದೆ. ನೀವು ಒಂದೇ ಸಾರಿ ಶಾಸಕನಿಗೆ ಯಾವ ಅಧಿಕಾರವನ್ನೂ ಕೊಡದೆ ಇವನು ಹೇಳಿದ ಮಾತು ಆ ಕ್ಷೇತ್ರದಲ್ಲಿ ಯಾರೂ ಕೇಳದೆ, ಕೊನೆಗೆ ಚುನಾವಣೆಗೆ ನಿಂತುಕೊಂಡು ಅವನು ಠೇವಣಿ ಕಳೆದುಕೊಂಡು ಹೋಗಬೇಕೆಂಬ ಉದ್ದೇಶ ನಿಮ್ಮ ಸರ್ಕಾರಕ್ಕೆ ಇದ್ದರೆ, ಆ ಕೆಲಸ ನೀವು

ಮಾಡಿ. ಶಾಸಕ ಏನು ಕೆಲಸ ಮಾಡಬೇಕು, ಮನೆ ಕೊಡುವುದಕ್ಕೆ ಅವನಿಗೆ ಅಧಿಕಾರ ಇಲ್ಲ. ರಸ್ತೆ ಮಾಡುವುದಕ್ಕೆ ಅಧಿಕಾರ ಇಲ್ಲ. ಕೊಳವೆ ಬಾವಿಗಳನ್ನು ಕೊಡುವುದಕ್ಕೆ ಅಧಿಕಾರ ಇಲ್ಲ. ರಸ್ತೆ ಮಾಡು-ವುದಕ್ಕೆ ಅಧಿಕಾರ ಇಲ್ಲ. ಅವನಿಗೆ ಕಾರ್ಯಾಲಯವನ್ನು ಕೊಡುವುದಿಲ್ಲ. ಅವನು ಏನು ಮಾಡಬೇಕು? ಶಾಸಕ ಏನು ಪುರಂದರದಾಸನೇ? ಏನು ಕನಕದಾಸನೇ? ಸಿಪ್ಪೆದಾಳ (ತಂಬೂರಿ) ಹಿಡಿದುಕೊಂಡು ತಮಟೆ ಹೊಡೆದುಕೊಂಡು ಹೋಗುವುದಕ್ಕೆ? ಏನು ತಿಳಿದುಕೊಂಡಿದ್ದೀರಿ ಶಾಸಕರನ್ನು ನೀವು? ಅದು ಆ ಕಾಲ. ಈ ಕಾಲ ಬೇರೆ. ನೀವು ಮಂತ್ರಿಗಳಾಗಿದ್ದೀರಿ, ನಿಮ್ಮ ಹಿಂದೆ 12 ಕಾರುಗಳು ಬರುತ್ತವೆ. ನೀವು ಮಂತ್ರಿಗಳಿಗೆ, ಉಪಮಂತ್ರಿಗಳಿಗೆ . . .

ಶ್ರೀ ಸಿದ್ಧರಾಮಯ್ಯ:- ವಿಕೇಂದ್ರೀಕರಣದ ಬಗ್ಗೆ ನಂಬಿಕೆ ಇದೆಯೋ ಇಲ್ಲವೊ.

ಶ್ರೀ ವಾಟಾಳ್ ನಾಗರಾಜ್:- ವಿಕೇಂದ್ರೀಕರಣ ಮಾಡುವುದಕ್ಕೆ ಹೋಗಿ ಶಾಸಕರ ಕತ್ತು ತೆಗೆ-ಯುತ್ತಿದ್ದೀರಿ ನೀವು. ವಿಕೇಂದ್ರೀಕರಣದ ಬಗ್ಗೆ ನಿಮಗೆ ನಂಬಿಕೆ ಇಲ್ಲ.

ಅಧ್ಯಕ್ಷರು:- ವಾಟಾಳ್ ನಾಗರಾಜ್‌ರವರೇ, ಶಾಸಕರು ಕನಕದಾಸರೂ ಅಲ್ಲ, ಕಾಳಿದಾಸರೂ ಅಲ್ಲ, ಈಗ ರಾಮದಾಸರು.

ಶ್ರೀ ವಾಟಾಳ್ ನಾಗರಾಜ್:- ಮುಖ್ಯಮಂತ್ರಿಗಳು ಪ್ರಾಮಾಣಿಕವಾಗಿ ಅರ್ಥ ಮಾಡಿಕೊಳ್ಳ-ಬೇಕು, ಒಂದು ಸಾರಿ ಅವರು ಇಡೀ ಕ್ಷೇತ್ರಕ್ಕೆ ಹೋಗಲಿ ಏನಾಗುತ್ತದೆ, ಒಬ್ಬ ಶಾಸಕ ನಾವು ಯಾವುದೋ ಒಂದು ರೀತಿಯಲ್ಲಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರನ್ನು ಜಿಲ್ಲಾ ಪಂಚಾಯಿತಿ ಸದಸ್ಯರನ್ನು ಎಲ್ಲರನ್ನೂ ಒಗ್ಗೂಡಿಸಿಕೊಂಡು ಒಂದು ಯಾವುದೋ ಅಂಗನವಾಡಿ ಕಟ್ಟಡ ಉದ್ಘಾಟನೆ ಮಾಡಬೇಕಾದರೆ ಎಲ್ಲರನ್ನು ಜೊತೆಗೆ ಕರೆದುಕೊಂಡು ಹೋಗಿ ನಾವು ಉದ್ಘಾಟನೆ ಮಾಡಿದ ಹಾಗೆ ಮಾಡುತ್ತಿದ್ದೀರಿ. ಅದರ ಅರ್ಥ ಏನು ನಾವು ಸೇರಿದೆವು ನೀವು ಸೇರಿದೆವು ಎಂದು ನಾನು ಹೇಳುತ್ತೇನೆ, ಬಹಳ ಅತ್ಯಂತ ಶೋಚನೀಯವಾಗಿದೆ. ನೀವು ಕೆಲವು ಶಾಸಕರಿಗೆ ಹೇಳಬೇಕು ಇದ್ದಂತಹ ಸವಲತ್ತು-ಗಳನ್ನು ಸ್ವಂತಕ್ಕೆ ಅಲ್ಲ, ಆ ಕ್ಷೇತ್ರದಲ್ಲಿ ಒಬ್ಬ ಶಾಸಕ ಒಂದು ವಾರಕ್ಕೆ, 15 ದಿವಸಕ್ಕೆ ಹಳ್ಳಿಗೆ ಹೋದಾಗ ಆ ಜನ ಒಂದು ಕೊಳವೆಬಾವಿ ಕೇಳುತ್ತಾರೆ, ಕೊಡುವುದಕ್ಕಾಗುವುದಿಲ್ಲ. ಒಂದು ರಸ್ತೆ ಕೇಳುತ್ತಾರೆ ಕೊಡುವುದಕ್ಕಾಗುವುದಿಲ್ಲ. ಒಂದು ಮನೆ ಕೇಳುತ್ತಾರೆ ಕೊಡುವುದಕ್ಕಾಗುವುದಿಲ್ಲ ಅಂದರೆ ನೀವು ಯಾವುದೂ ಬೇಡ ಎನ್ನತಕ್ಕಂತಹ ಪ್ರಶ್ನೆ ಆಗಿದೆ. ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯಿತಿಯವರ ಅಧಿಕಾರವನ್ನು ವಿಕೇಂದ್ರಿಕರಣವನ್ನು ಬದಲಾವಣೆ ಮಾಡಬೇಕೆಂದು ಅಲ್ಲ, ಹಿಂದೆ ವಿಕೇಂದ್ರೀಕರಣ ಇರಲಿಲ್ಲವೇ? ಹೊಸದಾಗಿ ನೀವೇ ಏನೋ ಸೂರ್ಯ ಚಂದ್ರರನ್ನು ತಂದಿಟ್ಟಿದ್ದೀರಾ ನೀವು ಏನು ಆಕಾಶ ಭೂಮಿ ಮೇಲೆ ಇಳಿಸಿದ್ದೀರಾ, ನನಗೆ ಗೊತ್ತಿದೆ ಸಿದ್ದರಾಮಯ್ಯನವರೇ, ದಯಮಾಡಿ ನನಗೆ ಗೊತ್ತಿದೆ ಹಿಂದೆ ಇದ್ದ ಪರಿಸ್ಥಿತಿ ಬೇರೆ, 1967ರಲ್ಲಿ ನಾನು ಬೆಂಗಳೂರು ನಗರದ ಶಾಸಕನಾಗಿದ್ದೆ, 1972ರಲ್ಲಿ ಬೆಂಗಳೂರು ನಗರದ ಶಾಸಕನಾಗಿದ್ದೆ. ತಮ್ಮ ಹತ್ತಿರ ನಾನು, ಆಗ ಸಿದ್ದವೀರಪ್ಪನವರು ಭಾಷಣ ಮಾಡುವಾಗ ಹೇಳಿದರು, ಇದುವರೆಗೆ ಅನೇಕ ಜನ ನನ್ನ ಹತ್ತಿರ ವರ್ಗಾವರ್ಗಿಗೆ ಪತ್ರಗಳನ್ನು ತಂದಿದ್ದಾರೆ. ವಾಟಾಳ್ ನಾಗರಾಜ್ ಒಂದೂ ಪತ್ರ ತರಲಿಲ್ಲ ಎಂದರು. ಕಾರಣವೇನೆಂದರೆ ಈ

ಪಟ್ಟಣದ ವ್ಯವಸ್ಥೆಗೂ ತಾಲ್ಲೂಕಿನ ವ್ಯವಸ್ಥೆಗೂ ಬಹಳ ವ್ಯತ್ಯಾಸ ಇದೆ. ಈ ವ್ಯವಸ್ಥೆ ಬಗ್ಗೆ ತಾಲ್ಲೂಕಿನ ಗ್ರಾಮೀಣ ಪ್ರದೇಶದಿಂದ ಬಂದಿರತಕ್ಕಂತಹ ಶಾಸಕರ ಪರಿಸ್ಥಿತಿ ಅತ್ಯಂತ ಶೋಚನೀಯ, ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ನೀವು ಅರ್ಥ ಮಾಡಿಕೊಳ್ಳದೆ ನೀವು ವಿಕೇಂದ್ರಿಕರಣದ ಹೆಸರಿನಲ್ಲಿ ಶಾಸಕರನ್ನು ಕಪ್ಪು ಶಿಲೆಯಲ್ಲಿ ಮುಚ್ಚಿಡುವುದಕ್ಕೆ ಹೋಗಬೇಡಿ. ಅದು ಒಳ್ಳೆಯ ನಿರ್ಧಾರ ಅಲ್ಲ. ವಿಕೇಂದ್ರೀಕರಣ ಮಾಡಿ ತಾಲ್ಲೂಕು ಪಂಚಾಯಿತಿಗಳಿಗೆ, ಜಿಲ್ಲಾ ಪಂಚಾಯಿತಿಗಳಿಗೆ ಏನು ಬೇಕಾದರೂ ಮಾಡಿ, ಆದರೆ ಶಾಸಕರಿಗೆ ಕೊಡತಕ್ಕಂತಹ ಅವರ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂತಹ ವ್ಯವಸ್ಥೆಗೆ ನೀವು ಕಲ್ಲು ಹಾಕಿದರೆ ಒಳ್ಳೆಯದಲ್ಲ. ಅದರ ಬಗ್ಗೆ ಮತ್ತೆ ನೀವು ಪುನರ್ ಪರಿಶೀಲನೆ ಮಾಡಿ ಒಂದು ಮಾತ್ರ ತಾವು ನಿಜ ಹೇಳಿದಿರಿ, ಅದು ಸಂತೋಷ ಪಟ್ಟೆ. ತಾವು ಮತ್ತು ನಂಜೇಗೌಡರು ಎಲ್ಲಾ ವಿಚಾರ-ಗಳಲ್ಲಿ ಸಮಾನ ಮನಸ್ಕರು ಎಂದು ಹೇಳಿದಿರಿ. ಅದೊಂದು ಬಹಳ ಸ್ಪಷ್ಟವಾದ ಉತ್ತರ.

+ **ಶ್ರೀ ಜಿ.ವಿ. ಶ್ರೀರಾಮರೆಡ್ಡಿ:-** ಒಂದೆರಡು ಸ್ಪಷ್ಟೀಕರಣ ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿ-ಗಳು ಹೇಳುವಾಗ ಬ್ರಾಹ್ಮಣ ಮತ್ತು ಮಹಾ ಬ್ರಾಹ್ಮಣ ಎಂದರೆ ವಶಿಷ್ಟರು ಕೌಶಿಕರು ಎಂದು ಹೇಳಿ-ದರು. ಆದರೆ ಅದನ್ನು ಮಿಸ್ ಇಂಟ್ರೆಪ್ರಿಟ್ ಮಾಡಿದ್ದು ಹೀಗೆ. ಮುಖ್ಯಮಂತ್ರಿಗಳು ಈಗ ಹೇಗೆ ಮಾಡಿದರು. ಬ್ರಾಹ್ಮಣ ಮಹಾ ಬ್ರಾಹ್ಮಣ ಎಂದು ಅದು ಅಲ್ಲ, ಕೌಶಿಕ ವಿಶ್ವಾಮಿತ್ರ ಆಗಿದ್ದು ಆತನು ಅವತ್ತಿನ ಪರಿಸ್ಥಿತಿಯಲ್ಲಿ ಮನುಷ್ಯನೊಬ್ಬ ಅಜ್ಞಾನದಿಂದ ಜ್ಞಾನವನ್ನು ಸಂಪಾದನೆ ಮಾಡಲಿಕ್ಕೆ ಮಾಡಿ-ದಂತಹ ಪ್ರಯತ್ನವನ್ನು ಕ್ಯಾಸ್ಟ್‌ಗೆ ಬದಲಾವಣೆ ಮಾಡಿದಂತಹ ಇತಿಹಾಸವೇ ಭಾರತದ ದುರಂತದ ಇತಿಹಾಸ. ಹಾಗಾಗಿ ಇದು ಆಗಿರತಕ್ಕಂಥದ್ದು ಅದು ಹಾಗೆ ಅಲ್ಲ, ಇದು ಹೀಗೆ. ಎರಡನೆಯದು ಇನ್ನೊಂದು ಸತ್ಯ ಹೇಳಿದರು. Cast is immobile. It is right. But, class is mobile. ಇನ್ನೊಂದು ಯಾವುದೆಂದರೆ, A class is having two faces. One class controls the means of production and another class does not have any means of production. ಆ ಕ್ಲಾಸ್ ಬಗ್ಗೆ ಅವರು ಹೇಳಲಿಲ್ಲ.

MR. SPEAKER:- What is the proletariat in India? who constitutes the proletariat in India?

SRI G.V. SRIRAMA REDDY:- The persons who do not have anything to produce except selling their labour force.

MR. SPEAKER:- Will you see their class and caste composition? They constitute the same class.

SRI. G.V. SRIRAMA REDDY:- Yes, yes.

MR. SPEAKER:- The caste and the class at the proletariat level in India is one and the same.

SRI G.V. SRIRAMA REDDY:- Exactly.

MR. SPEAKER:- That is exactly what he said.

SRI G.V. SRIRAMA REDDY:- No, No, That is the different thing.

MR. SPEAKER:- When you go towards the apex level, the class and the caste, there they merge.

SRI G.V. SRIRAMA REDDY:- But caste is an immobile thing which cannot accept any change at all. But, class as the Chief Minister told, it accepts the change.

ಶ್ರೀ ಎಂ.ಪಿ. ಪ್ರಕಾಶ್:- ಚರಣಶೀಲತೆಯನ್ನು ಕಳೆದುಕೊಂಡಿರತಕ್ಕಂಥದ್ದು ಅದು ಜಾತ್ಯಾತೀತತೆ. ಚರಣಶೀಲತೆ ಪಡೆದಿರತಕ್ಕದ್ದು ವರ್ಗ ಆಗಬಹುದು. ಕಮ್ಯುನಿಸ್ಟರಿಗೆ ಜಾತಿ ಇರಲಿಲ್ಲ. ಆದುದರಿಂದ ಅವರು ತಪ್ಪಾಗಿ ಅರ್ಥೈಸಿಕೊಂಡಿರಬಹುದು.

SRI G.V. SRIRAMA REDDY:- Caste does not have a mobility. It is a right. ನಾನು ತಪ್ಪಾಗಿ ಅರ್ಥೈಸಿಕೊಳ್ಳಲಿಲ್ಲ. ಅವರು ಕರೆಕ್ಟಾಗಿ ಹೇಳಿದ್ದಾರೆ. Caste is an immobile character. That is right. That is why it cannot accept any change.

ಶ್ರೀ ಸಿದ್ದರಾಮಯ್ಯ:- ಜಾತಿ ವ್ಯವಸ್ಥೆ ಬಿಟ್ಟು ವರ್ಗಕ್ಕೆ ಹೊರಟು ಹೋಗಿದ್ದೀರಿ. ಜಾತಿಯಲ್ಲಿ ವರ್ಗಾವಣೆ ಆಗದೇ ವರ್ಗದಲ್ಲಿ ಏನೂ ಬದಲಾವಣೆ ತರುವುದಕ್ಕೆ ಹೋಗುವುದಿಲ್ಲ. ಇದು ಮೂಲಭೂತವಾದ ಬದಲಾವಣೆ ಆಗಬೇಕೇ ಇನ್ನು ಯಾವುದೂ ಎಲ್ಲೂ ಆಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಆದರೆ ಜಗತ್ತಿನ ಇತಿಹಾಸ ಒಂದು ಪಾಠ ಹೇಳಿದೆ. ಯಾವುದೇ ದೇಶದಲ್ಲಿ ಜಾತಿ ಆಧಾರದ ಮೇಲೆ ಯಾವುದೇ ಸಮಸ್ಯೆ ಪರಿಹಾರ ಆಗಿಲ್ಲವೆಂದು ಜಗತ್ತಿನ ಇತಿಹಾಸ ಹೇಳಿದೆ.

ಶ್ರೀ ಸಿದ್ದರಾಮಯ್ಯ:- ಜಗತ್ತಿನ ಯಾವ ದೇಶದಲ್ಲಿ ಇಷ್ಟೊಂದು ಪ್ರಮಾಣದ ಜಾತಿ ವ್ಯವಸ್ಥೆ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್:- ಜಾತಿಯ ವ್ಯವಸ್ಥೆ ತೆಗೆದು ಹಾಕಲಿಕ್ಕೆ, ಜಾತಿಯ ವ್ಯವಸ್ಥೆಗಳಿಗೆ ರೆಕಗ್ನಿಷನ್ ಕೊಡಬೇಕಾದ ಅನಿವಾರ್ಯತೆ ಇದೆ. ಯಾವ ತುಳಿತಕ್ಕೆ ಒಳಗಾದ ಜಾತಿಗಳು ಇವೆ ಅವುಗಳ ಸಂಘಟನೆ ಮೂಲಕ ಜಾತ್ಯಾತೀತ ಸಮಾಜ ತರಬೇಕು ಎನ್ನುವುದು ನಮ್ಮ ಉದ್ದೇಶ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಹೌದು ಜಾತ್ಯಾತೀತತೆ ಇರತಕ್ಕಂತಹ ಸಮಾಜ ಬೇರೆ, ಜಾತಿ ಇರತಕ್ಕಂತಹ ಸಮಾಜ ಬೇರೆ.

MR. SPEAKER:- It is a different dimension. Please seek clarification.

SRI G.V. SRIRAMA REDDY:- Economic anarchy leads to corruption ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇಂತಹ ಎಲ್ಲಾ ಆರ್ಗ್ಯುಮೆಂಟ್ಸ್ ಕೇಳಿ ಆಮೇಲೆ ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಒಂದು ಜಿ.ಓ. ಇದೇ ರೀತಿ ಇಷ್ಯೂ ಆಗುತ್ತದೆ. ಅದಕ್ಕಾಗಿ ಬಹಳ ಕನ್‌ಫ್ಯೂಷನ್ ಬೇಡ ಇದ್ದುದು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಕನ್‌ಫ್ಯೂಷನ್ ಅಲ್ಲ, ಅವರು ಕೇಳಿದ್ದಕ್ಕೆ ಕ್ಲ್ಯಾರಿಫಿಕೇಷನ್ ಹೇಳುತ್ತಿದ್ದೇನೆ. ಮೆಟೀರಿಯಲ್ ಕರಪ್ಷನನ್ನು ಜನರಲ್ ಫಿನಾಮಿನ ಎಂದು ಹೇಳಿ ಒಪ್ಪಿಕೊಂಡಿದ್ದಾರೆ. ಇಂದಿರಾಗಾಂಧಿಯವರೂ ಒಪ್ಪಿಕೊಂಡಿದ್ದಾರೆ, ನಾವೂ ಒಪ್ಪಿಕೊಳ್ಳಬೇಕು. ಇದು ಅನಿವಾರ್ಯ ಎಂದು ಹೇಳಿದರು. ಮೆಟೀರಿಯಲ್ ಕರಪ್ಷನ್‌ಗಿಂತ most dangerous corruption is the mental corruption. ಆ ಭೌತಿಕ ದಾರಿದ್ರ್ಯ ಈ ದೇಶವನ್ನು ಭೌತಿಕ ಭ್ರಷ್ಟತೆ ಇವತ್ತು ಅದು ಮಹಾ ಅಪಾಯಕಾರಿ ಯಾವನೋ 10 ರೂಪಾಯಿ ಲಂಚ ತೆಗೆದುಕೊಳ್ಳುವುದು ಎಷ್ಟು ಅಪಾಯ ಎಂದು ನೀವು ಲೆಕ್ಕ ಹಾಕಿ ಭೌತಿಕವಾಗಿ ಅವನು ಆಲೋಚನಾ ದೃಷ್ಟಿ ಇರತಕ್ಕಂತಹ ಭ್ರಷ್ಟತೆ ಇದೆಯಲ್ಲಾ ಅದು ಹತ್ತು ರೂಪಾಯಿ ಲಂಚಕ್ಕಿಂತ ಭಾರಿ ಡೇಂಜರ್ ಆಗಿದೆ.

ಶ್ರೀ ಎಂ.ಪಿ. ಪ್ರಕಾಶ್:- ನ್ಯಾಯಾಧೀಶರ ನೇಮಕಾತಿ ವಿಚಾರ ಇಲ್ಲಿ ಹೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಭೌತಿಕ ಭ್ರಷ್ಟತೆ ಇದೆಯಲ್ಲಾ ಅದು ಮಹಾ ಡೇಂಜರ್. ಅದು ಮಹಾ ಅಪಾಯಕ್ಕೆ ಬಂದಿದೆ. ಮಾನ್ಯ ಅಧ್ಯಕ್ಷರೇ, ಮತ್ತೆ ಸೋಷಿಯಲ್ ಜಸ್ಟಿಸ್ ಬಗ್ಗೆ ಪ್ರಸ್ತಾವನೆ ಬಂದಿದೆ. Social justice cannot be given unless the means of production is socialised. ಪವರ್ ಪ್ರಾಜೆಕ್ಟ್ಸ್ ಬಗ್ಗೆ ಮುಖ್ಯಮಂತ್ರಿಗಳು ಹೇಳುತ್ತಾ ಇರತಕ್ಕಂಥ ಸಂದರ್ಭದಲ್ಲಿ ಹೇಳಿದರು What is the alternative? ಕರ್ನಾಟಕ ಪವರ್ ಕಾರ್ಪೋರೇಷನ್‌ನವರು ಆಲ್ಟರ್‌ನೇಟಿವ್ ಹೇಳಿದ್ದಾರೆ. ಮೊದಲಿನಿಂದ ಅವರಿಗೆ ಪ್ರೋತ್ಸಾಹ ಕೊಟ್ಟಿದ್ದರೆ ಅವರಿಗೆ ಆ ಪರಿಸ್ಥಿತಿ ಬರುತ್ತಿರಲಿಲ್ಲ. ಆದ್ದರಿಂದ ಹಿಂದೆ ಆದಂಥ ತಪ್ಪಿಗೆ ಒಂದೇ ಸಾರ್ತಿ ಹೋಗಿ ಕೊಜಿಂಟ್ರಿಕ್ಸ್ ಒಂದೇ ಆಲ್ಟರ್‌ನೇಟಿವ್ ಎಂದು ಹೇಳುತ್ತಾ ಇರತಕ್ಕಂಥವಾದ ಸರಿ ಇಲ್ಲ. ಇವೊತ್ತು ಇಡೀ ವ್ಯವಸ್ಥೆಯಲ್ಲಿರತಕ್ಕಂಥ ಲೋಪದೋಷಗಳನ್ನು ಹೇಳಿದ್ದಾರೆ. ಆದರೆ ಆ ಲೋಪದೋಷಗಳನ್ನು ಸರಿಪಡಿಸಲಿಕ್ಕೆ ನೀವು ಪೊಲಿಟಿಕಲ್ ಡಿಸಿಪ್ಲಿನ್ ಎಂದು ಹೇಳಿ ಚೈನಾದ ಎಕ್ಸಾಂಪಲ್ ಕೊಟ್ಟಿರಿ ಆದರೆ In china, political discipline comes because of its own system. ಆದರೆ ಇಲ್ಲಿ ಡೆಮಾಕ್ರಸಿ ಇದೆ. ನಿಮಗೆ ಐದು ವರ್ಷ ಸಮಯ ಇದೆ. ನೀವು ಹೇಳುತ್ತಿದ್ದ ಮೂಲಭೂತ ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ನಿಮಗೆ ಭಾರತ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಿಗತಕ್ಕಂಥದ್ದು ಐದು ವರ್ಷ ಮಾತ್ರ. China is a different thing. ಐದು ವರ್ಷದಲ್ಲಿ ಈ ಸಮಸ್ಯೆಗಳ ಪರಿಹಾರಕ್ಕಾಗಿ ನಿಮ್ಮ ಕಾರ್ಯಕ್ರಮ ಏನು ಎಂದು ಮಾತ್ರ ಹೇಳಲಿಲ್ಲ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಆಡಳಿತ ಸುಧಾರಣೆ ಮಾಡಲು ಶಾಸಕರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಎನ್ನುವಂಥ ಒಂದು ಮಾತನ್ನು ಹೇಳಿದರು. ನಾವು ಹೇಗೆ ನಡೆದುಕೊಳ್ಳಬೇಕೆಂದು ನೀವೆ ಒಂದು ಕೋಡ್ ಅಫ್ ಕಾಂಡಕ್ಟ್ ಮಾಡಿ. ಈ ಸದನದ ಎಲ್ಲರ ಒಪ್ಪಿಗೆಯನ್ನು ತೆಗೆದುಕೊಂಡು ಆ ಬಿಗಿಯನ್ನು ಮಾಡಿ. Let us begin, we all agree. We are responsible for spoiling all this. A code of conduct be evolved. ಅದನ್ನು ಸುಧಾರಿಸಲಿಕ್ಕೆ ನಾವೇನಾದರೂ ಪ್ರಯತ್ನ ಮಾಡಬೇಕಲ್ಲಾ. ಆ ಪ್ರಯತ್ನ ಮಾಡಲು ನೀವು ಕೋಡ್ ಅಫ್ ಕಾಂಡಕ್ಟ್ ಇವಾಲ್ವ್ ಮಾಡಿ. ಅಮೇಲೆ ಇವೊತ್ತೇ ಒಂದು ನಿರ್ಧಾರ ಮಾಡಿ ಟ್ರಾನ್ಸ್‌ಫರ್ ಸಲುವಾಗಿ ಎಂ.ಎಲ್.ಎ. ರವರಿಂದ ಮಿನಿಟ್ ಅಥವಾ ಫೋನ್ ಯಾರು ಮಾಡಿಸುತ್ತಾರೆ ಆ ಅಫೀಸರ್‌ಗೆ ಸಸ್ಪೆಂಡ್ ಮಾಡುತ್ತೇನೆಂದು ಶ್ರೀ ಭೈರೇಗೌಡರು ಆ ಬಿಗುವು ತಂದಿದ್ದಾರೆ. ನೀವು ಎಲ್ಲಾ ಮಂತ್ರಿಗಳು ಆ ಬಿಗುವನ್ನು ಪಾಲನೆ ಮಾಡಬೇಕು. ಅದನ್ನು ಮಾಡಿದರೆ ಸುಧಾರಣೆ ಕಾಣುತ್ತದೆ. ದಯವಿಟ್ಟು ಇದರ ಬಗ್ಗೆ ಪ್ರಯತ್ನ ಮಾಡಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):- ಸನ್ಮಾನ್ಯ ಸಭಾಧ್ಯಕ್ಷರೆ, ಆಡಳಿತದ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ಮಾನ್ಯ ಹಿರಿಯರು, ಮುಖ್ಯಮಂತ್ರಿಗಳು ಬಹಳ ಗಂಭೀರವಾಗಿ ಚರ್ಚೆ ಮಾಡಿದ್ದಾರೆ. ಆದರೆ ಇಡೀ ರಾಜ್ಯದಲ್ಲಿ ಭ್ರಷ್ಟಾಚಾರ ಮಾಡುವ ಪರ್ಸೆಂಟೇಜ್ ಎಷ್ಟು ಎಂದು ನಾವು ನೋಡಬೇಕು. ಭ್ರಷ್ಟಾಚಾರ ಮಾಡುವವರು ಕೇವಲ ಎಂಟರಿಂದ ಹತ್ತು ಪರ್ಸೆಂಟ್ ಮಾತ್ರ. ಅವರಿಂದ ನಾವು 90 ಪರ್ಸೆಂಟ್ ಜನ ಸಫರ್ ಪಡುತ್ತಿದ್ದೇವೆ. ಆ ಹತ್ತು ಪರ್ಸೆಂಟ್ ಜನ ಲಂಚ ತೆಗೆದುಕೊಳ್ಳುವುದು ಜನರಲ್ ಫಿನೋಮಿನಾ ಎಂದು ಹೇಳಿಕೊಂಡು ತಮ್ಮ ಹೊಣೆಗಾರಿಕೆಯಿಂದ ನುಸುಳಿಕೊಂಡ ಹಾಗಾಯಿತು. ಆ ಹತ್ತು ಪರ್ಸೆಂಟ್ ಜನರನ್ನು ರಿಪೇರಿ ಮಾಡುವುದಕ್ಕೆ ಏನು ಕಾರ್ಯಕ್ರಮ ರೂಪಿಸಬೇಕೋ ಅದನ್ನು ಮಾಡಿ. ಆಡಳಿತ ಸುಧಾರಣೆ ಎಂದರೇನು? ಒಬ್ಬ ವ್ಯಕ್ತಿ ಒಂದು ತಾಲ್ಲೂಕಿನಲ್ಲಿರತಕ್ಕಂಥ ಕಛೇರಿಗೆ ತಾನು ಹೋದರೆ ಕಾರ್ಯಕ್ರಮ ಸುಲಲಿತವಾಗಲಾರದು. ಸ್ವತಂತ್ರ ಬಂದು ಐವತ್ತು ವರ್ಷರ್ಷಗಳಾದರೂ ಕೂಡ ನಾವು ಇವೊತ್ತು ಹಳೇ ಪದ್ಧತಿ ಇದೆ. ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ಕೂಡ ನಾವು ಇವೊತ್ತು ಒಂದು ಪಾಸ್ ಬುಕ್ ಕೊಡುವುದಕ್ಕಾಗಲಿಲ್ಲ. ಒಬ್ಬ ವ್ಯಕ್ತಿ ಆಡಳಿತ ಸುಲಲಿತವಾಗಿ ತನ್ನ ಕೆಲಸವನ್ನು ಸುಲಭವಾಗಿ ಆಗತಕ್ಕಂಥ ಕೆಲಸ ನಾವು ಇನ್ನೂ ಮಾಡಲಿಲ್ಲ. ಕನಿಷ್ಟ ಮೂವತ್ತು ವರ್ಷಕ್ಕೊಂದು ಸಾರಿ ಜಮೀನನ್ನು ರೀ ಸರ್ವೆ ಮಾಡಬೇಕು. ಆ ಜಮೀನು ರೀ ಸರ್ವೆ ಮಾಡದ ಕಾರಣ ಇವೊತ್ತು ರಾಜ್ಯದಲ್ಲಿ ಜಮೀನು ವ್ಯಾಜ್ಯಗಳು ಕಾಣುತ್ತಿವೆ. ಕನಿಷ್ಟ ಒಂದು ಎಕರೆಗೆ ಹತ್ತು ರೂಪಾಯಿ ಖರ್ಚಾಗುತ್ತದೆ, ಅದನ್ನು ಬೇಕಾದರೆ ರೈತರ ಹತ್ತಿರ ವಸೂಲು ಮಾಡಬಹುದು. ಆದರೆ ರೀ ಸರ್ವೆ ಮಾಡುವುದಕ್ಕಾಗುತ್ತಿಲ್ಲ. ಅದನ್ನು ಬಿಟ್ಟು ಅದು ಈ ಕಾರಣ ಅದು ಜನರಲ್ ಫಿನಾಮಿನಾ ಎಂದು ಹೇಳಬಾರದು. ನಮ್ಮ ತಾಲ್ಲೂಕಿನಲ್ಲಿ ಇ.ಓ. ಮತ್ತು ಬಿ.ಡಿ.ಓ. ನಾನು ಸೂಪರ್ ನಾನು ಸೂಪರ್ ಎಂದು ಕಚ್ಚಾಡುತ್ತಿದ್ದಾರೆ. ಒಬ್ಬರೇ ಸಾಕಾಗಿತ್ತು ಆದರೆ ಇ.ಓ, ಬಿ.ಡಿ.ಓ ಎಂದು ಕ್ರಿಯೇಟ್ ಮಾಡಿದ್ದೀರಿ ಇಬ್ಬರಿಗೂ ಕೆಲಸ ಇಲ್ಲ. ಇನ್ನು ಶ್ರೀ ಗೋವಿಂದೇಗೌಡರ ಖಾತೆ-

ಯಲ್ಲಿ ಬಿ.ಇ.ಓ, ಎ.ಇ.ಓ ಅವರಿಗೂ ಕಚ್ಚಾಟ, ಇಬ್ಬರಿಗೂ ಕೆಲಸ ಇಲ್ಲ ಈ ರೀತಿಯ ಆಡಳಿತದಿಂದ ಏನಾಗುತ್ತದೆ ಎಂದರೆ ಜನರ ಮೇಲೆ ಭಾರ ಆಗುತ್ತದೆ. ಉತ್ತಮವಾದ ಸುಧಾರಣೆ ಆಗುವುದಿಲ್ಲ. ಇನ್ನು ಭ್ರಷ್ಟಾಚಾರದ ಬಗ್ಗೆ ಅವರು ಹೇಳಿದರು. ನಾವು ಇಲ್ಲಿಯ ಎಲ್ಲಾ ರಾಜಕೀಯ ಪಕ್ಷಗಳು, ರಾಜ-ಕಾರಣಿಗಳು ಹೇಗೆ ನಡೆದುಕೊಳ್ಳಬೇಕು ಎಂದು ತೀರ್ಮಾನ ಮಾಡೋಣ, ನಾವು ನ್ಯಾಯವಾಗಿ ಮತ ಕೇಳೋಣ. ನಾವು ಯಾವುದೇ ಕೆಟ್ಟ ರೀತಿಯಲ್ಲಿ ಹಣವನ್ನು ಖರ್ಚು ಮಾಡುವುದು ಬೇಡ, ಯಾರಿ-ಗಾದರೂ ಓಟು ಕೊಡಲಿ, ಎಲ್ಲರೂ ಒಂದು ತೀರ್ಮಾನಕ್ಕೆ ಬರೋಣ. ಇಲ್ಲಿಯ ಎಲ್ಲಾ ರಾಜಕೀಯ ಪಕ್ಷಗಳು ಒಂದು ವಿಚಾರ ಮಾಡಿ ನಾವು ಯಾವುದೇ ಕೆಟ್ಟ ವಿಚಾರದಲ್ಲಿ ಮತ ಕೇಳುವುದಿಲ್ಲ, ನಮ್ಮ ವಿಚಾರದ ಮೇಲೆ ನೇರವಾಗಿ ಮತ ಕೇಳುತ್ತೇವೆ ಯಾರಿಗಾದರೂ ಮತ ಕೊಡಲಿ ಎಂದು ಒಂದು ತೀರ್ಮಾನಕ್ಕೆ ಬರೋಣ. ನಾವು ನಮ್ಮ ಲೋಪದೋಷಗಳನ್ನು ಸರಿ ಮಾಡಿಕೊಳ್ಳುವುದರ ಜೊತೆಗೆ ಆಡಳಿತಾತ್ಮಕವಾಗಿ ಸರಳೀಕರಣಗೊಳಿಸಬೇಕು ಜನರು ಎಲ್ಲಾ ಕಚೇರಿಗಳಿಗೆ ಹೋಗತಕ್ಕಂಥ ಒಂದು ವ್ಯವಸ್ಥೆ ಬದಲಾವಣೆ ಆಗಬೇಕು. ಅದರ ಬಗ್ಗೆ ತಾವು ಉತ್ತರ ಕೊಡಬೇಕು. ಇನ್ನೊಂದು, ಮೂವತ್ತು ಕಾರ್ಖಾನೆ ಇದೆ. ಇವೊತ್ತು ಕೋ ಜನರೇಷನ್ ಬಗ್ಗೆ ತಾವು ಅತ್ಯಂತ ಗಂಭೀರವಾಗಿ ಚಿಂತನೆ ಮಾಡ-ಬೇಕು. ಜೊತೆಗೆ ಇವೊತ್ತು ಹತ್ತು ಸಾವಿರ ಗಾಣ ಇದೆ. ಆ ಹತ್ತು ಸಾವಿರ ಗಾಣದ ಖಾಂಡ್ಸಾರಿ ಮೂಲಕ ಸಿಪ್ಪೆ ಬಹಳ ವೇಸ್ಟ್ ಆಗುತ್ತಿದೆ. ಯಾವ ರೀತಿ ಸಿ.ಎಫ್.ಟಿ.ಆರ್.ಐ.ನವರು ಫ್ರೆಷರ್ ಕುಕ್ಕರನ್ನು ಕಂಡುಹಿಡಿದು ಫ್ಯೂಯಲನ್ನು ಉಳಿತಾಯ ಮಾಡಿದರೋ ಅದೇ ರೀತಿ ಜಾಗ್ರಿಗೆ ಟೆಕ್ನಾ-ಲಾಜಿ ಕಂಡುಹಿಡಿಯತಕ್ಕಂಥ ಒಂದು ವೈಜ್ಞಾನಿಕ ಆಲೋಚನೆ ಮಾಡಿ ಎಂದು ಹೇಳಬೇಕು. ಏಕೆಂದರೆ ಬೆಲ್ಲದ ಬಗ್ಗೆ ಟೆಕ್ನಾಲಾಜಿ ಕಂಡುಹಿಡಿಯುವುದಕ್ಕೆ ನಾವು ಯಾವುದೇ ರೀತಿಯ ಆಲೋಚನೆ ಮಾಡಿಲ್ಲ. ಮೊದಲು ಒಂದು ಸಾರು ಅನ್ನ ಮಾಡಿಕೊಳ್ಳಬೇಕಾದರೆ ಒಂದು ಗಂಟೆಯಾಗುತ್ತಿತ್ತು. ಆದರೆ ಈಗ ಪ್ರೆಷರ್ ಕುಕ್ಕರ್‌ನಲ್ಲಿ ಹತ್ತು ನಿಮಿಷಗಳಲ್ಲಾಗುತ್ತದೆ. ಇವೊತ್ತು ಅಡಿಗೆಯನ್ನು ಐದು ಹತ್ತು ನಿಮಿಷದಲ್ಲಿ ಮಾಡಿಕೊಳ್ಳುತ್ತೇವೆ. ಆದ್ದರಿಂದ ಸಿ.ಎಫ್.ಟಿ. ಆರ್.ಐ.ನವರನ್ನು ಕರೆದು ಜಾಗ್ರಿಗೆ ಏನಾದರೂ ಒಂದು ವೈಜ್ಞಾನಿಕ ಆಲೋಚನೆಯನ್ನು ಕಂಡುಹಿಡಿದರೆ ಸಿಕ್ಕಾಪಟ್ಟೆ ವೇಸ್ಟ್ ಆಗುತ್ತಿರುವ ಫ್ಯೂಯಲನ್ನು ಉಳಿ-ತಾಯ ಮಾಡಬಹುದು. ಜೊತೆಗೆ ಕೆ.ಪಿ.ಸಿ.ನವರು ಸುಮಾರು ಮುನ್ನೂರು ಪ್ರಾಜೆಕ್ಟ್‌ಗಳನ್ನು ಐಡೆಂ-ಟಿಫೈ ಮಾಡಿದ್ದಾರೆ. ನಾನೊಂದು ಸಾರಿ ಅವರ ಹತ್ತಿರ ವಿಚಾರಿಸಿದೆ, ಮುನ್ನೂರು ಪ್ರಾಜೆಕ್ಟ್‌ಗಳನ್ನು ಐಡೆಂಟಿಫೈ ಮಾಡಿ ಅದರ ಬಗ್ಗೆ ತಾವು ಯೋಚನೆ ಮಾಡಬೇಕು, ಯಾವ ರೀತಿ ಕೆ.ಪಿ.ಸಿ.ಯನ್ನು ಬೆಳೆಸಬೇಕು. ಇನ್ನೊಂದು ಕರ್ನಾಟಕದಲ್ಲಿ ಎಲ್ಲಾ ಜನ ಬರುತ್ತಾರೆ. ಯಾವ ಜನ ಬರುತ್ತಾರೆ, ದಯ-ವಿಟ್ಟು ತಾವು ಹೇಳಬೇಕು ಯಾವ ಜನ ಬರುತ್ತಾರೆಂದು. ವಿದೇಶೀಕರಣ, ಕೈಗಾರಿಕೀಕರಣ, ನಾವು ಉತ್ಪಾದನೆ ಮಾಡತಕ್ಕಂಥ, ಜಮೀನನ್ನು ಉಳುಮೆ ಮಾಡತಕ್ಕಂಥ, ಆಹಾರಕ್ಕೆ ಉಪಯೋಗಿಸ-ತಕ್ಕಂಥ ಎಲ್ಲಾ ಜಮೀನನ್ನು ನಾಶ ಮಾಡಿಕೊಳ್ಳುತ್ತಿದ್ದೇವೆ. ಆ ಜನ ಬರುತ್ತಿದ್ದಾರೆ, ಇವೊತ್ತು ಎರಡು ಸಾವಿರ ಇಸ್ವಿಯ ಹೊತ್ತಿಗೆ ನಮಗೆ ನೂರಾ ಐವತ್ತು ಲಕ್ಷ ಟನ್ ಆಹಾರ ಬೇಕು. ಇವೊತ್ತು 80 ಲಕ್ಷ ಟನ್ ಆಹಾರ ಉತ್ಪಾದನೆ ಮಾಡುತ್ತಿದ್ದೇವೆ. ಮೊದಲು ನಾವು ಊಟಕ್ಕೆ ಏನು ಯೋಚನೆ ಮಾಡ–

ಬೇಕು, ಭೂಮಿಯನ್ನು ಉಳಿಸಿಕೊಳ್ಳಬೇಕು, ಅದನ್ನು ಯೋಚನೆ ಮಾಡಬೇಕು. ನಮ್ಮ ಆಡಳಿತ ವ್ಯವಸ್ಥೆಯಲ್ಲಿ ವಿದೇಶೀಕರಣ, ಕೈಗಾರೀಕರಣ ಮಾಡತಕ್ಕಂಥ ವಿಚಾರದ ಬಗ್ಗೆ ಸರ್ಕಾರ ಗಂಭೀರವಾಗಿ ನಿಯಂತ್ರಣ ಮಾಡದೇ ಇದ್ದರೆ ಬಹಳ ಕಷ್ಟವಾಗತಕ್ಕಂಥ ಪರಿಸ್ಥಿತಿ ಬರುತ್ತದೆ ಎಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದ ಬಗ್ಗೆ ಗಂಭೀರವಾಗಿ ಆಲೋ-ಚನೆ ಮಾಡಿ ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು:- ಶ್ರೀ ಡಿ.ಆರ್. ಪಾಟೀಲರು ಸ್ಪಷ್ಟೀಕರಣ ಕೇಳಿದರಲ್ಲಾ ಆ ಮಾದರಿಯನ್ನು ಮನಸ್ಸಿ-ನಲ್ಲಿಟ್ಟುಕೊಂಡು ಎಲ್ಲರೂ ಮಾತನಾಡಬೇಕು.

+ ಶ್ರೀ ಬಿ. ಮುನಿಯಪ್ಪ (ಗಾಂಧಿನಗರ):- ಸನ್ಮಾನ್ಯ ಅಧ್ಯಕ್ಷರೇ ಹಲವಾರು ಬೇಡಿಕೆಗಳ ಮೇಲೆ ಚರ್ಚೆ ಮಾಡಿ ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಕೊಡುವರಿದ್ದರೂ ಕೂಡ ಸನ್ಮಾನ್ಯ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ ಜೆ.ಹೆಚ್. ಪಟೇಲರು ದೀರ್ಘವಾಗಿ ಒಂದು ಗಂಟೆಗಳ ಕಾಲ ಭಾಷಣವನ್ನು ಮಾಡಿ ಅವರ ರಾಜಕೀಯ ಹೋರಾಟದಲ್ಲಿ ದಿವಂಗತ ರಾಮ ಮನೋಹರ ಲೋಹಿಯಾರವರ ವಿಚಾರಧಾರೆಗಳಲ್ಲಿ ನಂಬಿಕೆ ಇಟ್ಟಂಥವರು, ದಿವಂಗತ ಶಾಂತವೀರ ಗೋಪಾಲಗೌಡರ ನಾಯಕತ್ವದಲ್ಲಿ ಅವರ ಸಂಗಾತಿಯಾಗಿ, ಅದು ಕಾಗೋಡು ಹೋರಾಟ ಇರ-ಬಹುದು, ಉಳುವವನೇ ಹೊಲದೊಡೆಯ ಎನ್ನುವಂಥ ಹೋರಾಟವಾಗಿರಬಹುದು. ಅಂತಹ ಹೋರಾಟದಿಂದ ಬಂದಂಥ ಸನ್ಮಾನ್ಯ ಮುಖ್ಯಮಂತ್ರಿಗಳು ಅವರು ತಮ್ಮ ಒಂದು ಗಂಟೆಗಳ ಭಾಷಣ-ದಲ್ಲಿ ಸಾಕಷ್ಟು ವೇದಾಂತವನ್ನು ಮತ್ತು ಸಮಾಜದಲ್ಲಿರತಕ್ಕಂಥ ಪರಿಸ್ಥಿತಿಗಳನ್ನು ವಿವರವಾದ ಮನಸ್ಸನ್ನು ಬಿಚ್ಚಿ ಸಭೆಯ ಮುಂದಿಟ್ಟಿದ್ದಾರೆ. ಆದರೆ ನಮ್ಮ ಸಮಸ್ಯೆ ಇವೊತ್ತು ಬಹಳ ಇದೆ. ನಾನು ಒಬ್ಬ ಶಾಸಕ-ನಾಗಿ ಇವೊತ್ತಿಗೆ ಇಪ್ಪತ್ತು ತಿಂಗಳಾಯಿತು. ನನ್ನ ಕ್ಷೇತ್ರದಲ್ಲಿರತಕ್ಕಂಥ ಸಮಸ್ಯೆಗಳನ್ನು ಇನ್ನೂ ಐದು ವರ್ಷ ಶಾಸಕನಾಗಿ ಇದ್ದಂಥ ಅವಧಿಯೊಳಗೆ ಇಂಥಿಂಥ ಕೆಲಸವನ್ನು ಮಾಡಬೇಕು ಎನ್ನುವಂಥ ಗುರಿ-ಯನ್ನು ನಾನು ಹೊಂದಿದ್ದೇನೆ. ಆ ರೀತಿ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯದಲ್ಲಿ ಲಕ್ಷಾಂತರ ಜನ ವಾಸ ಮಾಡಲು ಮನೆ ಇಲ್ಲದೆ, ಪ್ರತಿ ವರ್ಷ ವಿಶ್ವವಿದ್ಯಾನಿಲಯಗಳಲ್ಲಿ ಪದವೀಧರರಾಗಿ ಹೊರಗೆ ಬರುವಂಥ ಕೈಗೆ ಕೆಲಸವನ್ನು ಕೊಡಲು ಸಾಧ್ಯವಾಗದಂಥ ಪರಿಸ್ಥಿತಿ ಇದೆ. ಪ್ರತಿಯೊಬ್ಬರಿಗೆ ವಾಸ ಮಾಡಲು ಮನೆ ಬೇಕು, ಆ ಮನೆಗಳನ್ನು ಕೊಡುತ್ತೇವೆ ಎನ್ನುವಂಥ ಭರವಸೆಯನ್ನು, ಇನ್ನೂ ಈ ರೀತಿಯಾದ ಅನೇಕ ಸಮಸ್ಯೆಗಳ ಬಗ್ಗೆ ಅವರು ಸರ್ಕಾರದ ಗಮನವನ್ನು ಸೆಳೆದಿದ್ದರೆ ನಮಗೆ ಒಂದು ನಂಬಿಕೆ ಬರುತ್ತಿತ್ತು. ಅವರ ಮನದಾಳದಲ್ಲಿ ಹಲವಾರು ಭಾವನೆಗಳು ಇರಬಹುದು ಅದು ನಮಗೆ ಅರ್ಥವಾಗಿಲ್ಲ. ನಾನು ಹಲವಾರು ಬೇಡಿಕೆಗಳ ಬಗ್ಗೆ ಮಾತನಾಡುವಾಗ ಮುಖ್ಯವಾಗಿ ವಿದ್ಯಾ ಇಲಾಖೆಯ ಬಗ್ಗೆ ಮಾತನಾಡುವಾಗ ನಾನು ಹೇಳಿದೆ, ಸ್ವಾತಂತ್ರ್ಯ ಬಂದು 49 ವರ್ಷಗಳಾದ ಮೇಲೂ ಕೂಡ ಈ ಭಾರತ ದೇಶವನ್ನು ಜಾತ್ಯಾತೀತ ರಾಷ್ಟ್ರವೆಂದು ನಾವೇ ಕರೆದುಕೊಳ್ಳುತ್ತಿದ್ದೇವೆ. ಆದರೆ ಮಕ್ಕಳನ್ನು ಶಾಲೆಗೆ ಸೇರಿಸುವಾಗ ನೀನು ಯಾವ ಜಾತಿ? ಯಾವ ಮತ? ಎನ್ನುವಂಥ ಕಾಲಂನ್ನು ಅರ್ಜಿಯಲ್ಲಿ ಈ 49 ವರ್ಷಗಳ ಅವಧಿಯಲ್ಲಿ ಇನ್ನೂ ಇಟ್ಟುಕೊಂಡೇ ಬಂದಿದ್ದೇವೆ. ಆ

ಕಾಲಂನ್ನು ಜಾರಿಯಲ್ಲಿಟ್ಟುಕೊಂಡು ಜಾತಿಯನ್ನು ಕೇಳುವ ಮೂಲಕ ಆ ಎಳೆಯ ಮಕ್ಕಳ ಮನಸ್ಸಿನ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಎಲ್ಲರಿಗೂ ಅರ್ಥವಾಗಿದ್ದರೂ ಕೂಡ ಆ ಕಾಲಂನ್ನು ಹಲವಾರು ರಾಜಕೀಯ ಪಕ್ಷಗಳು ಹಲವಾರು ಸಿದ್ಧಾಂತಗಳನ್ನು ಅನುಕರಣೆ ಮಾಡುವಂಥ ಸರ್ಕಾರಗಳು ಬಂದಿದ್ದರೂ ಕೂಡ ಆ ಜಾತಿಯ ಕಾಲಂನ್ನು ತೆಗೆದು ಹಾಕುವಂಥ ಒಂದು ದೃಢವಾದ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಆ ಒಂದು ವಿಚಾರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ದೇಶಕ್ಕೇ ಮಾದರಿಯಾಗಿ ಕರ್ನಾಟಕ ರಾಜ್ಯ ಏನು ಕಳೆದ ಕಾಲದಲ್ಲಿ ಶೇಕಡ 33ರಷ್ಟು ಹೆಣ್ಣು ಮಕ್ಕಳಿಗೆ ಮಿಸಲಾತಿ ಲೋಕಸಭೆ ಮತ್ತು ಶಾಸನಸಭೆಯಲ್ಲಿ ಕೊಡುತ್ತೇವೆಂದು ಭರವಸೆಯನ್ನು ಕೊಟ್ಟು ಅದ-ಕ್ಕಾಗಿ ಹೋರಾಟವನ್ನು ಮಾಡಿದ್ದಾರೆ. ಇವೊತ್ತು ನಮ್ಮ ಪ್ರಧಾನಮಂತ್ರಿಗಳು ಸಂವಿಧಾನವನ್ನು ತಿದ್ದು-ಪಡಿ ಮಾಡುವ ಮುಖಾಂತರ ಒಂದು ದಿಟ್ಟ ಹೆಜ್ಜೆಯನ್ನಿಟ್ಟಿದ್ದಾರೋ ಆ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸುವಾಗ ಯಾವ ಮಕ್ಕಳ ಜಾತಿಯನ್ನೂ ನಾವು ಕೇಳುವುದಿಲ್ಲ ಎನ್ನುವ ನಿಟ್ಟಿನಲ್ಲಿ ಅರ್ಜಿಯಲ್ಲಿ ಜಾತಿಯ ಕಾಲಂನ್ನು ತೆಗೆಯುವಂಥ ದೃಢವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಈ ದೇಶದ 25 ರಾಜ್ಯಗಳಲ್ಲಿ ಯಾವ ರಾಜ್ಯದಲ್ಲೂ ಇರದಂಥ ಈ ಪದ್ಧತಿಯನ್ನು ನಮ್ಮ ಸನ್ಮಾನ್ಯ ಜೆ.ಹೆಚ್. ಪಟೇಲ್‌ರವರ ಸರ್ಕಾರ ಮಾಡಿತ್ತು ಎನ್ನುವುದಾದರೆ ಅದು ಹಿಮಾಲಯ-ದಿಂದ ಕನ್ಯಾಕುಮಾರಿಯವರೆಗೂ ಕೀರ್ತಿಯನ್ನು ತರುತ್ತದೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಇನ್ನು ಹಲವಾರು ಬೇಡಿಕೆಗಳ ಮೇಲೆ ಮಾತನಾಡಿರುವಾಗ ಸಂಬಂಧಪಟ್ಟ ಮಂತ್ರಿಗಳ ಬಳಿ ನಾನು ಉತ್ತರವನ್ನು ಅಪೇಕ್ಷಿಸುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ):- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಜಾತಿ ಮತ್ತು ವರ್ಗದ ಬಗ್ಗೆ ಹೇಳಿದ್ದಾರೆ. ನಾನು ತಿಳಿದು-ಕೊಂಡಿರುವಂತೆ ಪ್ರಪಂಚದಲ್ಲಿ ಕೇವಲ ಎರಡೇ ಜಾತಿಗಳು ಇರುವುದು. ಅದು ಹೆಣ್ಣು ಮತ್ತು ಗಂಡು ಜಾತಿ. ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಸಮಾಜ, ಜಾತಿ, ವರ್ಗದ ಬಗ್ಗೆ ಮಾತನಾಡಿದ್ದಾರೆ. ನನಗನ್ನಿಸಿದ್ದ ಹಾಗೆ ಮತ್ತು ಎಲ್ಲರೂ ತಮ್ಮ ಬಗ್ಗೆ ಹೇಳಿದ ಹಾಗೆ ಸಮಾಜವಾದದಲ್ಲಿ ಆಸಕ್ತಿ ಇರ-ತಕ್ಕಂಥವರು ಮತ್ತು ನಂಬಿಕೆಯನ್ನು ಹೊಂದಿರತಕ್ಕಂಥ ತಮ್ಮ ಬಾಯಿಯಲ್ಲಿ ಪ್ರಪಂಚದಲ್ಲಿ ಎರಡೇ ಜಾತಿಗಳಿದ್ದು ಅವು ಗಂಡು ಮತ್ತು ಹೆಣ್ಣು ಎನ್ನುವ ಮಾತುಗಳು ಬರುತ್ತದೆ ಎಂದು ನಾನು ತಿಳಿದು-ಕೊಂಡಿದ್ದೆ. ಇದಲ್ಲದೇ ಬೇರೆ ಜಾತಿಗಳ್ಯಾವುವೂ ಇಲ್ಲ ಎಂದು ನೀವು ಹೇಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ತಾವು ಆ ರೀತಿಯಲ್ಲಿ ಹೇಳಲೇ ಇಲ್ಲ. ಈಗಲಾದರೂ ಸರಿ ಸಮಾಜದಲ್ಲಿ ಒಂದು ರಥಕ್ಕೆ ಎರಡು ಚಕ್ರ ಇದ್ದಹಾಗೆ ಇದರಲ್ಲಿ ಒಂದು ಚಕ್ರ ಸೇರಿಸದೇ ಇದ್ದರೂ ಆ ಸಮಾಜ ಮತ್ತು ಆಡಳಿತ ಸರಿಯಾಗಿ ನಡೆಯುವುದಿಲ್ಲ ಎಂಬುದನ್ನು ತಾವು ತಿಳಿದುಕೊಂಡಿದ್ದೀರಿ. ಆದುದರಿಂದ ಕರ್ನಾಟಕದಲ್ಲಿ ನಿಮ್ಮ ಆಡಳಿತ ಸುಧಾರಣೆಯಾಗಬೇಕಾದರೆ ನೀವು ಮುಖ್ಯಮಂತ್ರಿಗಳಾಗಿರುವಾಗಲೀ ನನ್ನ ಅಪೇಕ್ಷೆ ಎಂದರೆ ಉಪಮುಖ್ಯಮಂತ್ರಿಗಳಾದರೂ ಕೂಡ ಒಬ್ಬ ಮಹಿಳೆ ಆಗಬೇಕು; ನಾನು ಸಿದ್ಧ-ರಾಮಯ್ಯನವರ ಬಗ್ಗೆ ವಿರೋಧವಾಗಿ ನಾನು ಹೇಳುತ್ತಿಲ್ಲ. ಸಾಮಾಜಿಕವಾಗಿ ಆಡಳಿತದಲ್ಲಿ ಸುಧಾರಣೆ-

ಯಾಗಬೇಕಾದರೆ ಆರ್ಥಿಕವಾಗಿ ಆಡಳಿತ ಸುಧಾರಣೆಯಾಗಬೇಕಾದರೆ ಪ್ರತಿಯೊಂದು ವಿಭಾಗದಲ್ಲಿ-ಯೂ ಕೂಡ ಮಹಿಳೆಯರು ಇರಬೇಕು.

ಅಧ್ಯಕ್ಷರು:- ನಿಮಗೆ ಸಿದ್ಧರಾಮಯ್ಯನವರ ಬಗ್ಗೆ ವಿರೋಧ ಇಲ್ಲದಿದ್ದರೆ ಸಿದ್ಧರಾಮಯ್ಯನವರನ್ನು ಚೀಫ್ ಡೆಪ್ಯುಟಿ ಮಿನಿಸ್ಟರ್ ಮಾಡಿ ಇನ್ನೊಬ್ಬರನ್ನು ಆರ್ಡಿನರಿ ಡೆಪ್ಯುಟಿ ಚೀಫ್ ಮಿನಿಸ್ಟ್ರು ಆಗಿ ಮಾಡಿಸಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಇಬ್ಬರನ್ನೂ ಮಾಡಿ, ನಾನು ಕೇಳುವುದೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ದೇಶಗಳ ಬಗ್ಗೆ ಹೇಳುತ್ತಾ ಚೈನಾ, ರಷ್ಯಾ, ಅಮೇರಿಕಾ ಬಗ್ಗೆ ಎಲ್ಲವನ್ನೂ ಹೇಳಿದಿರಿ, ಆದರೆ ಅಮೇರಿಕಾದಲ್ಲಿ ನೀವು ಹೇಳಿದಂತೆ ಆಗಿದೆ ಎಂದು ನನಗನ್ನಿಸುವುದಿಲ್ಲ. ಇವೊತ್ತು ಕೆಂಪು ಇಂಡಿಯನ್ನರನ್ನು ಗ್ರೇಟ್ ಕ್ಯಾನಿಯಲ್‌ನಲ್ಲಿ ಹೇಗೆ ನೋಡಿಕೊಂಡಿದ್ದಾರೆ ಎಂಬುದನ್ನು ತಾವು ಹೋಗಿ ನೋಡಿಕೊಂಡು ಬಂದಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆ ಪರಿಸ್ಥಿತಿ ಇವೊತ್ತು ಇಂಡಿಯಾದಲ್ಲೂ ಇದೆ, ಅಮರಿಕಾದಲ್ಲೂ ಇದೆ ಮತ್ತು ಬೇರೆ ದೇಶಗಳಲ್ಲಿಯೂ ಇದೆ. ಆದರೆ ನಾನು ಹೇಳತಕ್ಕಂಥದ್ದು ಜರ್ಮನ್ ಡೆಮಾಕ್ರೆಟಿಕ್ ಬಗ್ಗೆ, ತಾವೂ ಕೂಡ ಓದಿದ್ದೀರಿ, ಜರ್ಮನ್ ಡೆಮಾ-ಕ್ರೆಟಿಕ್‌ನಲ್ಲಿ ಆಡಳಿತದಲ್ಲಿ ಪಂಚಾಯತಿಯಿಂದ ಫೈನಾನ್ಸ್ ಸೆಕ್ರೆಟರಿಯನ್ನು ಮಾಡುವಾಗ ಕೂಡ ಇವೊತ್ತು ಹೆಣ್ಣು ಮಕ್ಕಳನ್ನು ಕೇಳದೇ ಯಾವುದೇ ಪಾಲಿಸಿಯನ್ನೂ ಕೂಡ ತರುತ್ತಿಲ್ಲ. ಆ ರೀತಿ ಅಲ್ಲಿ ಇರುವಾಗ ಅಲ್ಲಿ ಯಾವ ರೀತಿಯಾಗಿ ಮುಂದೆ ಬಂದಿದ್ದಾರೆ ಎನ್ನುವುದನ್ನೂ ನಾವು ನೋಡಿದಾಗ ಎಲ್ಲ-ದರಲ್ಲೂ ಕೂಡ ಅವರ ಸಲಹೆ ಮತ್ತು ಸಹಕಾರವನ್ನು ಪಡೆದುಕೊಂಡು ಕೆಲಸ ಕಾರ್ಯಗಳನ್ನು ಮಾಡುತ್ತಿರುವುದರಿಂದ ಆ ದೇಶ ಮುಂದುವರಿದಿರುವುದಕ್ಕೆ ಸಾಧ್ಯವಾಗಿದೆ. ಆದ್ದರಿಂದ ತಾವೂ ಕೂಡ ತಮ್ಮ ಕಾಲದಲ್ಲಿ ಈ ರೀತಿಯಾದಂಥ ಸುಧಾರಣೆಯನ್ನು ತಂದು ಈ ದೇಶ ಮುಂದುವರಿಯುವುದಕ್ಕೆ ಪ್ರಯತ್ನವನ್ನು ಮಾಡಬೇಕೆಂದು ಈ ಒಂದು ಸಲಹೆಯನ್ನು ನಾನು ನಿಮಗೆ ಕೊಡುತ್ತಿದ್ದೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್):- ಮಾನ್ಯ ಅಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳು ಒಂದು ಗಂಟೆಯ ಕಾಲ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ನನಗೆ ಬಹಳ ಸಂತೋಷವಾಯಿತು. ಕೆಲವು ಮಾನ್ಯ ಸದಸ್ಯರುಗಳು ಫಿಲಾಸಫಿ ರೀತಿಯಲ್ಲಿ ಮುಖ್ಯಮಂತ್ರಿಗಳು ಮಾತನಾಡಿದರು ಎಂದು ಹೇಳಿದರು. There is a clear meaning of philosophy, 'philo' means love and 'sophy' means knowledge. ಇಲ್ಲಿ ಯಾರು ಲವ್ ಮಾಡಿದ್ದಾರೆ, ಯಾರು ನಾಲೆಡ್ಜ್ ಮಾಡಿದ್ದಾರೋ ನನಗೆ ಗೊತ್ತಿಲ್ಲ he said very clearly ಯಾವ ರೀತಿಯಲ್ಲಿ ಆಡಳಿತ ಇರ-ಬೇಕೆಂದರೆ ಯಾವುದೇ ಒಬ್ಬ ಅಧಿಕಾರಿಯನ್ನೂ ವರ್ಗ ಮಾಡಬಾರದು then he cannot detain him also. What kind of administration we have to do ಒಬ್ಬ ಅಧಿಕಾರಿ ತಪ್ಪನ್ನು ಮಾಡಿದರೆ ಅವನನ್ನು ವರ್ಗ ಮಾಡಬಾರದು ಎಂದರೆ, then what administration we have to do, either MLA has to do the administration or officer has to do the administration. ಉದಾಹರಣೆಗೆ ನಾನು ಒಂದು ಇನ್‌ಸಿಡೆಂಟ್

ಕೊಡುತ್ತೇನೆ ನಮ್ಮ ಊರಿನಲ್ಲಿ ಒಬ್ಬ ಕಮಿಷನರ್ without notice, he demolished a house. Poor people brought it to my notice. I took the commissioner immediately to the spot ಏಕೆ ನೋಟಿಸ್‌ನ್ನು ಇಷ್ಯೂ ಮಾಡಲಿಲ್ಲ ಎಂದು ಕೇಳಿದರೆ ಆತ ಕೊಡುವ ಉತ್ತರವೇನೆಂದರೆ ಇಲ್ಲಿ ಸ್ವಲ್ಪ ತಪ್ಪಾಗಿದೆ ಸಾರ್ ಎಂದು ಹೇಳುತ್ತಾನೆ. But other two constructed buildings are just already finished. ಇದಕ್ಕೆ ಏಕೆ ನೀವು ಡೆಮಾಲಿಷ್ ಮಾಡಲಿಲ್ಲ ಎಂದು ಕೇಳಿದರೆ ಅಲ್ಲೂ ಕೂಡ ಇಲ್ಲಿ ತಪ್ಪಾಗಿದೆ ಸಾರ್ ಎಂದು ಹೇಳುತ್ತಾನೆ. ಈ ರೀತಿ-ಯಲ್ಲಿ ಎಲ್ಲದಕ್ಕೂ ತಪ್ಪಾಗಿದೆ, ತಪ್ಪಾಗಿದೆ ಎಂದು ಹೇಳುವ ಒಬ್ಬ ಅಧಿಕಾರಿಯನ್ನು ವರ್ಗ ಮಾಡ-ಬಾರದೇ? ಆತನನ್ನು ಪನಿಷ್‌ಮೆಂಟ್‌ಗೆ ಗುರಿ ಮಾಡಬಾರದೇ? Whether we have to tran-sfer him or not? If I bring it to the minister ನೋಡೋಣ ಎಂದು ಹೇಳುತ್ತಾರೆ, again if I bring it to the notice of the Chief Minister ಆಗ ನೀವು ಕೂಡ ಆತನನ್ನು ಟ್ರಾನ್ಸ್‌ಫರ್ ಮಾಡುವುದಿಲ್ಲ ಎಂದು ಹೇಳಿದರೆ what administration you have to do? The Hon'ble Chief Minister may kindly explain us about the administration and what necessary action that he is going to take? Kindly give a proper explanation.

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):- ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿರುವ ಕೆ.ಎಂ.ಸಿ. ಮೆಡಿಕಲ್ ಕಾಲೇಜ್ ಮತ್ತು ಬಳ್ಳಾರಿ ಮೆಡಿಕಲ್ ಕಾಲೇಜ್‌ನಲ್ಲಿ ಅಟಾನಮಸ್ ಬಾಡಿ ಮಾಡುತ್ತೇವೆಂದು ಹೇಳಿ ಬಹಳ ದಿವಸಗಳೇ ಆಗಿದೆ. ಇವೊತ್ತಿನವರೆಗೆ ಅದನ್ನು ಇಂಪ್ಲಿಮೆಂಟ್ ಮಾಡಿಲ್ಲ. ಅದರ ಬಗ್ಗೆ ನಾನು ಸತತವಾಗಿ ಉತ್ತರವನ್ನು ನಿರೀಕ್ಷಣೆ ಮಾಡುತ್ತಲೇ ಬಂದಿದ್ದೇನೆ. ಇದರ ನಂತರ ಒಂದು ಸಲಹೆಯನ್ನೂ ನಾನು ಕೊಡಲಿಕ್ಕೆ ಇಚ್ಛಿಪಡುತ್ತಿದ್ದೇನೆ. ಸರ್ಕಾರದಲ್ಲಿ ಆಶ್ರಯ ಮನೆ-ಗಳಿಗಾಗಿ ಬರು ಬರುತ್ತಾ ಗ್ರಾಮೀಣ ಪ್ರದೇಶಗಳಲ್ಲೂ ಕೂಡ ಜಾಗ ಸಿಗುವುದು ಬಹಳ ಕಷ್ಟವಾಗಿದೆ. ಇಂಥ ಸಂದರ್ಭದಲ್ಲಿ ಒಂದು ಎಕರೆಗೆ 20 ಮನೆಗಳನ್ನು ಈಗ ಕಟ್ಟುತ್ತಿದ್ದೇವೆ. ಈ ನಿಟ್ಟಿನಲ್ಲಿ ಈಗ ನೀವು ಒಂದೇ ಮಹಡಿಯನ್ನು ಏನು ಕಟ್ಟುತ್ತಿದ್ದೀರಿ ಅಲ್ಲೇ ಎರಡನೇ ಹಾಗೂ ಮೂರನೆಯ ಫ್ಲೋರ್-ನಲ್ಲೂ ಮನೆಗಳನ್ನು ಕಟ್ಟುವ ಮುಖಾಂತರ ಹೆಚ್ಚಿನ ಜಾಗವನ್ನು ಬಳಸಿಕೊಳ್ಳದೆ ಮುಂದಿನ ಭವಿಷ್ಯದ ಪೀಳಿಗೆಯವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಅನುಕೂಲವಾಗಬಹುದು ಎನ್ನುವ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ಇನ್ನು ಕ್ರೀಡೆಗಳ ಸಲುವಾಗಿ ಇವೊತ್ತಿನ ಪ್ರಧಾನಮಂತ್ರಿಗಳಾಗಿರತಕ್ಕಂಥ ಶ್ರೀ ಹೆಚ್.ಡಿ. ದೇವೇಗೌಡರು ಅಂದು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಬೆಂಗಳೂರಿನಲ್ಲಿ ವಿಶ್ವ ಕಪ್ ಕ್ರಿಕೆಟ್ ನಡೆದಾಗ ಇನಾಗ್ಯುರೇಟ್ ಮಾಡುವ ಸಂದರ್ಭದಲ್ಲಿ 8 ಕೋಟಿ ಖರ್ಚು ಮಾಡ-ತಕ್ಕಂಥದ್ದರಲ್ಲಿ ನಾವು 2 ಕೋಟಿ ಹಣವನ್ನು ಯಾವುದೇ ಬಡ್ಡಿ ಇಲ್ಲದೇ ಸಾಲದ ರೂಪದಲ್ಲಿ ಕೊಡು-ತ್ತೇವೆಂದು ಮತ್ತು ಜಾಗವನ್ನು ಕೊಡುತ್ತೇವೆಂದು ಹೇಳಿದರು. ಅದರ ಬಗ್ಗೆ ಕೂಡ ನಾನು ಮಾನ್ಯ ಮುಖ್ಯಮಂತ್ರಿಗಳವರಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ (ಬಿಜಾಪುರ):- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಆಡಳಿತದ ವಿಷಯದ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ಆದರೆ ಈಗಿನ ಶಾಸ-ಕರ ಪರಿಸ್ಥಿತಿ ಹೇಗಿದೆ ಎಂದರೆ ನೈತಿಕವಾಗಿ ನಾವು ಯಾವುದೇ ಒಬ್ಬ ಅಧಿಕಾರಿಯ ಬಗ್ಗೆ ಆರೋಪ ಮಾಡಿದಾಗ ಅಥವಾ ಯಾವುದೇ ಒಬ್ಬ ಅಧಿಕಾರಿಯ ಬಗ್ಗೆ ನಿರ್ದಿಷ್ಟವಾಗಿ ಕೇಳಿದಾಗ ಬೇರೆ ಕ್ಷೇತ್ರದ ಜನ ಪ್ರತಿನಿಧಿಗಳು ಇವರಿಗೆ ಬೆಂಬಲ ಕೊಡುತ್ತಿರುವಂಥ ಪರಿಸ್ಥಿತಿಯನ್ನು ನಾವು ಇಂದು ಕಾಣುತ್ತಿ-ದ್ದೇವೆ. ಆದುದರಿಂದ ದಯವಿಟ್ಟು ಸರ್ಕಾರದವರು ಸಂಬಂಧಪಟ್ಟ ಮತ ಕ್ಷೇತ್ರದಲ್ಲಿರತಕ್ಕಂಥ ಶಾಸ-ಕರು ತಮ್ಮ ಮತ ಕ್ಷೇತ್ರದಲ್ಲಿ ಬರತಕ್ಕಂಥ ಅಧಿಕಾರಿಯ ಬಗ್ಗೆ ನಿರ್ದಿಷ್ಟವಾಗಿ ದೂರನ್ನು ಕೊಟ್ಟಾಗ ಮತ್ತು ಆ ಅಧಿಕಾರಿಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದಾಗ ತಾವು ಯಾವ ರೀತಿಯ ಕ್ರಮವನ್ನು ಕೈಗೊಳ್ಳುತ್ತೀರಿ ಎನ್ನುವ ಬಗ್ಗೆ ಉತ್ತರ ಹೇಳಬೇಕು. ಇದಲ್ಲದೇ ಆಶ್ರಯ ಸಮಿತಿಯಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮುಂದುವರಿಸಿ ಅವರಿಗೆ ಜವಾಬ್ದಾರಿಯನ್ನು ಕೊಟ್ಟರೆ ಒಳ್ಳೆಯದು. ಇಂದಿನ ದಿನಗಳಲ್ಲಿ ನಮ್ಮ ಮತಕ್ಷೇತ್ರದಲ್ಲಿ ಮನೆಯನ್ನು ಕೊಡುವಂಥ ಒಂದು ಪರಿಸ್ಥಿತಿ ಇರುವುದಿಲ್ಲ. ದಯವಿಟ್ಟು ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ಎಂಬುದರ ಬಗ್ಗೆ ತಿಳಿಸಬೇಕೆಂದು ಕೇಳಿ-ಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು):- ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಮಾತನಾಡುತ್ತಾ ಎಲ್ಲಾ ಭ್ರಷ್ಟಾಚಾರದ ಮೂಲಗಳು ಈ ಚುನಾವಣಾ ಭ್ರಷ್ಟಾಚಾರದ ಸಮಸ್ಯೆ-ಯಿಂದಲೇ ಉದ್ಭವವಾಗುತ್ತದೆ ಎನ್ನುವ ಮಾತನ್ನು ಹೇಳಿದರು. ಅವರು ಮುಂದುವರಿದು ಇವೊತ್ತಿನ ಪರಿಸ್ಥಿತಿಯಲ್ಲಿ ಯಾವುದೇ ಭ್ರಷ್ಟಾಚಾರವಿಲ್ಲದೇ ಮತ್ತು ಯಾವುದೇ ಅಂಥ ಖರ್ಚು ಇಲ್ಲದೇ ಸದ-ಸ್ಯರು ಆಯ್ಕೆಯಾಗಿರುವವರು ಯಾರಾದರೂ ಇದ್ದರೆ ಎದೆಮುಟ್ಟಿಕೊಂಡು ಹೇಳಿ ಎಂದಿದ್ದಾರೆ. ನಾವೆಲ್ಲರು ಇದ್ದೇವೆ, ಧೈರ್ಯದಿಂದ ಮತ್ತು ಆತ್ಮವಿಶ್ವಾಸದಿಂದ ಹೇಳುತ್ತೇವೆ, ಯಾವುದೇ ಭ್ರಷ್ಟಾ-ಚಾರವಿಲ್ಲದೇ ಅಥವಾ ಯಾವುದೇ ರೀತಿಯ ಅಂಥ ವಿಧಾನಗಳನ್ನು ಅನುಸರಿಸದೇ ನೇರವಾಗಿ ಪ್ರಾಮಾಣಿಕವಾದ ಪ್ರಯತ್ನದಿಂದ ನಾವು ಗೆದ್ದುಬಂದಿದ್ದೇವೆ ಎನ್ನುವುದನ್ನು ಆತ್ಮವಿಶ್ವಾಸದಿಂದ ತಮ್ಮ ಗಮನಕ್ಕೆ ತರಲಿಕ್ಕಾಗಿ ಹೇಳುತ್ತಿದ್ದೇನೆ. ನಾನು ನಿಮ್ಮನ್ನು ಒಂದು ವಿಚಾರದಲ್ಲಿ ಸ್ಪಷ್ಟೀಕರಣವನ್ನು ಕೇಳ-ಲಿಕ್ಕೆ ಬಯಸುತ್ತೇನೆ. ಈ ಚುನಾವಣಾ ಭ್ರಷ್ಟಾಚಾರವನ್ನು ಮತ್ತು ಆಡಳಿತಾತ್ಮಕ ಭ್ರಷ್ಟಾಚಾರವನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ನಿಮ್ಮ ಪರಿಹಾರ ಸೂತ್ರಗಳೇನು ಎಂಬುದನ್ನು ತಾವು ತಿಳಿಸಬೇಕು. ಈ ವಿಚಾರದಲ್ಲಿ ನಮ್ಮ ಪೂರ್ತಿ ಬೆಂಬಲವೂ ಕೂಡಾ ಇದೆ. ತಾವು ಕೊಜೆಂಟ್ರಿಕ್ಸ್ ಬಗ್ಗೆ ಹೇಳಿದ್ದೀರಿ ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಇವೊತ್ತು ಅಮೆರಿಕಾದಲ್ಲಿರುವಂಥ ರಿಚ್ಮಂಡ್ ವರ್ಜೀನಿಯಾ ಅಥವಾ ರಾಕಿಮೌಂಟನ್, ನಾರ್ತ್ ಕ್ಯಾಲಿಫೋರ್ನಿಯಾ ಅಥವಾ ಇನ್ನಿತರ ಹುಟ್ಟು ಅಮೇರಿಕಾ ದೇಶದಲ್ಲಿ-ರುವಂಥ ಎಲ್ಲಾ ಕಡೆಯ ಕೊಜೆಂಟ್ರಿಕ್ಸ್‌ನಲ್ಲಿ ಸಣ್ಣ ಸಣ್ಣ ಘಟಕಗಳಲ್ಲೂ ಕೂಡ ಡೀ–ಸಲ್ಫರೈಸೇಷನ್ ಯುನಿಟ್‌ನ್ನು ಹಾಕಿದ್ದಾರೆ.

8.20 ಪಿ.ಎಂ.

ಸ್ಕ್ರಬರ್ ಸಿಸ್ಟಂ ಇದೆ, ಆದರೆ ಒಂದು ಸಾವಿರ ಮೆಗಾವ್ಯಾಟ್ ಹಾಕುವಂತಹ ಮಂಗಳೂರು ವಿದ್ಯುತ್ ಯೋಜನೆಯಲ್ಲಿ ಈ ಸ್ಕ್ರಬರ್ ಸಿಸ್ಟಂ ಬಗ್ಗೆ ಒಂದು ಚಕಾರ ಎತ್ತಿಕೊಂಡಿಲ್ಲ. ಅಲ್ಲಿ 90 ಪರ್ಸೆಂಟ್ ಡಿ-ಸಲ್ಫರೈಸೇಷನ್ ಕಡ್ಡಾಯವಾಗಿ ಇದ್ದರೆ ಇಲ್ಲಿ ಒಂದೇ ಒಂದು ಪರ್ಸೆಂಟಿನ ಬಗ್ಗೆ ಏನೂ ಇಲ್ಲ, ಇದರ ಬಗ್ಗೆ ಸ್ಪಷ್ಟೀಕರಣವನ್ನು ನಾನು ನಿರೀಕ್ಷೆ ಮಾಡುತ್ತಿದ್ದೇನೆ. ಇದರ ಜೊತೆಯಲ್ಲಿ ಕೊನೆಯದಾಗಿ 23 ಪರ್ಸೆಂಟ್ ಟ್ರಾನ್ಸ್‌ಮಿಷನ್ ಲಾಸ್ ನಿರೀಕ್ಷೆ ಮಾಡುವ ಹಿನ್ನೆಲೆಯಲ್ಲಿ ಮಂಗಳೂರಿನಲ್ಲಿರುವ ವಿದ್ಯುತ್ ಘಟಕವನ್ನು ಬೆಂಗಳೂರಿನ ಸುತ್ತಮುತ್ತಲೂ ತಂದರೆ ರಾಜ್ಯಕ್ಕೆ ಹೆಚ್ಚಿನ ಲಾಭವಾದೀತು ಎಂಬುದನ್ನೂ ಕೂಡ ಈ ಸಂದರ್ಭದಲ್ಲಿ ಹೇಳುತ್ತೇನೆ, ಅದರ ಬಗ್ಗೆಯೂ ಕೂಡ ಸ್ಪಷ್ಟನೆಯನ್ನು ತಮ್ಮಲ್ಲಿ ಕೇಳಿ ದಕ್ಷಿಣಕನ್ನಡ ಜಿಲ್ಲೆಯ ದ್ರಾವಣ ಶಕ್ತಿ ಆಧಾರದ ಮೇಲೆ ಕೈಗಾರಿಕೆಗಳನ್ನು ಕೊಡು-ವಂತಹ ತಮ್ಮ ಯಾವ ಒಂದು ಆಶ್ವಾಸನೆ ಇದೆ ಅಥವಾ ಹಿಂದಿನ ಮುಖ್ಯಮಂತ್ರಿಗಳು ಕೊಟ್ಟ ಆಶ್ವಾಸನೆಗೆ ತಾವು ಬದ್ಧರಾಗಬೇಕೆಂಬ ಕಳಕಳಿಯ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಅಧ್ಯಕ್ಷರೇ, ನಾನು ಡಿ.ಆರ್. ಪಾಟೀಲರು ಏನು ವಿಚಾರವನ್ನು ಹೇಳಿದ್ದಾರೆ ಅದಕ್ಕೆ ಸೀಮಿತಗೊಳಿಸಿ ಮಾನ್ಯ ಮುಖ್ಯ-ಮಂತ್ರಿಗಳು ಹೇಳಿರುವಂಥ ವಿಚಾರದಲ್ಲಿ ತಮ್ಮ ಮುಖಾಂತರವಾಗಿ ಈ ಆಡಳಿತ ಸುಧಾರಣಾ ವಿಚಾರ-ವಾಗಿ ಹೇಳುವುದಾದರೆ, ನನ್ನ ಜಿಲ್ಲೆಯಲ್ಲಿ ಕೇವಲ ನಾಲ್ಕು ತಿಂಗಳ ಅವಧಿಯಲ್ಲಿ ಮೂರು ಜಿಲ್ಲಾಧಿ-ಕಾರಿಗಳನ್ನು ಬದಲಾವಣೆ ಮಾಡಿರುವಂತಹದ್ದು ಒಂದನೆಯದು, ಎರಡನೆಯದಾಗಿ ಇವೊತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದ ಮುಖ್ಯಮಂತ್ರಿಗಳಾದ ನಂತರ ಅಖಿಲ ಭಾರತ ಸೇವೆಯಲ್ಲಿರುವಂಥ ರಾಜ್ಯದ ಅಧಿಕಾರಿಗಳ ವರ್ಗಾವಣೆ ಪಟ್ಟಿಯನ್ನು ಎರಡು ಬಾರಿ ಬಿಡುಗಡೆ ಮಾಡಿರತಕ್ಕಂಥದ್ದು. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಸರ್ಕಾರ ಆಡಳಿತವನ್ನು ಸುಧಾರಣೆ ಮಾಡುವಂಥ ಸಂದರ್ಭದಲ್ಲಿ ಅವರಿಗೆ ಹೊಂದಿಕೊಂಡಿರುವಂಥ ಅಧಿಕಾರಿಗಳೇ ಬೇಕು ಎನ್ನುವ ಅಭಿಪ್ರಾಯದಲ್ಲಿ ಮುಖ್ಯಮಂತ್ರಿಗಳು ಮಾಡಿದ್ದಾರೆ ಎನ್ನುವ ಅಭಿಪ್ರಾಯ ನನ್ನದು. ಆ ದೃಷ್ಟಿಯಲ್ಲಿ ಶಾಸಕರು ಅಧಿಕಾರಿ-ಗಳಿಂದ ಕಾಗದಪತ್ರಗಳನ್ನು ತಂದು ವರ್ಗಾವಣೆ ಬಗ್ಗೆ ಭ್ರಷ್ಟಾಚಾರ ನಡೆಯುತ್ತದೆ ಎಂದು ಹೇಳಿದರೆ, ನಮ್ಮ ತಾಲ್ಲೂಕುಗಳಲ್ಲಿ ನಮ್ಮ ಹೊಂದಾಣಿಕೆ ಇರುವಂಥ ಅಧಿಕಾರಿಗಳು ಇಲ್ಲದೇ ಹೋದಲ್ಲಿ ನಾವು ಏನು ಮಾಡಬೇಕು ಎಂಬುದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಸಿ.ಹೆಚ್. ವಿಜಯಶಂಕರ್ (ಹುಣಸೂರು):- ಮಾನ್ಯ ಅಧ್ಯಕ್ಷರೇ, ಮೊದಲನೆ ಬೇಡಿಕೆ ತಮ್ಮಲ್ಲಿ, ನಾವು ಮುಂದಿನ ದಿನಗಳಲ್ಲಿ ಬೇಡಿಕೆಯ ಮೇಲೆ ಚರ್ಚೆ ಮಾಡಬೇಕಾಗಿದೆ, ಅದರಲ್ಲಿ ನಾವೆ-ಲ್ಲರೂ ಕೂಡ ಭಾಗವಹಿಸಲಿಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಇಷ್ಟೊತ್ತಿನವರೆಗೂ ಕೂಡ ತಾವು ಕುಳಿತು ಸದನವನ್ನು ನಡೆಸಿಕೊಡಬೇಕು ಎಂಬುದು ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ. ಏಕೆಂದರೆ 14ನೇ ತಾರೀಖಿನವರೆಗೆ ಮಾತ್ರ ಅವಕಾಶವಿರುವುದರಿಂದ ನಮ್ಮಲ್ಲಿ ಆತಂಕ ಮೂಡಿದೆ, ನಮ್ಮೆಲ್ಲರಿಗೂ

ಕೂಡ ಬೇಡಿಕೆ ಮೇಲೆ ಮುಕ್ತವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಸಿಗುತ್ತೋ ಅಥವ ಇಲ್ಲವೊ ಎಂದು; ಇದು ಒಂದನ್ನು ತಾವು ನೆರವೇರಿಸಿಕೊಡಬೇಕು. ಎರಡನೆಯದು ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮಾಡಿಕೊಳ್ಳುವ ಮನವಿ ಏನೆಂದರೆ, ನಾವು ಜನಪ್ರತಿನಿಧಿಗಳಾಗಿ, ಒಂದು ತಾಲ್ಲೂಕಿನ ಪ್ರತಿನಿಧಿಯಾಗಿ, ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳಲ್ಲಿ ಮುಕ್ತವಾಗಿ ನಮ್ಮನ್ನು ತೊಡಗಿಸಿ-ಕೊಳ್ಳುವುದಕ್ಕೆ ಅವಕಾಶವನ್ನು ಅವರು ಮಾಡಿಕೊಡಬೇಕು. ತಾಲ್ಲೂಕಿನಲ್ಲಿ ನಮಗೆ ಒಂದು ಕಛೇರಿ ಇಲ್ಲ. ಉಳಿದಂತೆ ಅಭಿವೃದ್ಧಿ ಕಾರ್ಯಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿ-ಕೊಡಬೇಕು, ಅದರ ಬಗ್ಗೆ ವಿಶೇಷವಾದ ಚಿಂತನೆಯನ್ನು ಮಾಡಿ ನಮ್ಮ ಮುಂದಿನ ದಿನಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಡಾ।। ಎಂ.ಪಿ. ಕರ್ಕಿ (ಹೊನ್ನಾವರ):- ಅಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳು ಅಪ್ಪಣೆ ಕೊಡಿಸಿದರು, ಟ್ರಾನ್ಸ್‌ಫರ್ ಮಾಡಲಿಕ್ಕೆ ಶಾಸಕರು ಮಿನಿಟ್ಸ್ ಕೊಡಬಾರದು ಎಂದು ಹೇಳತಕ್ಕದ್ದನ್ನು ಸ್ವಾಗತ ಮಾಡುತ್ತೇನೆ. ಆದರೆ ಟ್ರಾನ್ಸ್‌ಫರ್ ಎಲ್ಲಿ ಅಗತ್ಯ ಇದೆಯೋ ಅದನ್ನು ಮಾಡಲೇಬೇಕಾಗುತ್ತದೆ. ಅದನ್ನೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಮನಗಾಣಬೇಕಾಗುತ್ತದೆ, ನಾನು ತಮಗೆ ಒಂದು ವಿಚಾರವನ್ನು ಹೇಳುವುದಾದರೆ, ಸರ್ಕಾರದ ನಿಯಮದ ಪ್ರಕಾರ ಗಂಡ ಒಂದು ಕಡೆಗೆ ಹೆಂಡತಿ ಒಂದು ಕಡೆಗೆ ಕೆಲಸಕ್ಕೆ ಇದ್ದಾಗ ಅವರನ್ನು ಕೂಡಿಸತಕ್ಕಂಥದ್ದು ನ್ಯಾಯವಾಗಿರತಕ್ಕಂಥದ್ದು, ಅದಕ್ಕೆ ತಾವು ಅಪ್ಪಣೆ ಕೊಡಬೇಕಾಗಿದೆ ಎಂಬ ವಿಷಯವನ್ನೂ ಕೂಡ ಹೇಳುತ್ತೇನೆ. Not on the basis of the minutes of the Minister or the Legislator. ಇನ್ನೊಂದು ಶಾಸಕರಿಗೆ ಏನು ನೀತಿ ಸಂಹಿತೆಯನ್ನು ಹಾಕುತ್ತಾರೋ ಹಾಗೆ ಮಂತ್ರಿಗಳು ಪ್ರವಾಸ ಹೋಗುತ್ತಾರಲ್ಲಾ ಆ ಖರ್ಚನ್ನು ಭರಿಸತಕ್ಕಂಥಹವರು ಯಾರು? ಆ ಖರ್ಚನ್ನು ಅವರೇ ಭರಿಸತಕ್ಕಂಥ ವ್ಯವಸ್ಥೆ ಆಗಬೇಕಾಗುತ್ತದೆ. ಅಲ್ಲಿಂದ ಪಾಠ ಶುರುವಾಗಬೇಕಾಗುತ್ತದೆಯೇ ಹೊರತಾಗಿ ಬರೀ ಶಾಸಕರಿಗೆ ಹೇಳಿದರೆ ಆಗುವುದಿಲ್ಲ ಎಂದು ಹೇಳತಕ್ಕಂಥ ಮಾತನ್ನೂ ಕೂಡ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು:- ಈಗ ಸನ್ಮಾನ್ಯ ಸಭಾನಾಯಕರಲ್ಲಿ ಕೇವಲ 2-3 ಅಂಶಗಳನ್ನು ನಾನು ಹೇಳಿ-ಬಿಡುತ್ತೇನೆ. ತಾವು ರಿಪ್ಲೈ ಮಾಡುವಾಗ ಅದನ್ನೂ ಕವರ್ ಮಾಡಿಬಿಡಿ. ಒಂದು ನಮ್ಮ ಎಂ.ಎಲ್.ಎ.-ಗಳಿಗೆ ಪಿ.ಎ.ಗಳನ್ನು ಕೊಡತಕ್ಕಂಥ ವಿಚಾರದಲ್ಲಿ ತಾತ್ವಿಕವಾಗಿ ತಾವು ನಮ್ಮ ಹತ್ತಿರ ಒಪ್ಪಿಕೊಂಡಿದ್ದಿರಿ, ಇದರಿಂದ ಸರ್ಕಾರಕ್ಕೆ ಆರ್ಥಿಕವಾಗಿ ಏನು ಹೊರೆ ಬೀಳುವುದಿಲ್ಲ, ಯಾರಾದರು ಸರ್ಕಾರಿ ಸೇವೆ-ಯಲ್ಲಿರತಕ್ಕವರು ಎಫ್.ಡಿ.ಸಿ.ಯನ್ನೋ ಅಥವಾ ಎಸ್.ಡಿ.ಸಿ.ಯವರನ್ನೋ ಮಾಡಿಕೊಡತಕ್ಕಂಥದ್ದು, ಅದೊಂದು ತಾವು ದಯಮಾಡಿ ಅನೌನ್ಸ್ ಮಾಡಬೇಕು. ಎರಡನೆಯದು ನಮ್ಮ ಮಾಜಿ ಶಾಸಕರಿಗೆ ತಿಂಗಳಿಗೆ ಇಷ್ಟು ಟ್ರಿಪ್ ಮಾಡಬಹುದು ಎಂದೆನೋ ಪಾಸಸ್ ಕೊಟ್ಟಿದ್ದೇವೆ. ನಾವು ಕೊಡತಕ್ಕಂಥ ಬಸ್ ಪಾಸನ್ನು ಯೂಸ್ ಮಾಡತಕ್ಕಂಥ ಎಕ್ಸ್ ಎಂ.ಎಲ್.ಎ.ಗಳು, ಎಕ್ಸ್ ಎಂ.ಎಲ್.ಸಿ.ಗಳು ಎಲ್ಲಾ ಸೇರಿದರೆ 250 ಜನರಿಗಿಂತ ಹೆಚ್ಚೇನೂ ಬರುವುದಿಲ್ಲ, ಅದೇನು ದೊಡ್ಡ ಆರ್ಥಿಕ ಹೊರೆ ಆಗುವುದಿಲ್ಲ,

ಅವರು ಒಂದಲ್ಲ ಒಂದು ಕಾಲದಲ್ಲಿ ನಮ್ಮ ಸಾರ್ವಜನಿಕ ಜೀವನದಲ್ಲಿದ್ದು, ನಮ್ಮ ಜನರಿಗಾಗಿ ಕೆಲಸ ಮಾಡಿದಂತಹವರು. ತೀರಾ ದುಸ್ಥಿತಿಯಲ್ಲಿರುವುದರಿಂದ ಅವರು ಅದನ್ನು ಕೇಳುತ್ತಾರೆ, ಅವರು ನಮ್ಮನ್ನು ಯಾಚನೆ ಮಾಡತಕ್ಕಂಥ ಸ್ಥಿತಿಗೆ ತರಬಾರದು ಅವರು ನಮ್ಮ ಸಹೋದ್ಯೋಗಿಗಳಾಗಿದ್ದವರು, ಅವರ ವಿಚಾರದಲ್ಲಿ ತಾವು ಧಾರಾಳವಾಗಿ ಒಂದು ನಿರ್ಣಯವನ್ನು ತೆಗೆದುಕೊಂಡು ಹೇಳಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ. ಮತ್ತು ನಮ್ಮ ಲೆಜಿಸ್‌ಲೇಟರ್ಸ್ ಆಕ್ಟಿವಿಟೀಸ್‌ಗೆ ಆನ್ ದಿ ಲೈನ್ಸ್ ಆಫ್ ಕಾನ್‌ಸ್ಟಿಟ್ಯೂಷನ್ ಕ್ಲಬ್ ತಾವು ವ್ಯವಸ್ಥೆ ಮಾಡಿಕೊಡುತ್ತೇವೆ ಎಂಬ ಮಾತನ್ನು ಹೇಳಿದಿರಿ ನಾವು ಇದರ ಬಗ್ಗೆ ಈಗಾಗಲೇ ಡಿಟೇಲ್ ಚರ್ಚೆ ಮಾಡಿದ್ದೇವೆ. ಮತ್ತು ನಮ್ಮ ಎಕ್ಸ್ ಎಂ.ಎಲ್.ಎ.-ಗಳಿಗೆ ಮೆಡಿಕಲ್ ರಿಲೀಫ್‌ಗೆ ಹೆಚ್ಚೇನೂ ಕೊಡಬೇಡಿ ನೀವು ವರ್ಷಕ್ಕೆಲ್ಲಾ ಸೇರಿ ಎರಡೂವರೆ ಮೂರು ಸಾವಿರ ರೂಪಾಯಿಯಷ್ಟು ಅವರಿಗೆ ಪ್ರಾವಿಷನ್ ಮಾಡಿದರೆ ಒಳ್ಳೆಯದು ಕೆಲವರು ನನಗೆ ಪತ್ರ ಬರೆಯುತ್ತಾರೆ ವೆಲ್‌ಫೇರ್ ಫಂಡ್‌ನಿಂದ ಏನಾದರೂ ಕೊಡಿ ಎಂದು. ತಾವು ಯೋಚನೆ ಮಾಡಿ, ಅದನ್ನು ತಕ್ಷಣವೇ ಮಾಡಿ ಎಂದು ನಾನೇನೂ ಹೇಳುವುದಿಲ್ಲ ಮತ್ತೆ ಅನೇಕ ಸಂದರ್ಭದಲ್ಲಿ ಈ ಕೇಸ್‌ಗಳನ್ನು ಹಾಕಿರತಕ್ಕಂಥದ್ದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದನ್ನು ಪ್ರಸ್ತಾಪ ಮಾಡಿ-ದ್ದಾರೆ. ಕೆಲವು ಸಂದರ್ಭಗಳಲ್ಲಿ ಸ್ಥಳೀಯ ಪೋಲೀಸ್ ಅಧಿಕಾರಿಗಳು ಅನೇಕ ಕಾರಣಗಳಿಗಾಗಿ ಕೆಲವು ಸೆಕ್ಷನ್ಸ್‌ನ್ನ ಅವರು ಇನ್‌ಕಾರ್ಪೊರೇಟ್ ಮಾಡುವುದನ್ನು, ಕೇಸಸ್ ಹಾಕತಕ್ಕಂಥ ಸಂದರ್ಭದಲ್ಲಿ ಅವೆಲ್ಲಾ ಕೂಡ ಸೆಷನ್ಸ್ ಕೋರ್ಟ್‌ಗೆ ಹೋಗುತ್ತವೆ. ಮೊನ್ನೆ ತಾವು ಒಂದು ಆಜ್ಞೆಯನ್ನು ಹೊರಡಿಸಿ-ದ್ದೀರಿ ಇದರಲ್ಲಿ ಮುನ್ಸಿಫ್ ಕೋರ್ಟ್ ವ್ಯಾಪ್ತಿಗೆ ಬರತಕ್ಕಂಥ ಎಲ್ಲಾ ಕೇಸ್‌ಗಳನ್ನು ವಿತ್‌ಡ್ರಾ ಮಾಡಿ-ಕೊಳ್ಳುತ್ತೇವೆ. ಆದರೆ ಸೆಷನ್ಸ್ ಕೋರ್ಟ್ ವ್ಯಾಪ್ತಿಗೆ ಬರತಕ್ಕಂಥ ಕೇಸಸ್ಸನ್ನ ವಿತ್‌ಡ್ರಾ ಮಾಡಿಕೊಂಡಿಲ್ಲ. ಅನೇಕ ಜನ ಮುಗ್ಧರು ಪಾಪ ಎಲ್ಲಾ ರಾಜಕೀಯ ಪಕ್ಷಗಳಿಗೂ ಸೇರಿದ ಕಾರ್ಯಕರ್ತರು ಇದ್ದಾರೆ. ಅವರೆಲ್ಲರ ಕೇಸ್‌ಗಳನ್ನು ವಿತ್‌ಡ್ರಾ ಮಾಡಿಕೊಂಡರೆ ಬಹಳ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ರೈತರು ಹೋರಾಟ ಮಾಡಿದಂತಹವರು ಇದ್ದಾರೆ. ಕಾರ್ಮಿಕರು ಹೋರಾಟ ಮಾಡಿದಂತಹವರು ಇದ್ದಾರೆ, ಈ ಎಲ್ಲಾ ವಿಷಯಗಳನ್ನು ಕವರ್ ಮಾಡಿ ದಯಮಾಡಿ ಉತ್ತರವನ್ನು ಕೊಡಬೇಕೆಂದು ವಿನಂತಿ ಮಾಡುತ್ತೇನೆ.

+ **ಶ್ರೀ ಜೆ.ಹೆಚ್. ಪಟೇಲ್:-** ಮೊದಲನೆಯದಾಗಿ ಎಂ.ಎಲ್.ಎ.ಗಳಿಗೆ ಅವರ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಒಬ್ಬ ಗುಮಾಸ್ತನೋ, ಟೈಪಿಸ್ಟೋ ಈ ತರಹದ ಒಬ್ಬ ಅಸಿಸ್ಟೆಂಟ್‌ನ ಅವಶ್ಯಕತೆ ಇದೆ, ಏಕೆಂದರೆ ನಾನು ಬೇರೆ ಕಡೆ ನೋಡಿದಾಗಲೂ ಈ ಸೆಕ್ರೇಟೇರಿಯಲ್ ಅಸಿಸ್ಟೆನ್ಸ್ ಎಂದು ನಾವು ಸ್ಯಾಲರಿಯಲ್ಲಿ ಸೇರಿಸಿಬಿಟ್ಟಿದ್ದೇವೆ. ಆದರೆ ಅದು ಸ್ಯಾಲರಿಯಲ್ಲಿ ಕೊಟ್ಟಿದ್ದು ಯಾವ ಉದ್ದೇಶಕ್ಕೆ ಕೊಟ್ಟಿ-ರುತ್ತಾರೊ ಅದಕ್ಕೆ ಉಪಯೋಗ ಆಗುತ್ತಾ ಇಲ್ಲ. ಸೆಕ್ರೇಟೇರಿಯಲ್ ಅಸಿಸ್ಟೆನ್ಸ್‌ಗೆ ಎಂದು ತೆಗೆದು-ಕೊಂಡರೂ ಅದು ಆಗುವುದೂ ಇಲ್ಲ. ಆದ್ದರಿಂದ ಈಗ ಸರ್ಕಾರಿ ನೌಕರಿಯಲ್ಲಿ ಇರತಕ್ಕಂಥವರೇ ಪ್ರತಿಯೊಬ್ಬ ಎಂ.ಎಲ್.ಎ.ಗಳಿಗೂ ಅವರು ಯಾವುದೇ ಇಲಾಖೆಯಲ್ಲಿ ಇರಲಿ ಈ ವಿದ್ಯಾರ್ಹತೆ

ಇರತಕ್ಕಂಥ ಟೈಪಿಸ್ಟೋ, ಕ್ಲರ್ಕ್ ಆಗಿರಬಹುದು ಈ ಲೆವೆಲ್‌ನ ಆಫೀಸರನ್ನು ಅವರು ಸೆಲೆಕ್ಟ್ ಮಾಡಿ-ದರೆ ಅದನ್ನು ಸರ್ಕಾರಿ ಆಜ್ಞೆ ಇಷ್ಯೂ ಮಾಡಿಸುತ್ತೇವೆ, ಅವರ ಅವಧಿಗೆ ಅವರು ಪಿ.ಎ. ಆಗಿರುತ್ತಾರೆ. ಅದೇ ರೀತಿ ಎಂ.ಎಲ್.ಎ.ಗಳಿಗೆ ಕೆಲವು ಕ್ಷೇತ್ರದಲ್ಲಿ ತಾಲ್ಲೂಕು ಹೆಡ್‌ಕ್ವಾಟರ್ಸ್ ಇಲ್ಲದೇ ಇರುವ ಕಡೆ ತಾಲ್ಲೂಕು ಹೆಡ್‌ಕ್ವಾಟರ್ಸ್ ಇರುವ ಕಡೆ ತಾಲ್ಲೂಕು ಪಂಚಾಯಿತಿ ಕಛೇರಿ ಇದ್ದಾವೆ, ಬಿ.ಡಿ.ಎ. ಕಛೇರಿ ಇದ್ದಾವೆ. ಆದರೂ ಈಗ ನಾನು 15-20 ವರ್ಷದ ಎಂ.ಎಲ್.ಎ. ಈಗ ನಮಗೆ ನಮ್ಮ ಕ್ಷೇತ್ರ-ದಲ್ಲಿ ಎಂ.ಎಲ್.ಎ.ಗಳಾಗಿದ್ದವರು ನಮ್ಮದೇ ಆದಂಥ ಒಂದು ಕಛೇರಿ, ಮನುಷ್ಯ ಇದ್ದ ಎಂದರೆ ಅರ್ಧ ಸಮಸ್ಯೆಗಳು ಬಗೆಹರಿಯುತ್ತವೆ. ಇಲ್ಲ ತಹಸೀಲ್ದಾರ್ ಹತ್ತಿರ ಹೋಗಿ ಬಾ, ಸಬ್ ಇನ್‌ಸ್ಪೆಕ್ಟರ್ ಹತ್ತಿರ ಹೋಗಿ ಬಾ, ನೀನು ಅಲ್ಲಿ ಹೋಗಿ ಬಾ, ಇಲ್ಲಿ ಚೀಟಿ ತೆಗೆದುಕೊಂಡು ಬಾ ಅದನ್ನು ಬಿಟ್ಟು ಎಂ.ಎಲ್.ಎ. ತನ್ನ ಕ್ಷೇತ್ರದಲ್ಲಿದ್ದಾನೆ, ತನ್ನ ಆಫೀಸ್‌ನಲ್ಲಿದ್ದಾನೆ ಎಂದರೆ ಎಲ್ಲಾ ಗ್ರಿವೆನ್ಸಸ್ ಅಲ್ಲಿಗೇ ಬರುತ್ತದೆ. ಆಗ He can discharge his duties more efficiently. ಅದಕ್ಕೆ ನಾನು ಮೊನ್ನೆ ನಮ್ಮ ಲೇಜಿಸ್‌ಲೇಟರ್ ಪಾರ್ಟಿ ಆಫೀಸನಲ್ಲೂ ಹೇಳಿದ್ದೇನೆ, ತಾವು ಸದನದಲ್ಲೂ ಕೂಡ ಪ್ರಸ್ತಾಪ ಮಾಡಿದಿರಿ, ಒಬ್ಬ ಪಿ.ಎ. ಆಫೀಸ್ ಅಂದರೆ ತಹಸೀಲ್ದಾರ್ ಆಫೀಸ್ ಇರುವ ಎಂದು ಅಲ್ಲ. ಕೆಲವು ಸಾರಿ ಏನಾಗುತ್ತದೆ ಅಲ್ಲಿ ಹೋಗುವ ಜನ ಇಲ್ಲಿ ಬರುವುದು, ಎಲ್ಲಾದರೂ ಒಂದು ಕಡೆ ಎಂ.ಎಲ್.ಎ. ಆಫೀಸ್ ಶಾಶ್ವತವಾಗಿ ಅವನ ಕ್ಷೇತ್ರದಲ್ಲಿ ಇರಬೇಕು. ಅದು ಪಿ.ಡಬ್ಲ್ಯೂ.ಡಿ. ಬಿಲ್ಡಿಂಗ್ ಇರಬಹುದು, ಅಥವಾ ಯಾವುದೇ ಇರಬಹುದು for helping him to work efficiently. ಈ ಎರಡು ವ್ಯವಸ್ಥೆ ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅದೇ ರೀತಿ ಈಗ ವಿತ್-ಡ್ರಾವಲ್ ಆಫ್ ಕೇಸಸ್ ಇದರ ಬಗ್ಗೆ ಲೀಗಲ್ ಇಂಪ್ಲಿಕೇಷನ್ಸ್ ಎಗ್ಸಾಮಿನ್ ಮಾಡಿಸುತ್ತೇನೆ. ಇನ್ನು ಎಕ್ಸ್ ಎಂ.ಎಲ್.ಎ.ಗಳಿಗೆ ಬೇಕಾದರೆ ಪಾಸು ಕೊಡಬಹುದು. ನೂರು ಜನ ಇರಬಹುದೇನೋ ಪಾಪ.

ಅಧ್ಯಕ್ಷರು:- ವಿತ್‌ಡ್ರಾವಲ್ ಆಫ್ ಕೇಸಸ್ ವಿಚಾರಕ್ಕೆ ನಾನು ತಮಗೆ ಏನು ಹೇಳುತ್ತೇನೆ ಎಂದರೆ ಕನಿಷ್ಟ ತಮ್ಮ ಕಾನೂನು ಮಂತ್ರಿಗಳು If he can convey a message to the Director of Prosecution ಸಂಬಂಧಪಟ್ಟ ಕೋರ್ಟುಗಳಿಗೆ ತಿಳಿಸಿದರೆ ಒಳ್ಳೆಯದು ಏನಾಗು-ತ್ತದೆಯೆಂದರೆ ಅವರೊಂದು ಲಾಂಗ್ ಡೇಟ್ ಹಾಕುತ್ತಾರೆ. ಅಲ್ಲಿಯವರೆಗೆ ಅವರು ಸುತ್ತುವುದು ತಪ್ಪುತ್ತದೆ, ಈ ಮಧ್ಯೆ ನೀವು you can make all arrangements to withdraw the cases.

ಶ್ರೀ ಜೆ.ಹೆಚ್. ಪಟೇಲ್:- ಕೆಲವು ಇಂತಹ ಕಾಂಪ್ಲಿಕೇಷನ್ ಇದ್ದಾವೆ. ಈಗ ನಿರಪರಾಧಿಗಳು ನೂರಾರು ಜನ ವಿನಾಕಾರಣ ಕೋರ್ಟಿನಲ್ಲಿ ಅಲೆಯುವುದನ್ನು ನೋಡುತ್ತಿದ್ದೇವೆ. ಆಮೇಲೆ ಕೆಲವು ಫಾಲ್ಸ್ ಕೇಸಸ್ ಇದ್ದಾವೆ. ಅದು ಯಾವ್ಯಾವ ಕಾಲಕ್ಕೆ ಏನೇನು ಕಾರಣಕ್ಕೋ ಗಲಭೆಗಳು ಆಗಿದ್ದಾವೆ, ಅದಕ್ಕೆ ಅವನ್ನೆಲ್ಲಾ ಎಗ್ಸಾಮಿನ್ ಮಾಡಿ ವಿನಾಕಾರಣ ಏನೂ ಅಪರಾಧ ಮಾಡದೇ ಇರತಕ್ಕಂಥ-ಹವರು ಸುಮ್ಮನೆ ತಿರುಗಾಡುವುದು ದಂಡ ಆಗಬಾರದು. ಅದ್ದರಿಂದ ಮೊದಲನೆಯದಾಗಿ ವಿರೋಧ

ಪಕ್ಷದ ನಾಯಕರು ಹೇಳಿದ್ದನ್ನು ನಾವು ಕೇಳಿದ್ದೇವೆ. ಅವರು ಕೆಲವಾರು ಇಲಾಖೆಗಳಿಗೆ ಕೆಲವು ತಿದ್ದು-ಪಡಿಗಳು ಆಗಬೇಕು ಎಂದು ಹೇಳಿದ್ದಾರೆ. ಈಗ ನಮ್ಮ ಪ್ರೈಯಾರಿಟೀಸ್ ಏನು ಯಾವುದು ಛೇಂಜ್ ಮಾಡಿಲ್ಲ ಅಥವಾ ನಮ್ಮ ಪ್ರೋಗ್ರ್ಯಾಂ ಯಾವುದೂ ಛೇಂಜ್ ಮಾಡಿಲ್ಲ. Whether it is social welfare department, whether irrigation or housing department. ನಾನು ಎಲೆಕ್ಟ್ರಿಸಿಟಿ ಬಗ್ಗೆ ಏತಕ್ಕೆ ಹೇಳಿದೆ ಎಂದರೆ ನಮ್ಮ ಸಭಾಪತಿಯವರು ಇದ್ದಾರೆ, ಅದನ್ನು ನಾನು ಹ್ಯಾಂಡಲ್ ಮಾಡುತ್ತಿರುವುದರಿಂದ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಿಸಿದಂತೆ, ಈಗ ನೀವು ಮೀಸಲಾತಿಯದು ಹೇಳಿದ್ದೀರಿ, ನಾನು ಆಗಲೇ ಚರ್ಚೆ ಮಾಡಿದ್ದೇನೆ. ಕಾನೂನಿನ ತೊಡಕಿದ್ದು, ನಾವು ಕಾನೂನನ್ನು ಹೇಗೋ ಅಥವಾ ಬೇರೆ ಕಾನೂನನ್ನು ಸೃಷ್ಟಿ ಮಾಡದೆ ಆ ಪ್ರಶ್ನೆಯನ್ನು ಬಗೆಹರಿಸುವು-ದಕ್ಕೆ ಬರುವುದಿಲ್ಲ. ನೀವು ಗೊತ್ತಿರುವವರೇ ಅದಕ್ಕೆ ನಾನು ಕೇಳಿದೆ. ಇಲ್ಲ, ಅದಕ್ಕೆ ಕಾನೂನಿನಲ್ಲಿ ಮೊದಲು ತಿದ್ದುಪಡಿಯನ್ನು ಮಾಡಬೇಕು ಆಮೇಲೆ ಆಡಳಿತಾತ್ಮಕವಾದ ತಿದ್ದುಪಡಿಯನ್ನು ಮಾಡ-ಬೇಕೆಂದು ಹೇಳಿದ್ದಾರೆ, ಇವು ಈ ವಿಷಯಗಳು, ಆಮೇಲೆ ಡಿ.ಆರ್. ಪಾಟೀಲರು ಕೋಡ್ ಆಫ್ ಕಾಂಡಕ್ಟ್ ಏನು ಎಂದು ಹೇಳಿದರು. ಪಾಟೀಲರೆ, ಕೋಡ್ ಆಫ್ ಕಾಂಡಕ್ಟ್ ಇದೆ. ಈಗ ಎಂ.ಎಲ್.-ಎ.ಗಳಿಗೆ ಕೋಡ್ ಆಫ್ ಕಾಂಡಕ್ಟ್ ಇದೆ, ಎಂ.ಎಲ್.ಎ.ಗಳು ಹೋದಾಗ ಅಧಿಕಾರಿಗಳು ಹೇಗೆ ನಡೆದುಕೊಳ್ಳಬೇಕು ಎನ್ನುವುದಕ್ಕೂ ಕೋಡ್ ಆಫ್ ಕಾಂಡಕ್ಟ್ ಇದೆ. ಅದು, ಕೋಡ್ ಆಫ್ ಕಾಂಡಕ್ಟ್ ಎರಡು ಕಡೆಯದು ತಪ್ಪಿ ಹೋಗಿದೆ. ಅಧಿಕಾರಿಗಳದು ಕೋಡ್ ಆಫ್ ಕಾಂಡಕ್ಟ್ ಇಲ್ಲ, ನಮ್ಮ ಎಂ.ಎಲ್.ಎ.ಗಳಿಗೂ ಕೋಡ್ ಆಫ್ ಕಾಂಡಕ್ಟ್ ಇಲ್ಲ. ಅದಕ್ಕೆ ನಾನು ಏತಕ್ಕೆ ಇಷ್ಟೊಂದು ವಿಶ್ವಾಸದಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆಂದರೆ, ಅದನ್ನು ಮೊದಲು ಸರಿಪಡಿಸೋಣ My own experience as MLA, Minister, as Chief Minister, ನಾವು ಕೊನೆಯ ಪಕ್ಷ ಕೆಲವು ಡೂಸ್ ಅಂಡ್ ಡೋಂಟ್ಸ್ ಅಷ್ಟಾದರೂ ಮಾಡಿಕೊಳ್ಳೋಣ. ಬೇಕಾದರೆ I am prepared to sit with you or the Leader of Opposition. ಇದಕ್ಕೆ ಏನಾದರೂ ನಾವು ನಮ್ಮನ್ನೆ ಕೋಡಿಫೈ ಮಾಡಿಕೊಳ್ಳತಕ್ಕಂಥದ್ದು ನಮ್ಮನ್ನೇ ಶಿಸ್ತಿಗೆ ತೆಗೆದುಕೊಳ್ಳತಕ್ಕಂಥದ್ದು ಏನಾದರೂ ಮಾಡು-ವುದಕ್ಕೆ ಸಾಧ್ಯವಿದ್ದರೆ ಮಾಡೋಣ, ಸದನದಲ್ಲಿ ಚರ್ಚೆ ಮಾಡೋಣ, We are all interested in doing that. That will be the best thing for everything. ಅಧಿಕಾರಿಗಳು ಮಿಸ್‌ಬಿಹೇವ್ ಮಾಡುತ್ತಿದ್ದಾರೆ, ನಾನು ಅವರೆಲ್ಲಾ ಬಹಳ ಒಳ್ಳೆಯವರು ಎಂದಲ್ಲ ಹೇಳುತ್ತಿರುವುದು; ಬಹಳ ಒಳ್ಳೆಯವರು ಇದ್ದಾರೆ. ಒಳ್ಳೆಯವರು ಅಲ್ಲಿರುವುದಕ್ಕೆ ಸರಿಯಾಗುತ್ತಿಲ್ಲ. ಅವರನ್ನೂ ಏನಾ-ದರೂ ಮಾಡಿ ಕೆಡಿಸಬೇಕೆನ್ನುವ ಪ್ರಯತ್ನಗಳು ನಡೆಯುತ್ತಿದ್ದಾವೆ, ಹಾಗೆ ಆಗಬಾರದು. ಅದಕ್ಕೆ it should be multi dimensional effort. ಈ ಒಂದು ಕರಪ್ಷನ್ ಬಗ್ಗೆ ಹೇಳುತ್ತೇನೆ. decentralisation is the answer for corruption. ನೀವು ಬೇಕಾದರೆ ಯಾವುದೇ ಆಡಳಿತ ಸುಧಾರಣೆಗಳನ್ನು ನೋಡಿಕೊಳ್ಳಿ, ಕರಪ್ಷನ್ ಕಡಿಮೆಯಾಗಬೇಕೆಂದರೆ, ನೀವು ವಿಕೇಂದ್ರೀ-ಕರಣ ಮಾಡಬೇಕು. ಗ್ರಾಮಪಂಚಾಯಿತಿಯವನಿಗೆ, ಅವನು ಅಲ್ಲೇ ಚರಂಡಿ ಮಾಡಿಸಿಕೊಂಡು,

ಸ್ಕೂಲ್ ಕಟ್ಟಿಸಿಕೊಳ್ಳುವಂಥ ಅಧಿಕಾರವಿದ್ದರೆ ಯಾವ ಅಧಿಕಾರಿಗೆ, ಇಂಜಿನಿಯರ್‌ಗೆ ಲಂಚ ಕೊಡುವುದಿಲ್ಲ. ಗ್ರಾಮಪಂಚಾಯಿತಿಯವನಿಗೆ ಅವನ ಊರಿನ ಮಟ್ಟಿಗೆ ಅವನಿಗೆ ಅಧಿಕಾರವಿದ್ದು, ಹಣವಿದ್ದರೆ ಕರಪ್ಷನ್ ದಿಲ್ಲಿಯತನಕ ಹೋಗುವುದಿಲ್ಲ. ಹರ್ಷದ್ ಮೆಹತಾಗಳ ಹೆಸರುಗಳನ್ನು ಕೇಳುವುದಿಲ್ಲ. Decentralisation is the answer for corruption. ಅದಕ್ಕೆ ನಮ್ಮ ಡಿ.ಆರ್. ಪಾಟೀಲರೆ, ಈಗ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಇದ್ದಾರೆ, ಅಲ್ಲಿ ಯಾವ ಪಕ್ಷದವನಿದ್ದಾನೆಂದು ನಾನು ಹೇಳುವುದಿಲ್ಲ. ಯಾವ ಪಕ್ಷದವರಾದರೂ ಇರಬಹುದು. ತಾಲ್ಲೂಕು ಪಂಚಾಯಿತಿಯ ಮಸೂದೆಯನ್ನು ನಾವು ಪಾಸ್ ಮಾಡಿದ್ದೇವೆ, ಜಿಲ್ಲಾ ಪಂಚಾಯಿತಿಯ ಮಸೂದೆಯನ್ನು ನಾವು ಪಾಸ್ ಮಾಡಿದ್ದೇವೆ. ಈಗ ಜಿಲ್ಲಾ ಪಂಚಾಯಿತಿ ಅಸ್ತಿತ್ವಕ್ಕೆ ಬಂದ ತಕ್ಷಣ ಅಲ್ಲಿಗೆ ಒಬ್ಬ ಅಧ್ಯಕ್ಷ, ಅವನಿಗೆ ಇಂತಿಷ್ಟು ಜವಾಬ್ದಾರಿಗಳು, ಅವನಿಗೆ ಅಥಾರಿಟಿಗಳು, ಹಣಕಾಸಿನ ಜವಾಬ್ದಾರಿಗಳನ್ನು ಕೊಟ್ಟ ಮೇಲೆ ಈಗ ಆಟೊಮ್ಯಾಟಿಕಲಿ ಶಾಸಕರ ಕಾರ್ಯವ್ಯಾಪ್ತಿ ಕಡಿಮೆಯಾಗುತ್ತದೆ. ಆ ಇಂಜನಿಯರ್ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷ ಹೇಳಿದ ಮಾತನ್ನು ಕೇಳಬೇಕಾಗುತ್ತದೆ. ಆ ತಾಲ್ಲೂಕ್ ಪಂಚಾಯಿತಿಯ ಅಧ್ಯಕ್ಷ ಹೇಳಿದ್ದನ್ನು ಕೆಳಗಿನ ಅಧಿಕಾರಿ ಕೇಳಬೇಕಾಗುತ್ತದೆ. ಒಂದು ಪಕ್ಷ ಈ ತೊಂದರೆ ಎಲ್ಲಿ ಬರುವುದು? ನಮ್ಮ ಪಕ್ಷದವ ಜಿಲ್ಲಾಪಂಚಾಯಿತಿಯ ಅಧ್ಯಕ್ಷ, ಕಾಂಗ್ರೆಸ್ ಪಕ್ಷದವನು ಶಾಸಕನಾಗಿರುವುದು. ಅಥವಾ ಬಿಜೆಪಿ ಪಕ್ಷದವರು ಶಾಸಕ, ನಮ್ಮ ಪಕ್ಷದವನು ಜಿಲ್ಲಾ ಪಂಚಾಯಿತಿ ಅಧ್ಯಕ್ಷನಾಗಿರುವುದು. These are all internal implications. ಇದನ್ನು ನಾವೇನು ಮುಚ್ಚಿಟ್ಟುಕೊಂಡು ಮಾತನಾಡುವುದಿಲ್ಲ. ಜಿಲ್ಲಾಪಂಚಾಯಿತಿ ಅಧ್ಯಕ್ಷರಿಗೂ ನಮ್ಮ ಶಾಸಕರಿಗೂ ವ್ಯತ್ಯಾಸವಿದೆ. ನಾನು ಶಾಸಕರಿಗೆ ಹೇಳುವುದು ಇಷ್ಟೆ, ಎಂಥಾ ಅಧ್ಯಕ್ಷನಾಗಿದ್ದರೂ ಇಲ್ಲಿ ಬಂದು ಕುಳಿತುಕೊಳ್ಳುವಂತಿಲ್ಲ. This is a most supreme body. Atleast we have a right to sit here, you can talk about anything. ಆದರೆ ಆ ಜಿಲ್ಲಾ ಪಂಚಾಯಿತಿಗೆ ನೀನು ಇಷ್ಟಿಷ್ಟು ಕೆಲಸಗಳನ್ನು ಮಾಡಿಕೊಂಡು ಹೋಗಪ್ಪ ಎಂದು ಹೇಳಿದ್ದೇವೆ. ಹಾಗೆ ತಾಲ್ಲೂಕು ಪಂಚಾಯಿತಿಯವನಿಗೆ ನೀನು ಇಷ್ಟಿಷ್ಟು ಕೆಲಸಗಳನ್ನು ಮಾಡಿಕೊಂಡು ಹೋಗು ಎಂದು ಹೇಳಿದ್ದೇವೆ. ನಾನು ನಮ್ಮ ಶಾಸಕಾಂಗ ಪಕ್ಷದಲ್ಲೂ ಗುಪ್ತವಾಗಿ ಚರ್ಚೆ ಮಾಡಿದ್ದೇನೆ. ಈಗ ಅಲ್ಲಿ ದಾರಿ ತಪ್ಪಿದೆ, ಅಧಿಕಾರಿಗಳು ಮಿಸ್ ಬಿಹೇವ್ ಮಾಡುತ್ತಾರೆಂದು ಯಾರೋ ಕೇಳಿದರು. ಅಧಿಕಾರಿಗಳು ಮಿಸ್ ಬಿಹೇವ್ ಮಾಡುತ್ತಾರೆ ನಿಜ, ನಾನು ಸ್ವತಃ ಅನುಭವದಿಂದ ನೋಡಿದ್ದೇನೆ. ಮಾನ್ಯ ಅಧ್ಯಕ್ಷರೆ ಆ ಅಧಿಕಾರಿಗಳು ಎಂಥವರು ಎಂದರೆ, ಅವರು .ಇದೇ ಕೆಲಸವನ್ನು ಕಸಬು ಮಾಡಿಕೊಳ್ಳುತ್ತಲೇ, ಯಾವ ಪಕ್ಷದ ಸರ್ಕಾರವಿದ್ದರೂ, ಕೂಡ ಅವರು ಸುರಕ್ಷಿತವಾಗಿರತಕ್ಕಂಥ ಇಂತಿಷ್ಟು ಜನ most corrupt, most communal, most mischievous, ಅಂಥವರು ಕೆಲವರಿದ್ದಾರೆ. ಕೆಲವರು ಅಂಥವರು ಹೇಗೆಂದರೆ, ಉಳ್ಳಗಡ್ಡೆ ರಾಶಿಯಲ್ಲಿ ಎರಡು ಕೊಳೆತ ಉಳ್ಳಗಡ್ಡೆಯನ್ನು ಇಟ್ಟರೆ ಸಾಕು ಇಡೀ ಪೂರ್ತಿಯಾಗಿ ಎಲ್ಲವನ್ನು ಹಾಳು ಮಾಡುತ್ತದೆ. ಆ ರೀತಿ ಕೊಳತಿರುವವರನ್ನು ಕೆಲವರನ್ನು ತೆಗೆಯಬೇಕಾದರೆ, ಒಂದು, ಈಗ ಡಿಸಿಪ್ಲಿನರಿ ಮಿಷನರಿಯೆಲ್ಲಾ ಇದೆ. ಡಿಸಿಪ್ಲಿನರಿ ಆಕ್ಷನ್ ಮಾಡುತ್ತೇವೆ,

ಸಸ್ಪೆಂಡ್ ಮಾಡುತ್ತೇವೆ, ಅದು ಮಾಡುತ್ತೇವೆ, ಇದು ಮಾಡುತ್ತೇವೆ. ಅದಕ್ಕಿಂತ ಹೆಚ್ಚಾಗಿ, ನಾನು ಹೇಳುವುದು, ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷನ ಮಾತು ಅವನು ಕೇಳಲಿಲ್ಲವೆಂದರೆ, ಕೂಡಲೇ ಜಿಲ್ಲಾಪಂಚಾಯಿತಿಯ ಅಧ್ಯಕ್ಷರು ಕೇಳಲಿ ಅವರ ಮಾತು ಕೇಳದಿದ್ದರೆ ಆನಂತರ ಶಾಸಕರ ಹತ್ತಿರ ಬರಲಿ. ಆವಾಗ ಬೇಕಾದರೆ ಎಂ.ಎಲ್.ಎ. ಆಕ್ಷನ್ ತೆಗೆದುಕೊಂಡು ಇವನು ಇಂಥ ತಪ್ಪನ್ನು ಮಾಡಿ-ದ್ದಾನೆ, ಇವನಿಗೆ ಈ ರೀತಿಯ ರಕ್ಷಣೆಯನ್ನು ಕೊಡಕೂಡದೆಂದು ಬೇಕಾದರೆ, you have superior rights, superior in every thing constitutionally, legally ಆವಾಗ ಇಲ್ಲಿ ಹೇಳಬಹುದು ಅಥವಾ ಸಂಬಂಧಪಟ್ಟಂಥ ಮಂತ್ರಿಗೆ ಹೇಳಬಹುದು. ಅಲ್ಲಿ ಹಾಗೆ ರೆಕ್ಟಿಫೈ ಮಾಡಬೇಕೇ ಹೊರತು ಸ್ಥಳದಲ್ಲೇ ಹೋಗಿ ಅವರನ್ನು ಕರೆಯಿಸಿ ನಾನು ತೀರ್ಮಾನ ಮಾಡುವುದು ಸರಿಯಲ್ಲ. ಇನ್ನು ಭಡ್ತಿ ಮಿಸಲಾತಿಗೆ ಸಂಬಂಧಿಸಿದ್ದು ಇದೆ. ಹೀಗಾಗಿ ಕೋಜೆಂಟ್ರಿಕ್ಸ್ ಬಗ್ಗೆಯೂ ನಾನು ಹೇಳಿ ಹೇಳಿ ಸಾಕಾಗಿದೆ. ಮಾಜಿ ಶಾಸಕರಿಗೆ ಬೇಕಾದರೆ ಅದು ಎಷ್ಟಾಗುತ್ತದೆ, ಅವರನ್ನೆಲ್ಲಾ ಗುರುತಿಸಿ ಬಸ್ ಪಾಸ್‌ಗಳನ್ನು ಕೊಡಿಸೋಣ. ಇಲ್ಲಿ ಆ ಕಾನಸ್ಟಿಟ್ಯೂಷನ್ ಕ್ಲಬ್ ತರಹ ಮಾಡಬೇಕೆಂದು ಹೇಳಿ-ದ್ದೀರಿ ಅದನ್ನು ನಾನು ತತ್ವಶಃ ಒಪ್ಪಿದ್ದೇನೆ.

ಶ್ರೀ ಕೆ.ಎನ್. ಗದ್ದಿ:- ಆಶ್ರಯದ ಬಗ್ಗೆ ಹೇಳಲಿಲ್ಲ.

ಅಧ್ಯಕ್ಷರು:- ಒಂದು ನಿಮಿಷ ಕ್ಲಬ್ ಬಗ್ಗೆ ಮುಗಿಸಲಿ ನಂತರ ಆಶ್ರಯದ ಬಗ್ಗೆ ಹೇಳುತ್ತಾರೆ.

ಶ್ರೀ ಜೆ.ಹೆಚ್. ಪಟೇಲ್:- ಈಗ ಆಶ್ರಯದ ಬಗ್ಗೆ ಏನು ಮಾಡಬೇಕೆಂದು ವಿಚಾರ ಮಾಡು-ವುದಕ್ಕೆ ಒಂದು ಸಮಿತಿ ಮಾಡಿದೆ ಅವರು ಇನ್ನು ಒಂದು ಸಾರಿಯೂ ಕುಳಿತ್ತಿಲ್ಲ. ಕುಳಿತು ಸ್ವಲ್ಪ ಆಲೋಚನೆ ಮಾಡಿ ಹೇಳಲಿ. ಇಷ್ಟೆಲ್ಲಾ ಕೇಳಿದ ಮೇಲೂ ಮತ್ತೆ ಆಶ್ರಯ ಎನ್ನುತ್ತೀರಲ್ಲಾ. ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಸಂಬಂಧಸಿದಂತೆ ಅಲ್ಲಿ ಕಾನೂನನ್ನು ನೀವೇ ಮಾಡಿದ್ದು ಫಲಾನುಭವಿ-ಗಳನ್ನು ಗುರುತಿಸುವುದು ಗ್ರಾಮಸಭಾ ಎಂದು ಕಾನೂನು ಮಾಡಿದ್ದಲ್ಲವೇ?

ಶ್ರೀ ಸಯ್ಯದ್ ಜುಲ್ಫಿಕರ್ ಹಶ್ಮಿ:- ನಮ್ಮ ಗಿರಾಮ ಸಭಾ ಐಡೆಂಟಿಫೈ ಮಾಡಬೇಕೆಂದು ಮಾಡಿದ್ದುದು.

ಅಧ್ಯಕ್ಷರು:- ಅದು ಗಿರಾಮ ಸಭಾ ಅಲ್ಲಪ್ಪ, ಅದು ಗ್ರಾಮ ಸಭಾ.

ಶ್ರೀ ಜೆ. ಹೆಚ್. ಪಟೇಲ್:- ಮಾನ್ಯ ಅಧ್ಯಕ್ಷರೆ, ಇವರೇ ಕಾನೂನು ಮಾಡಿದ್ದುದು.

ಶ್ರೀ ಬಿ. ವಿ. ಶ್ರೀರಾಮರೆಡ್ಡಿ:- ಗ್ರಾಮ ಸಭಾ ಎಂದು ಮ್ಯಾಂಡೇಟರಿ ಮಾಡಿಲ್ಲ.

ಅಧ್ಯಕ್ಷರು:- ನಾನು ಹೇಳಿದ್ದುದು ಅದಲ್ಲ, ನಮ್ಮ ಹಶ್ಮಿಯವರು ಗಿರಾಮ ಸಭಾ ಎಂದು ಹೇಳಿ-ದರು, ಗಿರಾಮ ಸಭಾ ಅಲ್ಲ, ಅದು ಗ್ರಾಮ ಸಭಾ ಎಂದು ಹೇಳಿದೆ. ಗಿರಾಮ ಎಂದರೆ ಕೇಳಿಕೊಳ್ಳು-ವುದು.

ಶ್ರೀ ಜೆ.ಹೆಚ್. ಪಟೇಲ್:- ಅದನ್ನು ನೋಡೋಣ, ಅದನ್ನು ಎಕ್ಸಾಮಿನ್ ಮಾಡಿಸುತ್ತಿದ್ದೇನೆ. ಇನ್ನು ಕಾನ್‌ಸ್ಟಿಟ್ಯೂಷನ್ ಕ್ಲಬ್ ತರಹ ಮಾಡಬೇಕೆಂದು ಹೇಳಿದ್ದೀರಿ. ಈಗ ಅದರ ಬಿಲ್ಡಿಂಗ್

ಇತ್ಯಾದಿಗಳಿಗೆ ಸಂಬಂಧಿಸಿದಂತೆ ತಮ್ಮಲ್ಲಿ ಒಂದು ವಿಶೇಷವಾದ ವಿನಂತಿ, it will be under your custody once it is handed over to the speaker. ಈಗ ನಾವು ಅಲ್ಲಿ ಡೆಲ್ಲಿಯಲ್ಲಿ ಕಾನ್‌ಸ್ಟಿಟ್ಯೂಷನ್ ಕ್ಲಬ್ ಇರುವುದನ್ನು ನೋಡಿದ್ದೇನೆ, ಸ್ವಿಮ್ಮಿಂಗ್ ಪೂಲ್ ಇದೆ. ಆದರೆ ಇಲ್ಲಿ ಏನಾಗುತ್ತದೆಂದರೆ ಬರೀ ಶಾಸಕರು, ಅವರ ಸುಖವನ್ನು ಅವರು ನೋಡಿಕೊಂಡರಪ್ಪ ನಮ್ಮದನ್ನು ನೋಡಲಿಲ್ಲವೆಂದು ಹೇಳುವ ಕೋಟ್ಯಾಂತರ ಜನರಿದ್ದಾರೆ. ಆದರೂ ಕಲ್ಚರಲ್ ಡೆವಲಪ್‌ಮೆಂಟ್ ಅಥವಾ ನಮ್ಮಲ್ಲಿ ಹೊಸಬರು ಬಂದಿರುತ್ತಾರೆ, ಹೊಸದಾಗಿ ಅನುಭವವಿಲ್ಲದೇ ಇರತಕ್ಕಂಥ ಶಾಸಕರು ಬಂದಿರುತ್ತಾರೆ, ಅಂತಹವರಿಗೆ ಒಂದು ಕಲ್ಚರಲ್ ಸೆಂಟರ್ ಬೇಕಾಗುತ್ತದೆ. ಅಲ್ಲಿ ಬೇರೆ ಯಾವುದೇ ರೀತಿಯಿಂದ ಸೋಶಿಯಲ್ ಇವಿಲ್ ಎಂಟರ್ ಆಗದಂತೆ ನೋಡಿಕೊಳ್ಳತಕ್ಕಂಥ ಒಂದು ಸ್ಥಳ ಬೇಕಾಗುತ್ತದೆ. ಆಫ್ ಕೋರ್ಸ್ ರಿಕ್ರಿಯೇಷನ್, ಇಂಡೋರ್ ಗೇಮ್ಸ್ ಕಲ್ಚರಲ್ ಚಟುವಟಿಕೆಗಳಲ್ಲಿ ಫ್ಯಾಮಿಲಿ ಮೆಂಬರ್ಸ್ ಎಲ್ಲಾ ಹೋಗಿ ಕುಳಿತುಕೊಳುವುದಕ್ಕೆ ಶಾಸಕರಿಗೆ ಸಂಬಂಧಿಸಿದಂತೆ ಒಂದು ಸ್ಥಳ ಬೇಕೆಂದು ಹೇಳಿದ್ದೀರಿ. ಅದನ್ನು ನಾನು ಪಾಸಿಟೀವ್ ಆಗಿ ಹೇಗೆ ಮಾಡಬೇಕೆನ್ನುವುದನ್ನು ಈಗಾಗಲೇ ಯೋಚನೆ ಮಾಡುತ್ತಿದ್ದೇನೆ. ಇಷ್ಟನ್ನು ಹೇಳಿ ಕೊನೆಗೆ, ನಂಜೇಗೌಡರು ಏನೂ ಪ್ರಶ್ನೆಯನ್ನು ಕೇಳಲಿಲ್ಲ. ಏಕೆಂದರೆ, ಪ್ರಶ್ನೆಗೆ ತಕ್ಷಣ ಉತ್ತರ ಕೊಡುವಂಥ ಪ್ರಶ್ನೆಯನ್ನು ನೀವು ಕೇಳಲಿಲ್ಲ. answering to it, it is a very long range. ಈಗ ಒಂದನ್ನು ಒಪ್ಪುತ್ತೇನೆ. ನೀವು ನಿರೀಕ್ಷೆ ಮಾಡಿದಂತೆ ನಾನು, ನಮ್ಮ ಸರ್ಕಾರ 560 ಕೋಟಿ ರೂಪಾಯಿಗಳ ಸಾಲವನ್ನು ತೀರಿಸಿತು. ಒಂದು ವರ್ಷಕ್ಕೆ 1,30,000 ಮನೆಗಳನ್ನು ಕಟ್ಟಿಸಿದ್ದೇನೆ. ಹಾಗೆ ಸೋಷಿಯಲ್ ವೆಲ್‌ಫೇರ್‌ನಲ್ಲಿ ಈ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳು ಇವರಿಗೆ ಇಪ್ಪತ್ತೈದು ಹಾಸ್ಟೆಲ್ಸ್ ಕಟ್ಟಿಸಿದ್ದೇವೆ. ಈ ರೀತಿ ನಾನು ಗುಮಾಸ್ತರ ರೀತಿ ವರದಿಯನ್ನು ಹೇಳುವುದಕ್ಕೆ ಹೋಗಲಿಲ್ಲ. My intention was not to give ಎಲ್ಲರೂ ಕೊಟ್ಟಿದ್ದಾರೆ, ಯಾವ ವಿವರಗಳನ್ನು ಯಾರು ಕೊಟ್ಟಿಲ್ಲ? ಎಲ್ಲಾ ಇಲಾಖೆಯವರು ಕೊಟ್ಟಿದ್ದಾರೆ. ಅದರೊಳಗೆ ಕೇಳಬಾರದೆಂದು ನಾನು ಹೇಳುತ್ತಿಲ್ಲ I do agree I have not dealt with any particular programme because our programmes are same, priorities are all same. ದೇವೇಗೌಡರ ಸರ್ಕಾರಕ್ಕೆ ಏನು ಪ್ರಯಾರಿಟೀಸ್ ಇತ್ತೋ ಪಟೇಲ್ ಸರ್ಕಾರಕ್ಕೂ ಅದೇ ಪ್ರಯಾರಿಟೀಸ್ ಇದ್ದಾವೆ. ಪ್ರೋಗ್ರಾಮ್ಸ್‌ನಲ್ಲಿ ಆಕಸ್ಮಾತ್ ಏನು ದೋಷಗಳಾಗಿದ್ದಾವೆ ಅವನ್ನು ತಿದ್ದುತ್ತೇವೆ, ನಿಮ್ಮ ಸಲಹೆಗಳನ್ನು ಕೇಳುತ್ತೇವೆ.

ಅಧ್ಯಕ್ಷರು:- ಈಗ ಉತ್ತರ ಮುಗಿದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ದೇವೇಗೌಡರು ಹಾಗೂ ಪಟೇಲರ ವಿಚಾರಧಾರೆಯಲ್ಲಿ ವ್ಯತ್ಯಾಸವಿದ್ದಾಗ, ಪ್ರೋಗ್ರಾಮ್ಸ್‌ನಲ್ಲೂ ಸ್ವಲ್ಪ ವ್ಯತ್ಯಾಸವಾಗಬೇಕು.

ಶ್ರೀ. ವಾಟಾಳ್ ನಾಗರಾಜ್:- ಮುಖ್ಯಮಂತ್ರಿಗಳಾದ ಮಾನ್ಯ ಪಟೇಲರು ಶಾಸಕರಾಗಿ, ಮಂತ್ರಿಗಳಾಗಿ, ಉಪ ಮುಖ್ಯಮಂತ್ರಿಗಳಾಗಿ, ಮುಖ್ಯಮಂತ್ರಿಗಳಾಗಿದ್ದೀರಿ. ಆದರೆ ಈಗಿನ ಪರಿಸ್ಥಿತಿಯಲ್ಲಿ ನೀವು ಒಬ್ಬ ಶಾಸಕರೇ ಆಗಿದ್ದರೆ ಶಾಸಕರ ಪರಿಸ್ಥಿತಿ ಏನೆಂದು ನಿಮಗೆ ಅರ್ಥವಾಗುತ್ತಿತ್ತು. ನೀವು

ಮಂತ್ರಿಗಳಾಗಿದ್ದೀರಿ, ಉಪಮಂತ್ರಿಗಳಾಗಿದ್ದೀರಿ, ಮುಖ್ಯಮಂತ್ರಿಗಳಾಗಿದ್ದೀರಿ ಶಾಸಕರೆ ಆಗಿದಿದ್ದರೆ ಅರ್ಥ-ವಾಗುತ್ತಿತ್ತು. ನಾನು ಏತಕ್ಕೆ ಆ ಮಾತನ್ನು ಹೇಳಿದೆ ಎಂದರೆ, ಆಶ್ರಯ ಮನೆಗಳ ಬಗ್ಗೆ ನೀವು ಸ್ಪಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಿ, ಆಶ್ರಯ ಮನೆಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ.

ಅಧ್ಯಕ್ಷರು:- ಹೇಳಿದ್ದಾರಲ್ಲಾ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ವಾಟಾಳ್ ನಾಗರಾಜ್‌ರವರು ನನ್ನನ್ನು ಬಹಳ ಕಾಲ ಆಬ್ಸರ್ವ್ ಮಾಡಿದ್ದುದು ಶಾಸಕನಾಗಿಯೇ, ಮಂತ್ರಿಯಾಗಿ ದೂರವಾಗಿದ್ದೇನೆ.

8) ಪ್ರಕಟಣೆಗಳು

ಹೈದರಾಬಾದಿನಲ್ಲಿ ದಕ್ಷಿಣ ರಾಜ್ಯಗಳ ಶಾಸಕರ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆ.

ಅಧ್ಯಕ್ಷರು:- ಮಾನ್ಯ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನವೆಂಬರ್ ತಿಂಗಳಲ್ಲಿ 4, 5 ಮತ್ತು 6ನೇ ತಾರೀಖು ಈ ಮೂರು ದಿನಗಳ ಕಾಲ ನಾವು ಕಳೆದ ವರ್ಷ ಮಾಡಿದಂತೆ ಈ ಸಲ ಹೈದರಾಬಾದ್‌ನಲ್ಲಿ ದಕ್ಷಿಣ ರಾಜ್ಯಗಳ ಶಾಸಕರ ಸಾಂಸ್ಕೃತಿಕ ಮತ್ತು ಕ್ರೀಡಾಚಟುವಟಿಕೆಗಳ ಸಮಾವೇಶವನ್ನು ಏರ್ಪಾಟು ಮಾಡಿದ್ದೇವೆಂದು ಆಂಧ್ರಪ್ರದೇಶ ವಿಧಾನಸಭೆಯ ಅಧ್ಯಕ್ಷರು ನಮಗೆ ತಿಳಿಸಿದ್ದಾರೆ. ಕಳೆದ ಸಲ ನಮ್ಮ ಕ್ರೀಡಾಪಟುಗಳು ಕೊನೆಯ ಗಳಿಗೆಯಲ್ಲಿ ಮ್ಯಾಚ್ ಇದ್ದ ದಿವಸ ಎಲ್ಲರೂ ಬಟ್ಟೆ ಹಾಕಿಕೊಂಡು ಬಂದು ನಾನು ಆಡಬೇಕು ಎಂದು ಹೇಳಿದರು. ಇದರಿಂದ ನಮಗೆ ಅಷ್ಟು ಹೆಚ್ಚು ಗೌರವ ಬರಲಿಲ್ಲ. ಆಂಧ್ರದಲ್ಲಿ ಬಹಳ ಒಳ್ಳೆಯ ಕ್ರೀಡಾ ತಂಡ ಇದೆ. ಬೇರೆ ರಾಜ್ಯ-ಗಳಿಂದಲೂ ಕ್ರೀಡಾಪಟುಗಳು ಅಲ್ಲಿಗೆ ಬರುತ್ತಾರೆ. ದಕ್ಷಿಣ ರಾಜ್ಯಗಳ ಶಾಸಕರ ಸಾಂಸ್ಕೃತಿಕ ಮತ್ತು ಕ್ರೀಡಾಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ನಾನು ಮತ್ತು ನಮ್ಮ ಕಛೇರಿಯಲ್ಲಿ ಅದಕ್ಕೆ ಬೇಕಾದಂಥ ಎಲ್ಲಾ ವ್ಯವಸ್ಥೆ ಮಾಡಿಸುತ್ತೇನೆ. ಭಾಗವಹಿಸಲು ಇಚ್ಛೆಯುಳ್ಳವರು ಈಗಾಗಲೇ ಸ್ವಲ್ಪ ಪೂರ್ವಾಭ್ಯಾಸ ಮಾಡಿಕೊಳ್ಳಿ. ಇಲ್ಲಿಯೇ ಸೋತರೆ ಪರವಾಗಿಲ್ಲ, ಅಲ್ಲಿಗೆ ಹೋಗಿ ಬರಿಗೈಯಲ್ಲಿ ವಾಪಸ್ಸು ಬಂದರೆ ಬಹಳ ಅಪಮಾನವಾಗುತ್ತದೆ. ಆದ್ದರಿಂದ ಅಲ್ಲಿಗೆ ತಾವೆಲ್ಲಾ ಹೋಗಬೇಕಾದರೆ ಎಲ್ಲಾ ಶಾಸಕರು ಕ್ರೀಡಾಪಟುಗಳು ಯಾರಿದ್ದಾರೆ ಅವರಿಗೆಲ್ಲಾ ಸೂಚನೆ ಕೊಡುತ್ತಿದ್ದೇನೆ. ದಯಮಾಡಿ ನಮ್ಮ ಕರ್ನಾಟಕ ವಿಧಾನಸಭೆಯ ಗೌರವವನ್ನು ಉಳಿಸುವುದಕ್ಕೆ ನಿಮ್ಮ ಎಲ್ಲಾ ಕೆಲಸಕಾರ್ಯಗಳ ಜೊತೆಗೆ ನೀವು ಈ ಕಡೆಗೂ ಗಮನಕೊಡಬೇಕೆಂದು ಹೇಳಿ ಈ ಸೂಚನೆಯನ್ನು ಮಂಡಿಸುತ್ತಿದ್ದೇನೆ. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 9 ಗಂಟೆ 30 ನಿಮಿಷಕ್ಕೆ ಸೇರುವುದು.

(ಸದನವು ಸಂಜೆ **8** ಗಂಟೆ **42** ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ **8**ನೇ ಆಗಸ್ಟ್ **1996**ರ ಗುರುವಾರದಂದು ಬೆಳಿಗ್ಗೆ **9** ಗಂಟೆ **30** ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)